# ೨ನೇ ಭಾಗ.

## ಹುಟ್ಟುವಳಿ.

ಭೂರಚನೆಯು.—ಮುಂಬಯಿ ಕರ್ನಾಟಕ ಭಾಗದೊಳಗಿನ ಭೂಮಿಯ ರಚನೆಯು ಮುಖ್ಯವಾಗಿ ಅಗ್ನಿಶಿಲೆಗಳಿಂದಲೂ ವಿಕೃತಶಿಲೆಗಳಿಂದಲೂ ಆಗಿರುತ್ತದೆ; ಜಲಶಿಲೆಗಳು ಕೆಲವು ನಿಯಮಿತ ಪ್ರದೇಶಗಳಲ್ಲಿ ಮಾತ್ರ ದೊರೆಯುತ್ತವೆ.* ಭೂಗರ್ಭರಚನೆಯ ಸಂಬಂಧದಿಂದ ಈ ಕರ್ನಾಟಕ ಭಾಗದಲ್ಲಿ ದಕ್ಷಿಣ, ಉತ್ತರ, ಯೆಂಬೆರಡು ವಿಭಾಗಗಳನ್ನು ಮಾಡಬಹುದು. ದಕ್ಷಿಣ ವಿಭಾಗದಲ್ಲಿ, ಅಂದರೆ ಕಾನಡಾ ಧಾರವಾಡ ಜಿಲ್ಲೆಗಳಲ್ಲಿ, ಕಣಶಿಲೆ (ಇಮಾರತಿಯ ಕಲ್ಲಿನ ಜಾತಿ) ಶೀಣೀಕಲ್ಲು, ನಾನಾ ಪ್ರಕಾರದ ಸ್ಲೇಟಿನ ಜಾತಿಗಳು, ಹಸುರು ಕಲ್ಲು, ವಜ್ರದುಂಡಿ, ಉಸುಬಿನ ಕಲ್ಲು, ಇವೇ ನೆಲದೊಳಗೆ ವಿಶೇಷವಾಗಿ ದೊರೆಯುತ್ತವೆ. ಹಸುರು ಕಲ್ಲು, ವಜ್ರದುಂಡಿ, ಇವೆರಡೂ ವೊಂದಕ್ಕೊಂದು ಕೂಡಿ ಪಾವಟಿಗೆಗಳಂಥ ರಚನೆಯನ್ನು ಉಂಟುಮಾಡಿರುತ್ತವೆ. ಅದಕ್ಕೆ ಇಂಗ್ಲಿಷದಲ್ಲಿ "ಟ್ರಾಪ್" ಎಂಬ ಹೆಸರುಂಟು. ಈ ಟ್ರಾಪ ಶಿಲೆಗಳು ಸಹ್ಯಾದ್ರಿಯಲ್ಲಿಯೂ ಬೇರೆ ಗುಡ್ಡಗಳಲ್ಲಿಯೂ ಬಹು ಸ್ಪಷ್ಟವಾಗಿ ಕಾಣಿಸುತ್ತದೆ. ಉತ್ತರ ವಿಭಾಗದಲ್ಲಿ ಅಂದರೆ ಬೆಳಗಾವಿ ವಿಜಾಪುರ ಜಿಲ್ಲೆಗಳಲ್ಲಿ, ಶೀಣೀಕಲ್ಲು, ಬೆಣಚಿ, ಸುಣ್ಣದ ಕಲ್ಲು, ಉಸುಬಿನ ಕಲ್ಲು, ಟ್ರಾಪಶಿಲೆಗಳು, ವಿಶೇಷವಾಗಿ ದೊರೆಯುತ್ತವೆ. ಮಲಾಪಹಾರಿ, ಘಟಪ್ರಭಾ, ಇವೆರಡುಗಳ ನಡುವೆ ಶೀಣೀಕಲ್ಲು ವಿಶೇಷ; ಘಟಪ್ರಭಾ, ಕೃಷ್ಣಾ, ಇವೆರಡುಗಳ ನಡುವೆ ಬೆಣಚಿ ಕಲ್ಲು, ಸುಣ್ಣದ ಕಲ್ಲು, ಉಸುಬಿನ ಕಲ್ಲು ವಿಶೇಷ; ಕೃಷ್ಣೆಯ ಉತ್ತರದಲ್ಲಿ ಟ್ರಾಪಶಿಲೆಗಳೇ ಮುಖ್ಯ. ಟ್ರಾಪಶಿಲೆಗಳಿದ್ದಲ್ಲಿ ನೆಲವು ತಗ್ಗು ದಿನ್ನೆ ಬಹಳ, ಭೂಮಿ ಬೆಳೆಯುಳ್ಳದ್ದಲ್ಲ.

## ಖನಿಜಗಳು.

ಚಿನ್ನವು.—ಬುನಾದಿಯಲ್ಲಿ ಧಾರವಾಡ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಚಿನ್ನವು ಬಹಳ ದೊರೆಯುತ್ತಿತ್ತೆಂದು ಹೇಳುತ್ತಾರೆ. ಗದಗ ತಾಲೂಕಿನಲ್ಲಿ ಇರುವ ಕಪೋತ ಗುಡ್ಡದಲ್ಲಿ ಬಹು ಜನರು ಪೂರ್ವಕಾಲದಲ್ಲಿ ಬಹಳ ಚಿನ್ನವನ್ನು ಸಂಪಾದಿಸಿದ ಬಗ್ಗೆ ನಾನಾ ಪ್ರಕಾರದ ಕಥೆಗಳನ್ನು ಜನರು ಹೇಳುತ್ತಾರೆ. ಈಗ ಕಪೋತ ಗುಡ್ಡದಿಂದ ಹರಿಯುವ ಡೋಣಿ ಮುಂತಾದ ತೊರೆಗಳ ಮಳಲಿನಲ್ಲಿ ಮಾತ್ರ ಚಿನ್ನದ ರಜಗಳು ಅಲ್ಪ

---

* ಅಗ್ನಿಯ ವ್ಯಾಪಾರದಿಂದ ಹುಟ್ಟಿದ ಶಿಲೆಗಳು ಅಗ್ನಿಶಿಲೆಗಳು. ಇವು ಮುದ್ದೆಗಲ್ಲುಗಳು, ಅಂದರೆ ಇದಕ್ಕೆ ಪದರುಗಳಿಲ್ಲ; ಅಲ್ಪ ಸ್ವಲ್ಪ ಮಿಂಚು ಇರುತ್ತದೆ. ಇಮಾರತಿಯ ಕರಿಕಲ್ಲು, ಹಸುರು ಕಲ್ಲು, ವಜ್ರದುಂಡಿ (ಬಾಸಾಲ್ಟ), ಈ ಜಾತಿಯ ಶಿಲೆಗಳು. ನೀರಿನ ಬುಡದಲ್ಲಿ ಹುಟ್ಟಿದ ಶಿಲೆಗಳು ಜಲಶಿಲೆಗಳು. ಇವು ವೊಂದರ ಮೇಲೊಂದುಗಳಿಗೆ ಹಾಕಿದ ಹಾಗೆ ಥರ ಹಿಡಿದು ಕೂತಿರುತ್ತವೆ, ಇವಕ್ಕೆ ಮಿಂಚು ಇರುವದಿಲ್ಲ. ಪದರುಳ್ಳ ಹಾಸಿಗೆಗಲ್ಲು, ಸ್ಲೇಟು, ಉಸುಬಿನ ಕಲ್ಲು, ಸುಣ್ಣದ ಕಲ್ಲು, ಈ ಜಾತಿಯ ಶಿಲೆಗಳು. ವಿಕೃತ ಶಿಲೆಗಳಿಗೆ ತೆಳ್ಳಗಿನ ಥರಗಳಿರುವದಲ್ಲದೆ ಮಿಂಚು ಸಹ ಇರುವದು. ಅಭ್ರಕ, ಅರದಾಳ, ಶೀಣೀ ಕಲ್ಲು(ಸ್ನೈಸ), ಈ ಜಾತಿಯ ಶಿಲೆಗಳು.

ಸ್ವಲ್ಪವಾಗಿ ದೊರೆಯುತ್ತವೆ. ಕೋಡ, ರಾಣೀ ಬಿನ್ನೂರೂ ತಾಲೂಕುಗಳಲ್ಲಿಯ ಪ್ರವಾಹಗಳಲ್ಲಿಯೂ, ಚಿನ್ನ ಮುಳಗುಂದದ ಗುಡ್ಡದಲ್ಲಿಯೂ ಚಿನ್ನದ ಕಣಗಳು ಉಸುಬಿನಲ್ಲಿ ದೊರೆಯುತ್ತವೆ. ಜಾಲಗಾರರು ಬಹು ಶ್ರಮದಿಂದ ಇಂಥಾ ರಜವನ್ನು ವಿಂಗಡಿಸಿ ತೆಗಿದರೆ, ಅವರಿಗೆ ದಿನದ ಕೂಲಿ ಸಹ ಪೂರಾ ಹೊಟ್ಟೆ ತುಂಬುವಷ್ಟು ದೊರೆಯುವದಿಲ್ಲೆಂದು ತಿಳಿದದೆ. ಸರಕಾರದವರು ಸನ್ನ ೧೮೩೯ರಿಂದ ೧೮೭೪ರ ವರೆಗೆ ಬೇರೆ ಬೇರೆ ಕಾಲಗಳಲ್ಲಿ ಖಣಿಗಳ ಕೆಲಸದಲ್ಲಿ ನಿಪುಣರಾದಂಥ ಬೇರೆ ಬೇರೆ ಶೋಧಕ ಜನರನ್ನು ಈ ಚಿನ್ನದ ಭೂಮಿಯ ಪ್ರದೇಶಕ್ಕೆ ಕಳಿಸಿ ಶೋಧ ಮಾಡಿಸಿದರು; ಆದರೆ ಖಣಿಯನ್ನು ಅಗಿಯತಕ್ಕಷ್ಟು ಚಿನ್ನವು ಈ ಪ್ರದೇಶದಲ್ಲಿ ದೊರೆಯುವ ಸಂಭವವೆಷ್ಟು ಮಾತ್ರವೂ ಇಲ್ಲೆಂದು ಮನಗಂಡು ಆ ಕೆಲಸವನ್ನು ಬಿಟ್ಟು ಬಿಟ್ಟರು.

ಬೆಳಗಾವೀ ಜಿಲ್ಲೆಯ ಕೆಲವು ಗುಡ್ಡಗಳ ವಾರೆಗಳಲ್ಲಿ ಚಿನ್ನದ ಮಣ್ಣು ದೊರೆಯುತ್ತದೆ. ಸಂಪಗಾವಿಯ ಹತ್ತರ ಮಲಾಪಹಾರಿಗೆ ಕೂಡುವ ಪ್ರವಾಹಗಳಲ್ಲಿಯೂ ಬಾದಾಮಿಯ ಬಳಿಯಲ್ಲಿ ಮಲಾಪಹಾರಿಯ ಮಳಲಿನಲ್ಲಿಯೂ ಚಿನ್ನದ ರಜಗಳು ದೊರೆಯುತ್ತವೆಂದು ಹೇಳುತ್ತಾರೆ.

ಕಬ್ಬಿಣ.—ಇದು ಬೇರೆ ಬೇರೆ ಕಡೆಯಲ್ಲಿ ಹೇರಳವಾಗಿ ದೊರೆಯುತ್ತದೆ. ಕಾನಡಾ ಜಿಲ್ಲೆಯೊಳಗಿನ ಸಹ್ಯಾದ್ರಿಯ ಭಾಗದಲ್ಲಿಯೂ ಹೊನ್ನಾವರದ ಹತ್ತರ ಇರುವ ಬಸವರಾಜದುರ್ಗವೆಂಬ ನಡುಗಡ್ಡೆಯಲ್ಲಿಯೂ ಕಬ್ಬಿಣದ ಅದುರುಗಳು ವಿಪುಲವಾಗಿ ದೊರೆಯುತ್ತವೆ. ಪೂರ್ವಕಾಲದಲ್ಲಿ ಸಹ್ಯಾದ್ರಿಯ ಮೇಲೆ ಕಬ್ಬಿಣ ತೆಗಿಯುವ ಕುಲಿಮೆಗಳಿದ್ದವರ ಕುರುಹುಗಳು ಈಗ್ಯೂ ಇರುತ್ತವೆ. ಆದರೆ ಈಗ ಈ ಕುಲಿಮೆಗಳು ಯೆಲ್ಲಿಯೂ ನಡಿಯುವದಿಲ್ಲ. ಧಾರವಾಡ ಜಿಲ್ಲೆಯಲ್ಲಿ ಬಹುತರ ಯೆಲ್ಲ ಕಡೆಯಲ್ಲಿಯೂ ಕಬ್ಬಿಣದ ಕಲ್ಲುಗಳು ಬಹಳ ದೊರೆಯುತ್ತವೆ. ಕಿತ್ತೂರಿನಿಂದ ಹುಬ್ಬಳ್ಳಿಯ ವರೆಗೆ ನೆಲದೊಳಗಿನ ಯಾವತ್ತು ಶಿಲೆಗಳಲ್ಲಿ ಹೆಚ್ಚಾಗಲಿ ಕಡಿಮೆಯಾಗಲಿ ಕಬ್ಬಿಣವು ಮಿಶ್ರವಾಗಿರುತ್ತದೆ. ಕಲಘಟಗೀ ತಾಲೂಕಿನಲ್ಲಿ ಗುಳಿಗಿ ಯೆಂಬ ಗ್ರಾಮದಲ್ಲಿಯೂ ಧಾರವಾಡದ ಬಳಿಯಲ್ಲಿರುವ ತೇಗೂರೆಂಬ ಹಳ್ಳಿಯಲ್ಲಿಯೂ ಕಬ್ಬಿಣ ತೆಗೆಯುವ ಕುಲಿಮೆಗಳು ಈಗ್ಯೂ ನಡಿಯುತ್ತವೆ. ಆದರೆ ವಿಲಾಯತಿಯ ಕಬ್ಬಿಣವು ಬಹಳ ಅಗ್ಗವಾಗಿ ದೊರೆಯುವ ಕಾರಣ ಈ ಕುಲಿಮೆಗಳನ್ನು ಇಟ್ಟವರಿಗೆ ಹೇಳತಕ್ಕಷ್ಟು ಲಾಭವಾಗುವದಿಲ್ಲ. ಪೂರ್ವಕಾಲದಲ್ಲಿ ಧಾರವಾಡ ಪ್ರಾಂತದಲ್ಲಿ ಬಹಳ ಕುಲಿಮೆಗಳಿದ್ದವೆಂದು ಹೇಳುತ್ತಾರೆ. ಕಪೋತ ಗುಡ್ಡದ ನೆರೆಯ ಕೆಲವು ಪ್ರದೇಶಗಳಲ್ಲಿ ಚಿನ್ನದ ಸಂಗಡ ಕಬ್ಬಿಣವೂ ಮ್ಯಾಂಗನೀಜೆಂಬ ಲೋಹವೂ ದೊರೆಯುತ್ತವೆ. ಇದೇ ಮೇರೆಗೆ ಬೆಳಗಾವಿಯ ನೆರೆಯಲ್ಲಿ ಕಾನೂರು, ಪಾಟನೆ, ರಾಮಘಟ್ಟ, ಮುಂತಾದ ಸ್ಥಳಗಳಲ್ಲಿಯೂ, ಗೋಕಾವಿಯ ನೆರೆಯಲ್ಲಿ ಕೈತ್‌ನಾಳ, ತಾವಜಿಯೆಂಬಲ್ಲಿಯೂ ಪೂರ್ವದಲ್ಲಿ ಕಬ್ಬಿಣ ತೆಗೆಯುವ ಕುಲಿಮೆಗಳಿದ್ದವು. ಕಲಾದಗಿಯ ನೆರೆಯಲ್ಲಿ ಜೈನಮಟ್ಟಿ, ಸಿದ್ದಾಪುರ, ಅಕಿಮರಡಿ, ಎಂಬ ಗ್ರಾಮಗಳಲ್ಲಿಯೂ, ಹುನಗುಂದದ ನೆರೆಯಲ್ಲಿ ಸಿದ್ದನಾಳ, ಬೆನಕನವಾಡಿ, ಎಂಬ ಗ್ರಾಮಗಳಲ್ಲಿಯೂ, ಬಾದಾಮಿಯ ನೆರೆಯಲ್ಲಿ

ಹಲಗೇರಿ, ರಾಘಾಪುರ, ಎಂಬ ಗ್ರಾಮಗಳಲ್ಲಿಯೂ ಕಬ್ಬಿಣ ತೆಗಿಯುವ ಕುಲಿಮೆಗಳು ಅಲ್ಪ ಸ್ವಲ್ಪವಾಗಿ ಈಗ್ಯೂ ನಡಿಯುತ್ತವೆ. ಆಕಿಮರಡಿ, ಬೆನಕನವಾಡಿಗಳಲ್ಲಿ ಹುಟ್ಟುವ ಒಕ್ಕಲತನದ ಸಾಮಾನುಗಳಿಗೆ ತಕ್ಕ ಮಟ್ಟಿಗೆ ಚನ್ನಾಗಿ ಬೆಲೆ ಬರುತ್ತದೆ.

ಮೇಲಿನ ವಿವರದಿಂದ ಈ ಕರ್ನಾಟಕ ಭಾಗದಲ್ಲಿ ಕಬ್ಬಿಣವು ಬಹಳ ಕಡೆಯಲ್ಲಿ ಸಮೃದ್ಧಿಯಾಗಿ ದೊರೆಯುತ್ತದೆಂದು ಸ್ಪಷ್ಟವಾಗುತ್ತದೆ. ಆದರೆ ವಿಲಾಯತಿಯ ಕಮ್ಮಾರರು ಅಲ್ಪಶ್ರಮದಿಂದ ಖಂಡಗಗಟ್ಲೆಯಿಂಥ ತಮ್ಮ ದೇಶದಲ್ಲಿ ಕಬ್ಬಿಣವನ್ನು ಖಣಿಯಿಂದ ತೆಗಿದು, ಈ ದೇಶಕ್ಕೆ ಅಗ್ಗ ಬೆಲೆಯಿಂದ ಮಾರಾಟಕ್ಕೆ ಕಳಿಸುವ ಕಾರಣ ಕಬ್ಬಿಣ ತೆಗಿಯುವ ಹೋರೆಯು ಈ ದೇಶದಲ್ಲಿ ಬಹುತರ ಯೆಲ್ಲ ಕಡೆಯಲ್ಲಿ ನಿಂತು ಹೋಗಿರುತ್ತದೆ. ಆದರೆ ವಿಲಾಯತಿಯ ಅತ್ಯುತ್ತಮ ಕಬ್ಬಿಣವು ಈ ಪ್ರಾಂತದಲ್ಲಿ ಹುಟ್ಟುವ ಕಬ್ಬಿಣಕ್ಕೆ ಹೊಂದುವದಿಲ್ಲ. ವಿಲಾಯತಿಯ ಅತಿ ಮಿದುವಾದ "ಸಿಕಿ" ಕಬ್ಬಿಣವೆಂಬ ಕಬ್ಬಿಣಕ್ಕೆ ಸಹ ಸ್ವಲ್ಪ ಕಾವು ಕಡಿಮೆಯಾದರೆ ಹೊಡಿಯುವಾಗ ಅದು ವೊಡಿಯುತ್ತದೆ. ಆದರೆ ಈ ದೇಶದ ಕಬ್ಬಿಣವನ್ನು ಕಾವು ಪೂರಾ ಇಳಿದ ಮೇಲೆ ಸಹ ಹೊಡಿದು ನಿಗಚ ಬಹುದು. ಆದಾಗ್ಯೂ ಸಾಧಾರಣ ವ್ಯವಹಾರದ ಆಯುಧಗಳಿಗೆ ಅಷ್ಟು ಮೇಲಾದ ಕಬ್ಬಿಣವು ಬೇಕಾಗುವದಿಲ್ಲಾದಕಾರಣ ಜನರು ವಿಲಾಯತಿಯ ಅಗ್ಗದ ಕಬ್ಬಿಣವನ್ನೇ ಹೆಚ್ಚಿಗೆ ಕೊಳ್ಳುವರು.

ನಮ್ಮ ಕಮ್ಮಾರರ ಕುಲಿಮೆಗಳನ್ನು ಮಾಡಲಿಕ್ಕೆ ಚಾತುರ್ಯ, ಕೌಶಲ್ಯ, ಶಾಸ್ತ್ರಜ್ಞಾನಗಳೇನು ಪ್ರಯೋಜನವಿಲ್ಲ. ತೀರ ಕಾಡು ಮನುಷ್ಯನು ಸಹ ವೊಮ್ಮೆ ನೋಡಿದ ಕೂಡಲೆ ಅಂಥಾ ಕುಲಿಮೆಯನ್ನು ಮಾಡಿ ಕೊಳ್ಳಬಹುದು. ಅದರ ವಿವರ ಹ್ಯಾಗಂದರೆ— ಸುಮಾರು ೦ ಮೊಳ ಯೆತ್ತರ, ೩ ಮೊಳ ಚಚ್ಚೌಕು, ಆದದ್ದೊಂದು ಕಟ್ಟೆಯನ್ನು ಕಟ್ಟುವರು. ಆ ಕಟ್ಟೆಯ ವೊಂದು ಬದಿಯ ಮಧ್ಯ ಭಾಗದಲ್ಲಿ ಸುಮಾರು ವೊಂದು ಮೊಳ ಅರ್ಧ ವರ್ತುಲಾಕೃತಿಯ ಹರಿನಾಳಿಗೆಯಂತೆ ನೆಗ್ಗನ್ನು ಕಟ್ಟೆಯೊಳಗೆ ಬುಡದಿಂದ ಮೇಲಿನ ವರೆಗೆ ಹಾಕುವರು. ಅದರ ಬುಡದಲ್ಲಿ ಗೇಣುದ್ದ ಸಣ್ಣ ತಗ್ಗು ಮಾಡಿಟ್ಟು, ಅದರ ತಲೆಯ ಮೇಲೆ ಕಟ್ಟೆಗಿಂತ ಗುದ್ದು ಮೊಳ ಎತ್ತರವಾಗಿ ಅರ್ಧ ವರ್ತುಲಾಕೃತಿಯ ಥರ ಕಟ್ಟಿ, ಯೆರಡು ದೊಡ್ಡ ತಿದಿಗಳನ್ನು ಕಟ್ಟೆಯ ಮೇಲೆ ಹಚ್ಚಲಿಕ್ಕೆ ಬರುವ ಹಾಗೆ ಆ ಥರದೊಳಗೆ ಯೆರಡು ಮುತಿಗಳನ್ನು ಹಾಕಿಡುವರು. ಇದು ಕುಲಿಮೆಯಾಯಿತು. ಕಬ್ಬಿಣದ ಕಲ್ಲುಗಳನ್ನು ಛಕಡಿಯ ಮೇಲೆ ತಂದು ವೊಡಿದು ಸಣ್ಣ ಹರಳುಗಳನ್ನು ಮಾಡುವರು. ತರುವಾಯ ಭಟ್ಟಿಯನ್ನು ಯೇರಿಸುವಾಗ, ಕಟ್ಟೆಯೊಳಗಿನ ಅರ್ಧ ವರ್ತುಳಾಕಾರವಾದ ನೆಗ್ಗಿಗೆ ಹೊಂದಿಸಿ, ಉಳಿದ ಅರ್ಧ ಭಾಗವನ್ನು ಕಟ್ಟೆಯ ಹೊರಬದಿಯಲ್ಲಿ ಬೆಂಕಿಯೊಳಗೆ ಕರಗದಂಥ ಅರ್ಲಿನ ಥರ ಹಾಕಿ ವರ್ತುಳಾಕಾರವಾದ ಗಳಿಗೆಯಂಥ ಪೊಳ್ಳು ಪ್ರದೇಶವನ್ನು ಪೂರಾ ಮಾಡಿಕೊಳ್ಳುವರು. ಈ ಅರ್ಲಿನ ಥರದ ಮೇಲ್ತುದಿಯಾದರೂ ಕಟ್ಟೆಯೊಳಗಿನ ಥರದಂತೆ ಗುದ್ದು ಮೊಳ ಯೆತ್ತರವಾಗಿ ಇರುವದು. ಅದರಿಂದ ಆ ಗಳಿಗೆಯಂಥ ಪೊಳ್ಳು ಪ್ರದೇಶದ ಬಾಯಿಯು ಕಟ್ಟೆಯ ಮೇಲೆ ಗುದ್ದು ಮೊಳ ಯೆತ್ತರವಾಗುವದು. ಇಷ್ಟಾದ ಬಳಿಕ ಆ ಪೊಳ್ಳಿನೊಳಗೆ ಇದ್ದಲಿಯನ್ನು ತುಂಬಿ ಅದರ ಬಾಯಿಗೆ ವೊಂದು

ಅರ್ಧ ಹರಿವೆಯ ಕಂಟವನ್ನು ಹಾಕಿ ಆ ಕಂಟದ ಕೊಪ್ಪರಿಗೆಯೊಳಗೆ ಇದ್ದಲಿಯ ಪುಡಿಯೊಳಗೆ ಕಬ್ಬಿಣದ ಕಲ್ಲಿನ ಹರಳುಗಳನ್ನು ಹಾಕಿ ಮೇಲೆ ಮತ್ತೆ ಇದ್ದಲಿಯನ್ನು ವೊಟ್ಟುವರು. ಬಳಿಕ ಆ ಇದ್ದಲಿಗೆ ಬೆಂಕಿಯ ಹಾಕಿ ಹಿಂದೆ ಹೇಳಿದ ಯೆರಡು ಮುಶಿಗಳಲ್ಲಿ ಯೆರಡು ತಿದಿಗಳ ಕೊಳಿವೆಗಳನ್ನು ಶೇರಿಸಿ, ಕಟ್ಟೆಯ ಮೇಲೆ ಇಬ್ಬರು ಮನುಷ್ಯರು ಕೂತು ಆ ತಿದಿಗಳನ್ನು ಊದುವರು. ಈ ಪ್ರಕಾರ ಬೆಳಿಗಿನಿಂದ ಮಧ್ಯಾಹ್ನದ ವರೆಗೆ ಅವೆರಡೂ ತಿದಿಗಳು ಏಕಪ್ರಕಾರವಾಗಿ ಸಾಗುತ್ತವೆ. ತಿದಿ ಊದುವವರು ದಣಿದರೆ ಬೇರೆ ಇಬ್ಬರು ಆ ಕೆಲಸ ಮಾಡುವರು. ಕೊಪ್ಪರಿಗೆಯೊಳಗಿನ ಇದ್ದಲಿ ಸುಟ್ಟು ಹರಳುಗಳು ಪೊಳ್ಳಿನೊಳಗೆ ಇಳಿಯುತ್ತ ಹೋದ ಹಾಗೆ ಆಗಾಗ್ಗೆ ಹೊಸ ಇದ್ದಲಿಯನ್ನು ಹಾಕುತ್ತ ಹೋಗುವರು. ಈ ಪ್ರಕಾರ ಸುಮಾರು ೮ ತಾಸು ಕಾವು ಕೊಡಲು, ಆ ಹರಳುಗಳೆಲ್ಲ ಕರಗಿ, ಕಬ್ಬಿಣದ ರಸವು ಬೇರೆಯಾಗಿ ಕೆಳಗಿನ ಕುಣಿಯೊಳಗೆ ಹೋಗಿ ನಿಲ್ಲುವದು. ಬಳಿಕ ಹಸೆ ಅರ್ಲಿನ ಥರವನ್ನು ವೊಡಿದು ಕುಣಿಯೊಳಗಿನ ಕಬ್ಬಿಣವನ್ನು ಸ್ವಲ್ಪ ಆರಬಿಟ್ಟು ಇಕ್ಕಳದಿಂದ ಯೆತ್ತಿ ತೆಗಿದು, ಬಡಿಗಲ್ಲಿನ ಮೇಲಿಟ್ಟು, ನಾಲ್ಕಾರು ಜನರು ಸುತ್ತುಮುತ್ತು ನಿಂತು ಗಡುತರವಾದ ಸುತ್ತಿಗೆಗಳಿಂದ ಆ ಕಬ್ಬಿಣವನ್ನು ವೊಳಿತಾಗಿ ಬಡಿಯುವರು. ಅದರಿಂದ ಅದರೊಳಗೆ ಉಳಿದ ಕಸರು ಯಾವತ್ತು ಹಾರೀ ಹೋಗಿ, ಶುದ್ಧವಾದ ಮಿದು ಕಬ್ಬಿಣವಾಗುವದು. ಬಳಿಕ ಅದನ್ನು ಮತ್ತೆ ಕಾಸಿ, ಕೊಡ್ಲಿ, ಗುದ್ದಲಿ, ಕುಡ, ಕುಳ, ಮುಂತಾದ ಆಯುಧಗಳನ್ನು ಮಾಡುವರು. ಇಷ್ಟೆಲ್ಲ ಕೆಲಸವನ್ನು ನಡಿಸಲಿಕ್ಕೆ ೭, ೮ ಆಳು, ೨ ಯೆತ್ತು, ೧ ಛಕ್ಕಡಿ, ಇಷ್ಟು ಸಾಹಿತ್ಯ ಬೇಕಾಗುವದಲ್ಲದೆ, ಇದ್ದಲಿಯ ವೆಚ್ಚ ಬೇರೆ. ಇಷ್ಟೆಲ್ಲ ವೆಚ್ಚದಿಂದ ಯೆರಡು ದಿನಕ್ಕೊಮ್ಮೆ ಕುಲಿಮೆ ಸಾಗಿ, ಅದು ಸಾಗಿದ ದಿವಸ ಸುಮಾರು ೬೦ ಶೇರು ಕಬ್ಬಿಣ ಹೊರಡುವದು.

ಬೆಳ್ಳಿ, ತಾಮ್ರ.— ಇವು ಕಪೋತ ಗುಡ್ಡದಲ್ಲಿ ಮಾತ್ರ ಚಿನ್ನದ ಸಂಗಡ ಮಿಶ್ರವಾಗಿ ಅಲ್ಪ ಪ್ರಮಾಣದಿಂದ ದೊರೆಯುತ್ತವೆ. ಬೇರೆ ಯಲ್ಲಿಯೂ ದೊರೆಯುವದಿಲ್ಲ.

ಹವಳ.— ಕಾರವಾಡದ ಬಳಿಯಲ್ಲಿ ಸಮುದ್ರ ದಂಡೆಯಲ್ಲಿ ಹವಳದ ಬಂಡೆಗಳಿರುತ್ತವೆ. ಅವುಗಳ ತುಂಡುಗಳನ್ನು ಸುಟ್ಟರೆ ಸುಣ್ಣವಾಗುತ್ತದೆ. ಆದರೆ ಆ ಸುಣ್ಣವು ಗಚ್ಚಿನ ಕೆಲಸಕ್ಕೆ ಬರುವದಿಲ್ಲ.

ಗೋಮೇದ.— ಬಾದಾಮಿಯ ಈಶಾನ್ಯದಲ್ಲಿ ಯೆಂಟು ಮೈಲಿನ ಮೇಲೆ ಹನಮಾಪುರವೆಂಬಲ್ಲಿ ಮಧ್ಯಮ ಪ್ರತಿಯ ಗೋಮೇದ ಜಾತಿಯ ಹರಳುಗಳು ದೊರೆಯುತ್ತವೆ. ಕೃಷ್ಣೆಯ ಪ್ರವಾಹದಲ್ಲಿಯೂ ಕೆಲ ಕೆಲವು ಕಡೆಯಲ್ಲಿ ಈ ಹರಳುಗಳು ದೊರೆಯುವದುಂಟು.

ಉಪ್ಪು ಸೋರುಪ್ಪು.— ಪೂರ್ವದಲ್ಲಿ ಕಾನಡಾ ಜಿಲ್ಲೆಯಲ್ಲಿ ಸಮುದ್ರ ದಂಡೆಯ ಮೇಲೆ ಸಮುದ್ರದ ನೀರಿನಿಂದ ಬಹಳ ಕಡೆಯಲ್ಲಿ ಉಪ್ಪಾರ ಜನರು ಉಪ್ಪು ತೆಗಿಯುತ್ತಿದ್ದರು. ಆದರೆ ವೊಳಗಡೆಯಲ್ಲಿ ಸರಕಾರದವರು ಉಪ್ಪಿನ ಜಕಾತೀ ಕೂಡ್ರಿಸಿದ್ದರಿಂದ ಹೊನ್ನಾವರ, ಕುಮಟಾ, ಕಾರವಾಡ, ಮುಂತಾದ ಸ್ವಲ್ಪ ಸ್ಥಳಗಳಲ್ಲಿ ಮಾತ್ರ ಈಗ ಉಪ್ಪು ಹುಟ್ಟುತ್ತದೆ. ಆದರೂ ಸಾವಿರಾರು ಖಂಡಗ ಉಪ್ಪು ಪ್ರತಿ ವರ್ಷ ಈ ಜಿಲ್ಲೆಯಿಂದ

ಮಾರಾಟಕ್ಕೆ ಹೋಗುತ್ತದೆ. ಇಲ್ಲಿ ಹುಟ್ಟುವ ಉಪ್ಪು ಬೆಳ್ಳಗಿರುತ್ತದೆ; ಆದರಲ್ಲಿ ಮೈಲು ಇರುವದಿಲ್ಲ. ವಿಜಾಪುರ ಜಿಲ್ಲೆಯಲ್ಲಿಯೂ ಡೋಣೆಯ ದಂಡೆಯ ಮೇಲೆ ಪೂರ್ವದಲ್ಲಿ ಮಣ್ಣುಪ್ಪು ಬಹಳ ಹುಟ್ಟುತ್ತಿತ್ತು. ಈಗ ಯಾವತ್ತು ಉಪ್ಪಿನ ಮೆಳೆಗಳು ಹಾಳುಬಿದ್ದವೆ. ಗೊಗ್ಗೀಹಾಳ, ಕನ್ನೋಳಿ, ಕಾಂತೋಜಿ, ಮುಂತಾದ ಕಡೆಯಲ್ಲಿ ಸೋರುಪ್ಪು ಈಗ್ಯೂ ಹುಟ್ಟುತ್ತದೆ.

ಅಭ್ರಕ.—ಗೋಕಾವಿಯ ಸೆರೆಯಲ್ಲಿ ಕರೆ ಅಭ್ರಕ ಮಧ್ಯಮ ತರದ್ದು ದೊರೆಯುತ್ತದೆ.

ರಂಗೋಲಿಯ ಕಲ್ಲು.—ಬಾಗಲಕೋಟೆಯ ಪೂರ್ವಕ್ಕೆ ೭ ಮೈಲಿನ ಮೇಲೆ ಗದ್ದನಕೇರಿ ಯೆಂಬಲ್ಲಿ ಮೇಲಾದ ರಂಗೋಲಿಯ ಕಲ್ಲುಗಳು ದೊರೆಯುತ್ತವೆ. ಇವನ್ನು ಪೊಡಿದರೆ ಚೌಕು ಹಲಿಗೆಗಳು ಹೊರಡುತ್ತವೆ. ಆ ಹಲಿಗೆಗಳು ಪೂರ್ಣ ಪಾರದರ್ಶಕ ವಾಗಿರುತ್ತವೆ. ಕಲಾದಗಿಯ ನೆರೆಯಲ್ಲಿಯೂ ಖಾನಾಪೂರದ ದಕ್ಷಿಣಕ್ಕೂ ಈ ಜಾತಿಯ ಕಲ್ಲುಗಳು ದೊರೆಯುತ್ತವೆ.

ಸುಣ್ಣದ ಕಲ್ಲು.—ವಿಜಾಪುರ ಜಿಲ್ಲೆಯಲ್ಲಿ ವಿಶೇಷವಾಗಿ ಬಾಗಲಕೋಟೆ, ಬಾದಾಮಿ, ಮುದ್ದೆಬಿಹಾಳ ತಾಲೂಕುಗಳಲ್ಲಿ ಮೇಲಾದ ಸುಣ್ಣದ ಕಲ್ಲುಗಳು ದೊರೆಯುತ್ತವೆ. ಬಾಗಲಕೋಟೆ, ಕಲಾದಗಿಗಳ ನೆರೆಯಲ್ಲಿ ನುಣುಪಾದ ಸಂಗಮರವರೀ ಜಾತಿಯ ದೊಡ್ಡ ಶಿಲೆಗಳನ್ನು ಖಣಿಗಳಲ್ಲಿ ಅಗಿದು ತೆಗೆಯ ಬಹುದು. ಇವುಗಳಿಗೆ ಬಿಳದು, ಕಪ್ಪು, ನೀಲ, ಹಸುರು, ಗುಲಾಬಿ, ಬೂದಿಬಣ್ಣ, ಮುಂತಾದ ನಾನಾ ಪ್ರಕಾರದ ಬಹು ಸೊಬಗಿನ ಬಣ್ಣಗಳಿರುತ್ತವೆ. ಆದರೆ ಈ ಶಿಲೆಗಳನ್ನು ಇಮಾರತಿನಲ್ಲಿ ಇದು ವರೆಗೆ ಯಾರೂ ಉಪಯೋಗಿಸಿಲ್ಲೆಂಬುವದು ಆಶ್ಚರ್ಯವು. ತಾಳೀಕೋಟೆಯಲ್ಲಿಯೂ ಸಿಂದಗೀ ತಾಲೂಕಿನಲ್ಲಿ ಹೊನ್ನಳ್ಳಿ ಎಂಬ ಗ್ರಾಮದಲ್ಲಿಯೂ ಮೇಲಾದ ಸಂಗಮರವರೀ ಶಿಲೆಗಳು ದೊರೆಯುತ್ತವೆ. ವಿಜಾಪುರದ ಭವ್ಯವಾದ ಇಮಾರತುಗಳಲ್ಲಿ ತಾಳೀಕೋಟೆಯಿಂದ ತಂದಂಥ ಊದೀ ಬಣ್ಣ ಬೂದೀ ಬಣ್ಣಗಳ ಸುಂದರವಾದ ಶಿಲೆಗಳನ್ನು ನೋಡ ಬಹುದು. ತಾಳೀಕೋಟೆಯಲ್ಲಿ ಭಿನ್ನ ಭಿನ್ನ ವರ್ಣದ ಶಿಲೆಗಳಿಂದ ಕಟ್ಟಿದ ಮನೆಗಳು ರಮಣೀಯವಾಗಿ ಕಾಣಿಸುತ್ತವೆ. ತಾಳೀಕೋಟೆಯ ಖಣಿಗಳಲ್ಲಿ ಹೊರಡುವ ಶೇಡೀ ಕಲ್ಲೆಂಬ ಜಾತಿಯ ಸುಣ್ಣದ ಕಲ್ಲು ಛಾಪಿಸಲಿಕ್ಕೆ ಬರುವಂತೆ ಇರುತ್ತದೆ. ಬಾಗಲಕೋಟೆಯ ಬಳಿಯಲ್ಲಿಯೂ ಇಂಥಾ ಶಿಲೆಗಳು ದೊರೆಯುತ್ತವೆ. ಈ ಶಿಲೆಗಳ ಮೇಲೆ ಶಿಲಾಛಾಪೆಯ ತೆಗಿಯುವ ಪ್ರಯತ್ನವನ್ನು ಕೆಲವರು ನಡಿಸಿದ್ದಾರೆ. ಮೇಲೆ ಹೇಳಿದ ಸ್ಥಳಗಳಲ್ಲಿ ದೊರೆಯುವ ಸುಣ್ಣದ ಕಲ್ಲುಗಳನ್ನು ಪೊಡಿದು ಸುಟ್ಟರೆ ಮೇಲಾದ ಸುಣ್ಣವಾಗುತ್ತದೆ. ಗೋಕಾವೀ ತಾಲೂಕಿನಲ್ಲಿ ಯಾದವಾಡದಲ್ಲಿಯೂ ಖಾನಾಪುರ ತಾಲೂಕಿನಲ್ಲಿಯೂ ಮೇಲಾದ ಸುಣ್ಣದ ಹರಳುಗಳು ದೊರೆಯುತ್ತವೆ. ಧಾರವಾಡ ಜಿಲ್ಲೆಯಲ್ಲಿ ಮಧ್ಯಮ ತರದ ಸುಣ್ಣದ ಹರಳುಗಳು ದೊರೆಯುತ್ತವೆ.

ಉಸುಬಿನ ಕಲ್ಲು.— ಈ ಜಾತಿಯ ಶಿಲೆಗಳು ನವಲಗುಂದ, ಬೆಳಗಾವಿ, ಸರಸಗಡ, ಗೋಕಾವಿ, ಬಾದಾವಿ, ಬಾಗಲಕೋಟೆ, ಮುದ್ದೇಬಿಹಾಳ, ಹುನಗುಂದ ತಾಲೂಕುಗಳಲ್ಲಿ ದೊರೆಯುತ್ತವೆ. ಮುದ್ದೇಬಿಹಾಳ, ಬಾದಾವಿ, ಬಾಗಲಕೋಟೆ, ಗೋಕಾವಿ, ಸವದತ್ತಿಗಳಲ್ಲಿ ದೊರೆಯುವ ಶಿಲೆಗಳಿಂದ ಬೀಸೂ ಕಲ್ಲುಗಳು, ಸಾಣೇಕಲ್ಲುಗಳು, ಮಸಿಯುವ ಕಲ್ಲುಗಳು, ಡೋಣಿಗಳು, ಗಾಣದ ಒರಳುಗಳು, ರಥದ ಗಾಲಿಗಳು, ಸಡಕಿನ ಮೇಲೆ ಯೆಳಿಯುವ ರೂಲುಗಳು, ಮುಂತಾದ ಪದಾರ್ಥಗಳನ್ನು ಮಾಡುವರು. ಬೆಳಗಾವಿಯ ಹತ್ತರ ಕಾಕತಿಯಲ್ಲಿಯೂ ಕಲಾದಗಿಯ ಹತ್ತರ ಕಾತರಕಿಯಲ್ಲಿಯೂ ಬಾದಾವಿಯಲ್ಲಿಯೂ ದೊರೆಯುವ ಮಸಿಯುವ ಕಲ್ಲುಗಳು ಪ್ರಸಿದ್ಧ. ಮುದ್ದೇಬಿಹಾಳದ ಬಳಿಯಲ್ಲಿ ವೊಂದು ಖಣಿಯಲ್ಲಿ ಸ್ಫಟಿಕ ರೂಪವಾದ ಉಸುಬಿನ ಕಲ್ಲು ದೊರೆಯುತ್ತದೆ. ಅದು ಅಚ್ಚ ಕಲ್ಲುಸಕ್ಕರೆಯಂತೆ ಕಾಣಿಸುತ್ತದೆ.

ಸ್ಲೇಟನ ಹಲಿಗೆಗಳು.— ಧಾರವಾಡ, ಕರ್ಜಗಿ, ರಾಣೇಬಿನ್ನೂರು, ಬಾಗಲಕೋಟೆ ತಾಲೂಕುಗಳಲ್ಲಿ ಈ ಜಾತಿಯ ಶಿಲೆಗಳು ದೊರೆಯುತ್ತವೆ. ಕಲಾದಗಿಯ ಆಗ್ನೇಯದಲ್ಲಿ ನಾಲ್ಕು ಮೈಲಿನ ಮೇಲೆ ಶಲ್ಲೀಕೇರಿಯಲ್ಲಿಯೂ ಬಾಗಲಕೋಟೆಯ ದಕ್ಷಿಣದಲ್ಲಿ ಮೂರು ಮೈಲಿನ ಮೇಲೆ ಮುಚ ಖಂಡಿಯಲ್ಲಿಯೂ ಬೇರೆ ಕೆಲವು ಕಡೆಯಲ್ಲಿಯೂ ಮೇಲಾದ ಸ್ಲೇಟನ ಹಲಿಗೆಗಳು ದೊರೆಯುತ್ತವೆ. ಅವುಗಳಿಂದ ಬರಿಯುವ ಸ್ಲೇಟುಗಳನ್ನೂ ಪೆನಸಿಲುಗಳನ್ನೂ ಮೂರ್ತಿಗಳನ್ನೂ, ಗುಡಿಗಳ ಕಂಬಗಳನ್ನೂ ಛಾವಣಿಯ ಕಲ್ಲುಗಳನ್ನೂ ಮಾಡುವರು. ಧಾರವಾಡದ ಹತ್ತರ ಮಂಡೀಹಾಳದಲ್ಲಿಯೂ ಅಳನಾವರದಲ್ಲಿಯೂ ಮೇಲಾದ ಹಲಿಗೆಗಳು ದೊರೆಯತ್ತವೆ. ಅಳನಾವರದ ಕಲ್ಲಿನ ಮೇಲೆ ನಕಶಿಯ ಕೆಲಸವು ಬಹು ಸರಸಾಗುತ್ತವೆ. ಪೂರ್ವಕಾಲದಲ್ಲಿ ಸ್ಲೇಟನ ಹಲಿಗೆಗಳ ಮೇಲೆ ಕೊರಿದಂಥ ಶಿಲಾಲಿಪಿಗಳು ಈಗ್ಯೂ ಸರಸಾಗಿ ಕಾಣಿಸುತ್ತವೆ. ಶಲ್ಲೀಕೇರಿಯ ಶಿಲೆಯಿಂದ ಮೇಲಾದ ಮೂರ್ತಿಗಳಾಗುತ್ತವೆ.

ಕಲಗಡಿಗೆಯ ಕಲ್ಲು.— ಈ ಜಾತಿಯ ಶಿಲೆಗಳು ಕಪೋತ ಗುಡ್ಡದಲ್ಲಿ ದೊರೆಯುತ್ತವೆ. ಇವುಗಳಿಂದ ಕಲಗಡಿಗೆ, ಕಲಪರಟಿ, ಮುಚ್ಚಳ, ಮುಂತಾದ ಪಾತ್ರೆಗಳನ್ನು ಮಾಡುವರು.

ಇಮಾರತಿನ ಕಲ್ಲುಗಳು.— ಮೇಲೆ ವಿವರಿಸಿದ ಸುಣ್ಣದ ಕಲ್ಲು, ಉಸುಬಿನ ಕಲ್ಲು, ಸ್ಲೇಟು, ಎಂಬ ಶಿಲೆಗಳನ್ನು ಆಯಾ ಪ್ರದೇಶಗಳಲ್ಲಿ ಇಮಾರತಿನ ಕೆಲಸಕ್ಕೆ ಹೇರಳವಾಗಿ ಉಪಯೋಗಿಸುವರು. ಇವಲ್ಲದೆ ನಾನಾ ಪ್ರಕಾರದ ಬಿರುಸು ಮಿದು ಜಾತಿಯ ಕರೆಕಲ್ಲುಗಳು, ಶೀಣೀಕಲ್ಲು, ಹಸರುಕಲ್ಲು, ಬೆಣಚಿಕಲ್ಲು, ಮುಂತಾದ ಜಾತಿಯ ಶಿಲೆಗಳು ಬೇರೆ ಬೇರೆ ಕಡೆಯಲ್ಲಿ ವಿಪುಲವಾಗಿ ದೊರೆಯುತ್ತವೆ. ಕರ್ಜಗೀ ತಾಲೂಕಿನಲ್ಲಿ ದೇವರಗಿರಿಯಲ್ಲಿಯೂ ಹಾವೇರಿಯಲ್ಲಿಯೂ ಸುಮಾರು ಆರು ಇಂಚು ದಪ್ಪಾದ ಸ್ಲೇಟನ ದೊಡ್ಡ ದೊಡ್ಡ ಹಲಿಗೆಗಳು ಖಣಿಗಳಲ್ಲಿ ಹೊರಡುತ್ತವೆ. ಖಾನಾಪುರ ತಾಲೂಕಿನಲ್ಲಿ ಬಿರುಸಾದ ಶೀಣೀಕಲ್ಲಿನ ಜಾತಿಯು ಇಮಾರತಿನ ಕೆಲಸಕ್ಕೆ ಬರುತ್ತದೆ. ಬೆಳಗಾ

ವಿಯ ಹತ್ತರ ಸುತಗಟ್ಟಿಯಲ್ಲಿಯೂ ಗೋಕಾವಿಯಲ್ಲಿಯೂ ಸವದತ್ತಿಯಲ್ಲಿಯೂ ಬೆಣಚಿ ಕೂಡಿದ ಉಸುಬಿನ ಕಲ್ಲಿನ ಬಿರುಸಾದ ಶಿಲೆಗಳು ದೊರೆಯುತ್ತವೆ. ಬಾಗಲಕೋಟೆಯ ಉತ್ತರದಲ್ಲಿ ೧೦ ಮೈಲಿನ ಮೇಲೆ ಬೀಳಗಿಯಲ್ಲಿ ಮುದ್ದೇಬಿಹಾಳ ತಾಲೂಕಿನ ನಾಲತವಾಡ ಗ್ರಾಮದಲ್ಲಿ, ಬಾದಾವಿ, ಬಾಗಲಕೋಟೆ, ಹುನಗುಂದ, ಮುಂತಾದ ಕಡೆಯಲ್ಲಿ ಹತ್ತು ಹದಿನೈದು ಫೂಟು ಉದ್ದವಾದ ನಾನಾ ಪ್ರಕಾರದ ಶಿಲೆಗಗಳು ಇಮಾರತಿನ ಕೆಲಸಕ್ಕೆ ಬಹು ಸರಸಾಗಿ ಬರುತ್ತವೆ. ಬೀಳಗಿಯ ಖಣಿಯಲ್ಲಿ ದೊರೆಯುವ ಗುಲಾಬೀ ಬಣ್ಣದ ಕಣಶಿಲೆಯ ಜಾತಿಯ ಹಲಿಗೆಗಳು ವರ್ಣಿಸತಕ್ಕಂಥವು. ಆ ಗ್ರಾಮದ ಬಳಿಯಲ್ಲಿ ವೊಂದು ಶಿವಾಲಯದ ಮುಂದೆ ೩೫ ಫೂಟು ಉದ್ದವಾದ ವೊಂದೇ ಅಖಂಡ ಕಲ್ಲಿನ ದೀಪಸ್ತಂಭವನ್ನು ನಿಲ್ಲಿಸಿದ್ದಾರೆ. ಅದು ಬುಡದಲ್ಲಿ ಸುಮಾರು ವೊಂದು ಮೊಳ ಚಚ್ಚೌಕು ಇರುತ್ತದೆ. ಈ ಪ್ರಕಾರದ ಭವ್ಯವಾದ ಶಿಲೆಗಳನ್ನು ವಿಜಾಪುರ, ರಾಮದುರ್ಗ, ಇಡಗಲ್ಲು, ಮುಂತಾದ ಕಡೆಯಲ್ಲಿ ನೋಡ ಬಹುದು. ಕಣಶಿಲೆಯ ಖಣಿಗಳಲ್ಲಿಯೇ ದೊರೆಯುವ ಹಸುರು ಕಲ್ಲಿನಿಂದ ನೂರಾರು ವರ್ಷಗಳ ಹಿಂದೆ ಮಾಡಿದಂಥ ಲಿಂಗಗಳು ಈ ಹೊತ್ತಿಗೆ ಕನ್ನಡಿಯಂತೆ ಹೊಳಿಯುತ್ತವೆ. ಈ ಜಾತಿಯ ಶಿಲೆಗಳನ್ನು ವಿಜಾಪುರದಲ್ಲಿ ಗೋರಿಗಳ ಮೇಲೆ ನಿಲ್ಲಿಸಿದ್ದಾರೆ.

ಮಣ್ಣು.—ಧಾರವಾಡದಲ್ಲಿ ದೊರೆಯುವ ನಸುಗೆಂಪಿನ ಜಿಗಟು ಮಣ್ಣು ಗೋಡೆಗಳನ್ನು ಸಾರಿಸಲಿಕ್ಕೆ ಮೇಲಾದದ್ದು. ಅದರಿಂದ ಸಾರಿಸಿದ ಗೋಡೆಗಳು ಗಿಲಾಯ ಮಾಡಿದಂತೆ ತೋರುತ್ತವೆ. ಮಿರ್ಜಿ, ಸಿಂದಗೀ ತಾಲೂಕಿನಲ್ಲಿ ಮನಗೋಳಿ, ಮುಂತಾದ ಕಡೆಯಲ್ಲಿ ನೂರಾರು ವರ್ಷಗಳ ಹಿಂದೆ ಕಟ್ಟಿದ ಮಣ್ಣಿನ ಕೋಟೆಗಳು ಅಚ್ಚಳಿಯದೆ ನಿಂತಿರುತ್ತವೆ. ಖಾನಾಪುರದ ಮಣ್ಣಿನಿಂದ ಹುಟ್ಟುವ ಗಡಿಗೆಗಳು ಬಹು ಪ್ರಸಿದ್ಧ. ಜಮಖಂಡಿಯಲ್ಲಿ ದೊರೆಯುವ ಬಿಳಿ ಮಣ್ಣಿನ ಮುಶಿಗಳು ಬೆಂಕಿಯಲ್ಲಿ ಕೆಡುವದಿಲ್ಲ. ಗೋಕಾವಿಯ ನೆರೆಯಲ್ಲಿ ಹಳದಿ, ಹಸುರು, ನೀಲಿ, ಮುಂತಾದ ಬಣ್ಣಗಳುಳ್ಳ ಸೂಸು ಮಣ್ಣು ಮೇಲಾದದ್ದು ದೊರೆಯುತ್ತದೆ. ಗೋಡೆಗೆ ಆ ಬಣ್ಣಗಳನ್ನು ಹಚ್ಚಿದರೆ ಬಹು ದಿವಸ ಕೆಡುವದಿಲ್ಲ.

## ಅಡವಿಗಳು.

ಮುಂಬಯಿ ಕರ್ನಾಟಕ ಭಾಗದಲ್ಲಿ ವಿಶೇಷವಾಗಿ ಮಲ್ಲಾಡದಲ್ಲಿ, ಅಂದರೆ ಸಹ್ಯಾದ್ರಿಯ ಮೇಲೆ, ಯೆಲ್ಲ ಕಡೆಯಲ್ಲಿ ಅಡವಿಯೇ ಹಬ್ಬಿರುತ್ತದೆ. ಮಲ್ಲಾಡದ ಶರಗಿನಲ್ಲಿ ಅದಕ್ಕೂ ಕಡಿಮೆ; ಘಟ್ಟ ಕೆಳಗೂ ವರ್ಣಿಸತಕ್ಕಂಥ ಅಡವಿ ಇರುವದಿಲ್ಲ. ಬೈಲು ಶೀಮೆಯಲ್ಲಿ, ವಿಶೇಷವಾಗಿ ಕೃಷ್ಣೆಯ ಉತ್ತರದಲ್ಲಿ, ಬನಗಳನ್ನು ಕಾಣುವದು ಬಹು ದುರ್ಲಭವು. ಇದರಿಂದ ಮುಖ್ಯವಾಗಿ ಕಾನಡಾ ಜಿಲ್ಲೆಯಲ್ಲಿ ಭವ್ಯವಾದ ವನಗಳು ವಿಸ್ತಾರವಾಗಿ ಹಬ್ಬಿರುತ್ತವೆಂದು ಸ್ಪಷ್ಟವಾಗುತ್ತದೆ. ಇದಲ್ಲದೆ ಈ ಜಿಲ್ಲೆಯಲ್ಲಿ ಕೊಂಕಣ, ಮಲ್ಲಾಡ, ಮಲ್ಲಾಡದ ಶರಗು, ಯೆಂಬ ಮೂರು ವಿಭಾಗಗಳು ಕೂಡಿರುವದರಿಂದ ಈ ಜಿಲ್ಲೆಯ ಅಡವಿಯನ್ನು ಬೇರೆಯಾಗಿ ಮೊದಲು ವಿವರಿಸುವದು ಅಗತ್ಯವಿರುತ್ತದೆ.

## ಕಾನಡಾ ಜಿಲ್ಲೆಯ ಅಡವಿಯು.

ಈ ಜಿಲ್ಲೆಯ ೩೯೧೦ ಚಚ್ಚೌಕು ಮೈಲು ಕ್ಷೇತ್ರದಲ್ಲಿ ೩೫೪೮ ಚಚ್ಚೌಕು ಮೈಲು, ಅಂದರೆ ೧೦೦ರಲ್ಲಿ ೯೦ರ ಪ್ರಮಾಣದಿಂದ ಅಡವಿಯ ವಿಸ್ತಾರ ವಿರುತ್ತದೆ! ಅದರ ವಿವರವು.

### ಕಾನಡಾ ಜಿಲ್ಲೆಯ ಅಡವಿ.

| | ಕಾದದ್ದು, ಎಕರು. | ಸಂರಕ್ಷಿಸಿದ್ದು, ಎಕರು. | ಒಟ್ಟು ಎಕರು. |
|---|---|---|---|
| ಹಲ್ಯಾಳ | ೧೬೧೧೯೧ | ೦ | ೧೬೧೧೯೧ |
| ಸುಪಾ | ೦ | ೪೬೨೯೪೪ | ೪೬೨೯೪೪ |
| ಕಾರವಾಡ | ೧೩೭೨೪೬ | ೦ | ೧೩೭೨೪೬ |
| ಯಲ್ಲಾಪುರ | ೦ | ೨೩೩೧೪೦ | ೨೩೩೧೪೦ |
| ಮುಂಡಗೋಡ | ೩೫೨೯೬ | ೬೮೩೦೪ | ೧೦೩೬೦೦ |
| ಅಂಕೋಲೆ | ೮೨೦೬೦ | ೭೪೭೭೫ | ೧೫೬೮೩೫ |
| ಕುಮಟಾ | ೦ | ೧೯೨೦೦೦ | ೧೯೨೦೦೦ |
| ಸಿರಸಿ | ೨೧೭೭೦ | ೪೨೬೨೩೦ | ೪೪೮೦೦೦ |
| ಸಿದ್ದಾಪುರ | ೦ | ೧೭೯೨೦೦ | ೧೭೯೨೦೦ |
| ಹೊನ್ನಾವರ | ೦ | ೧೧೮೪೦೦ | ೧೧೮೪೦೦ |
| ಭಟಕಳ | ೦ | ೭೮೬೦೯ | ೭೮೬೦೯ |
| | ೪೩೭೫೬೩ | ೧೮೩೩೬೦೨ | ೨೨೭೧೧೬೫ |

ಕಾನಡಾ ಜಿಲ್ಲೆಯ ಅಡವಿಯು ಸರಕಾರೀ ಮಾಲು ಇರುತ್ತದೆ. ಇದರಲ್ಲಿ ಮೂರು ಭಾಗಗಳನ್ನು ಮಾಡ ಬಹುದು. ಮೊದಲನೇ ಭಾಗವು ಸಹ್ಯಾದ್ರಿಗೆ ಹೊಂದಿರುವ ಘಟ್ಟದ ಮೇಲಿನ ಭಾಗವು. ಇದರಲ್ಲಿ ಬಹು ಭವ್ಯವಾದ ತೇಗು ಮತ್ತಿ, ಕರಿಮರ, ಮುಂತಾದ ವೃಕ್ಷಗಳ ಅಡವಿಯುಂಟು. ಈ ಮರಗಳು ೮೦ರಿಂದ ೧೫೦ ಫೂಟುಗಳ ವರೆಗೆ ಯೆತ್ತರ ವಿರುತ್ತವೆ. ಇವುಗಳ ಬೊಡ್ಡಿಯು ೬೦ರಿಂದ ೯೦ ಫೂಟಿನ ವರೆಗೆ ನೆಟ್ಟಗೆ ಮೇಲಕ್ಕೆ ಹೋಗಿರುತ್ತದೆ; ಅದರ ಮೇಲೆ ಟೊಂಗೆಗಳು ವೊಡಿದಿರುತ್ತವೆ. ಈ ಮರಗಳ ಬೊಡ್ಡಿಯ ಸುತ್ತಳತೆ ೫ರಿಂದ ೧೨ ಫೂಟಿನ ವರೆಗೆ. ಈ ಅಡವಿಗೂ ಸಹ್ಯಾದ್ರಿಯ ನೆತ್ತಿಗೂ ಫಡುವೆ ಅಲ್ಲಲ್ಲಿಗೆ ಬೈಲು ಪ್ರದೇಶವಿರುತ್ತದೆ. ಅದರಲ್ಲಿ ಭತ್ತದ ಗದ್ದೆಗಳೂ, ಮಸಾಲೆಯ ಸರಕುಗಳ ತೋಟಗಳೂ ಇರುತ್ತವೆ. ಎರಡನೇ ಭಾಗ ಸಹ್ಯಾದ್ರಿಯ ನೆತ್ತಿಯ ಮೇಲಿನ ಪ್ರದೇಶವು. ಇದರಲ್ಲಿ ಯೆಲ್ಲಕ್ಕೂ ಮೇಲಾದ ಬನಗಳು ಅಲ್ಲಲ್ಲಿಗೆ ಬಹು ವಿಸ್ತಾರವಾಗಿ ಹಬ್ಬಿರುತ್ತವೆ. ನಡು ನಡುವೆ ಹುಲ್ಲಿನ ಬೈಲುಗಳುಂಟು. ಸೂಪೆ, ಯಲ್ಲಾಪುರ ತಾಲೂಕುಗಳಲ್ಲಿ ಹರಿಯುವ ಕಾಳಿ, ಕಾನರಿ, ಯೆಂಬ ಹೊಳೆಗಳ ದಂಡೆಯಲ್ಲಿ ಇರುವ ಅಡವಿಯು ಯೆಲ್ಲಕ್ಕೂ ಶ್ರೇಷ್ಠ. ಬೆಡತೀ ಹಳ್ಳ, ಗಂಗಾವಳಿ, ಇವುಗಳ ದಂಡೆಯ ಅಡವಿಯಾದರೂ

ಅದೇ ಪ್ರಕಾರದ್ದಿರುತ್ತದೆ. ಮೇಲೆ ಹೇಳಿದ ವೃಕ್ಷಗಳೇ ಈ ಅಡವಿಯೊಳಗಿನ ಮುಖ್ಯ ಮರಗಳು. ಶ್ರೀಗಂಧ, ಹೊನ್ನಿ, ಹಲಸು, ಮುಂತಾದ ಮರಗಳಿಗೂ ಕೊರತೆ ಇಲ್ಲ. ಮೂರನೇ ಭಾಗ ಸಹ್ಯಾದ್ರಿಯ ಪಶ್ಚಿಮ ಪ್ರದೇಶವು. ಈ ಭಾಗದಲ್ಲಿ ಅಡವಿಯು ವಿಶೇಷವಾಗಿ ಸಹ್ಯಾದ್ರಿಯಿಂದ ಪಶ್ಚಿಮಕ್ಕೆ ಹಬ್ಬಿದಂಥ ಗುಡ್ಡಗಳ ಮೇಲೆ ಇರುತ್ತದೆ. ತಗ್ಗು ನೆಲದಲ್ಲಿ ಪೊಕ್ಕಲತನವು ನಡಿಯುತ್ತದೆ. ಈ ಗುಡ್ಡದ ಮೇಲಿನ ಅಡವಿಯಲ್ಲಿ ತೇಗು ಕಡಿಮೆ, ಬಹಳ ಯೆತ್ತರವಾಗಿ ಬೆಳೆಯುವದಿಲ್ಲ. ನಾನಾ ಪ್ರಕಾರದ ಬಿದರಿನ ಮೆಳೆಗಳನ್ನು ಯಾವತ್ತು ಅಡವಿಗಳಲ್ಲಿ ಕಾಣಬಹುದು. ಒಂದೊಂದು ಕಡೆಯಲ್ಲಿ ಬರೇ ಬಿದರಿನ ಬನಗಳೇ ಹಬ್ಬಿರುತ್ತವೆ.

ಇಂಗ್ಲಿಷ ಸರಕಾರದ ಅಮಲು ಬರುವ ಪೂರ್ವದಲ್ಲಿ ಹೈದರ ಅಲ್ಲಿಯು ಈ ಜಿಲ್ಲೆಯ ಅಡವಿಯೊಳಗಿನ ಮರಗಳಿಂದ ಹಡಗಗಳನ್ನು ಕಟ್ಟಿಸುತ್ತಿದ್ದನು. ತೇಗು, ಕರಿಮರ, ಶ್ರೀಗಂಧ, ಇವು ಯಂದಿಗೂ ಇನಾಮದಾರ ಜನರ ಭೂಮಿಗಳಲ್ಲಿ ಬೆಳಿದರೂ ಸರಕಾರೀ ಮಾಲೆಂದು ಯೆಣಿಸಲ್ಪಡುತ್ತವೆ.

ಸಂರಕ್ಷಿಸಿದ ಅಡವಿಯ ವಿಷಯವಾಗಿ ಸರಕಾರದವರು ನಿಯಮಗಳನ್ನು ಮಾಡಿದ್ದಾರೆ. ಅವುಗಳನ್ನು ಈ ಪುಸ್ತಕದ ಕಡೆಯಲ್ಲಿ ಕೊಟ್ಟದ್ದೇವೆ. ಈ ಅಡವಿಯಲ್ಲಿ ೧೯ ಜಾತಿಗಳ ಮರಗಳನ್ನೂ ೪ ಪ್ರಕಾರದ ಹುಟ್ಟುವಳಿಯನ್ನೂ ಸರಕಾರದ ಸಲುವಾಗಿ ಕಾಯುವದುಂಟು. ಆ ಮರಗಳು ಯಾವವೆಂದರೆ— ತೇಗು, ಗಂಧಮರ, ಸಿಸುವು (ಕರಿಮರ) ಅಬನಸ, ಹೊನ್ನಿ, ಸುರ ಹೊನ್ನಿ, ಹಲಸು, ಪತಫಣಸ, ಬಲಘಯ್, ಕರಿಮುತ್ತಲ, ನಾಣ, ಶೀವನ್ನಿ, ಮತ್ತಿ, ಅಳ್ಳೀ ಮರ, ಜಂಬಿ, ಬೆಂಡಿ, ಖೈರ, ಶೀಗಿ, ಇಪ್ಪಿ. ನಾಲ್ಕು ಪ್ರಕಾರದ ಹುಟ್ಟುವಳಿ ಯಾವದೆಂದರೆ— ಅಳ್ಳೀ ಕಾಯಿ, ಶೀಗೀ ಕಾಯಿ, ಇಪ್ಪೀ ಹೂ, ಕಾಚು.

ನಿವಾಸಿಗಳ ಹಕ್ಕುಗಳು.— ಸರಕಾರೀ ಅಡವಿಗಳಲ್ಲಿ ಈ ಜಿಲ್ಲೆಯ ನಿವಾಸಿಗಳಿಗೆ ಕೆಲವು ಹಕ್ಕುಗಳುಂಟು. ಅವೆಂತೆಂದರೆ— ಅಡವಿಯನ್ನು ಸುಟ್ಟು ಪೊಕ್ಕಲತನಕ್ಕೆ (ಕುಮ್ರಿ) ಭೂಮಿಯನ್ನು ತಕ್ಕೊಳ್ಳುವದು; ತೋಟಗಳಿಗೆ ಗೊಬ್ಬರ ಹಾಕಲಿಕ್ಕೆ ಮರಗಳ ಯೆಲೆಗಳನ್ನು ತಕ್ಕೊಂಡು ಹೋಗುವದು; ಅಡವಿಯಲ್ಲಿ ಮೆಣಶಿನ ಬಳ್ಳಿಯನ್ನು ಹಾಕುವದು; ದನ ಮೇಸಿಕೊಳ್ಳುವದು; ಬೆಲೆ ಕೊಡದೆ ಅಥವಾ ಸ್ವಲ್ಪ ಬೆಲೆ ಕೊಟ್ಟು ಇಮಾರತಿನ ಕಟ್ಟಿಗೆಯನ್ನೂ ಉರುವಲನ್ನೂ ತಕ್ಕೊಳ್ಳುವದು. ಆದರೆ ಕುಮ್ರಿ ಭೂಮಿಗಾಗಿ ಅಡವಿಯನ್ನು ಕೊಡುವ ವಹಿವಾಟು ಸರಕಾರದವರು ದಿನ ದಿನಕ್ಕೆ ಕಡಿಮೆ ಮಾಡುತ್ತ ನಡಿದಿದ್ದಾರೆ. ತೋಟದ ೮ ಪಾಲಷ್ಟು ಭೂಮಿಯೊಳಗಿನ ಅಡವಿಯಲ್ಲಿ ಮಾತ್ರ, ಉತ್ತಮ ಜಾತಿಯ ಮರಗಳಿಗೆ ಕೈ ಹಚ್ಚದೆ ತೋಟಗರು ಗೊಬ್ಬರಕ್ಕಾಗಿ ಯೆಲೆಗಳನ್ನು ತಕ್ಕೊಳ್ಳಬೇಕೆಂದು ಪೊಳಗಡೆಯಲ್ಲಿ ನಿಯಮವಾಗಿದೆ. ಪ್ರತಿ ಪೊಂದು ಹಳ್ಳಿಯ ನೆರೆಯಲ್ಲಿ ದನ ಮೇಯ್ಕಕ್ಕೆ ಕೆಲವು ಭೂಮಿಯನ್ನು ಸರಕಾರದವರು ಬಿಟ್ಟದ್ದಾರೆ. ಬಿದರು, ಕೀಳು ಜಾತಿಯ ತೊಲೆಗಳು, ಉರುವಲಿನ ತಲೆ ಹೊರೆಗಳು, ಇವುಗಳನ್ನು ರೈತರಿಗೆ ಮುಫತ್ತು ಕೊಡುತ್ತಾರೆ. ಹೆಚ್ಚಿಗೆ ಉರುವಲು ಬೇಕಾದರೆ ಬಂಡಿಗೆ ೪ ಆಣೆ ಕೊಡ ಬೇಕು. ೮ನೇ ಪಾಲಿನಷ್ಟರ ವರೆಗೆ ಬೆಲೆ ಕೊಟ್ಟರೆ ಬೇಕಾದಂಥ ಇಮಾರತಿನ ಕಟ್ಟಿಗೆಗಳನ್ನು ರೈತರಿಗೆ ಕೊಡುತ್ತಾರೆ.

ಖಾಸಗೀ ಜನರ ಭೂಮಿಗಳಲ್ಲಿ ಬೆಳೆದಂಥ ತೇಗು, ಕರಿಮರ, ಗಂಧ ಮರ, ಮುಂತಾದ ಕೆಲವು ಉತ್ತಮ ಜಾತಿಯ ಮರಗಳು ಸರಕಾರೀ ಮಾಲೆಂದು ಯೆಣಿಸಲ್ಪಡುತ್ತವೆ.

ಸರಕಾರದ ಆದಾಯವು. — ಅಳ್ಳೀಕಾಯಿ, ಶೀಗೀಕಾಯಿ, ಕಾಚು, ಜೇನತುಪ್ಪ, ಮೇಣ, ದಾಲಚಿನ್ನಿ, ಮೆಣಸು, ಹುಲ್ಲು, ಇವುಗಳಿಂದ ಸರಕಾರಕ್ಕೆ ವರ್ಷಕ್ಕೆ ಸುಮಾರು ೫೬೦೦೦ ರೂಪಾಯಿ ಆದಾಯವಾಗುತ್ತದೆ. ಮರಗಳ ಮಾರಾಟ ಸಹಿತವಾಗಿ ಯಾವತ್ತು ಅಡವಿಯಿಂದ ಸರಕಾರಕ್ಕೆ ಆಗುವ ಆದಾಯದ ವಿವರ ಹ್ಯಾಗಂದರೆ—
ಸನ್ ೧೮೫೩-೫೪ರಲ್ಲಿ ಆದಾಯ ೧೪೪೨೩೦, ಖರ್ಚು ೫೬೮೫೦, ನಫೆ ೮೭೩೮೦;
ಸನ್ ೧೮೬೩-೬೪ರಲ್ಲಿ ಆದಾಯ ೩೩೮೭೨೦, ಖರ್ಚು ೩೨೨೨೦, ನಫೆ ೩೦೬೫೦೦;
ಸನ್ ೧೮೭೩-೭೪ರಲ್ಲಿ ಆದಾಯ ೪೦೪೦೪೦, ಖರ್ಚು ೧೬೫೪೮೦, ನಫೆ ೨೩೮೫೬೦;
ಸನ್ ೧೮೮೧-೮೨ರಲ್ಲಿ ಆದಾಯ ೪೧೦೫೧೦, ಖರ್ಚು ೨೪೩೮೭೦, ನಫೆ ೧೬೬೬೪೦.
ಸನ್ ೧೮೬೨ರಿಂದ ಮೂರು ವರ್ಷಗಳಲ್ಲಿ ಅರಳೆಯ ವ್ಯಾಪಾರ ಬಹಳ ಬೆಳೆದದ್ದರಿಂದ ಅಡವಿಯ ಆದಾಯ ಬೆಳೀತು. ಸನ್ ೧೮೭೬ರಲ್ಲಿ ಬರ ಬಿದ್ದದ್ದರಿಂದ ಆದಾಯ ಬಹಳ ಕಡಿಮೆಯಾಯಿತು.

ಸಮುದ್ರತೀರದ ಪ್ರದೇಶಗಳಲ್ಲಿ ತೆಂಗಿನ ಬನಗಳು ಬಹಳ ವಿಸ್ತಾರವಾಗಿ ಹಬ್ಬಿರುತ್ತವೆ. ಘಟ್ಟದ ಮೇಲೆ ಅಲ್ಪಸ್ವಲ್ಪ ಮರಗಳನ್ನು ಕಾಣ ಬಹುದು. ಸಮುದ್ರತೀರದಲ್ಲಿ ಈ ಮರಕ್ಕೆ ೬ನೇ, ೭ನೇ ವರ್ಷ ಕಾಯಿಗಳಾಗುತ್ತವೆ. ಎತ್ತರವಾದ ಪ್ರೊಣ ನೆಲದಲ್ಲಿ ೧೦, ೧೧ ವರ್ಷಗಳ ವರೆಗೆ ಆಗುವದಿಲ್ಲ. ಸುಮಾರು ೬೦ ವರ್ಷಗಳ ವರೆಗೆ ತೆಂಗಿನ ಮರವು ಕಾಯಿಗಳನ್ನೂ ಸರಾಯಿಯನ್ನೂ ಕೊಡುತ್ತದೆ. ಒಂದು ಮರದಿಂದ ವರ್ಷಕ್ಕೆ ಸರಾಸರೀ ಮಾನದಿಂದ ೮ ಆಣೆ ಕಾಯಿಗಳ ಆದಾಯವಾಗುತ್ತದೆ. ಮಾಡಿ ಯೆಂಬ ಸರಾಯಿಯ ಆದಾಯ ಬೇರೆ. ಭಂಡಾರೀ, ಹಳೆಪೈಕರು, ಮುಂತಾದವರು ತೆಂಗಿನ ಮರಕ್ಕೆ ಕಚ್ಚು ಹಾಕಿ ಮಾಡೀ ರಸವನ್ನು ತೆಗಿಯುವರು. ಇವರು ಸರಕಾರಕ್ಕೆ ಮರಕ್ಕೆ ೩ ರೂಪಾಯಿಯಂತೆ ತೆರಿಗೆ ಕೊಡುತ್ತಾರೆ. ಬೈನಿ ಮರದಿಂದ ಮಾಡೀ ರಸವನ್ನು ತೆಗಿಯುವರು.

## ಕಾನಡಾ ಜಿಲ್ಲೆಯ ಅಡವಿ.

ಕಾನಡಾ ಜಿಲ್ಲೆಯೊಳಗಿನ ಮುಖ್ಯ ಮುಖ್ಯ ಮರಗಳೂ, ಗಿಡಗಳೂ, ಅವುಗಳ ಉಪಯೋಗವೂ ಹ್ಯಾಗಂದರೆ—

ಅಂದಿರ ಮುರಗಳ (ಫಣಸಿ). — ಬಣ್ಣ ಕಿರುಗೆಂಪು, ತೊಲೆಯ ಕಟ್ಟಿಗೆ; ಮಣಿಸಿದರೆ ಮುರಿಯುವದು.

ಅಂಸರೋಳಿ (ಅಂಕೋಲ). — ಇದು ಬಹಳ ಯೆತ್ತರವಾಗಿ ಬೆಳಿಯುವದಿಲ್ಲ. ಕಟ್ಟಿಗೆ ಬಿರುಸು, ಘನಪೂಟಿನ ತೂಕ ೪೯ ಪೌಂಡು. ಕಾಯಿ ಒಗರು, ಹುಳಿ; ಆದರೂ ಬಡ ಜನರು ತಿನ್ನುವರು. ಬೇರು ಔಷಧಕ್ಕೆ ಬರುತ್ತದೆ. ಇದರ ಯೆಣ್ಣೆಯಿಂದ ಬಹಳ ಚಮತ್ಕಾರದ ಕೃತಿಗಳು ಆಗುತ್ತವೆಂದು ಹೇಳುತ್ತಾರೆ.

ಅಕ್ಕ (ಐನಶಿ).—ಮಧ್ಯಮ ಆಕಾರದ್ದು. ಕಟ್ಟಿಗೆ ಮಿಂಚುಳ್ಳ ಹಳದಿ; ಅದರಿಂದ ಹರಿವಾಣಗಳನ್ನು ಮಾಡುವರು. ಬೇರಿನಿಂದ ಕೆಂಪು, ಹಳದಿ ಬಣ್ಣಗಳಾಗುತ್ತವೆ.

ಅಜ್ಜನ ಪಟ್ಟೆ (ಖರ್ವತ).—ಗಡುತರವಾಗಿ ಬೆಳೆಯುವದು. ಕಟ್ಟಿಗೆ ಮಿದು, ಕೆಲಸಕ್ಕೆ ಬಾರದು. ತೋಟೆಯಿಂದ ನಾರು ಹೊರಡುತ್ತದೆ. ಅದರಿಂದ ಹಗ್ಗ, ಚಾಪಿ, ಚೀಲು, ಮುಂತಾದವುಗಳನ್ನು ಮಾಡುವರು. ಕಾಯಿ ಬಹಳ ಕೈ.

ಅಡವೀ ಬೆಂಡಿ (ರಾನಭೇಂಡಿ).—ಮಧ್ಯಮ ಆಕಾರದ್ದು; ಬಹು ಬೇಗ ಬೆಳೆಯುತ್ತದೆ. ಕಟ್ಟಿಗೆ ಗಟ್ಟಿ, ಜಿಗಟು, ತಾಳಿಕೆಯುಳ್ಳದ್ದು. ಪೂರ್ವದಲ್ಲಿ ತೋಫುಗಳನ್ನು ಹೇರುವ ಬಂಡಿಗಳನ್ನು ಇದರಿಂದ ಮಾಡುತ್ತಿದ್ದರು. ಕಾಯಿಗಳಿಂದ ಹಳದೀ ಬಣ್ಣ ಹುಟ್ಟುತ್ತದೆ.

ಅಡಿಕೆ (ಪೋಫಳಿ).—ಪ್ರಸಿದ್ಧ; ೫೦ರಿಂದ ೮೦ ಫೂಟಿನ ವರೆಗೆ ಎತ್ತರವಾಗಿ ಬೆಳೆಯುತ್ತದೆ. ಇದರ ಕಟ್ಟಿಗೆಯಿಂದ ಜಂತೆಗಳನ್ನೂ ಹಂದರದ ಕಂಬಗಳನ್ನೂ ಮಾಡುವರು. ಕಾಯಿಯ ಮೇಲಿನ ತೋಟೆಯನ್ನು ಸುಲಿದು ಚಲ್ಲಿ, ಅಡಿಕೆಗಳನ್ನು ಕುದಿಸಿ ಮಾರಾಟಕ್ಕೆ ಒಯ್ಯುವರು.

ಅತ್ತಿ (ಉಂಬರ, ರುಮುಡಿ).—ಪ್ರಸಿದ್ಧ—ಕಟ್ಟಿಗೆ ಸಾಧಾರಣ ತರದ್ದು. ಹಣ್ಣುಗಳನ್ನು ತಿನ್ನುವರು. ಎಲೆ, ತೋಟ, ಹಣ್ಣುಗಳು ಔಷಧಕ್ಕೆ ಬರುತ್ತವೆ.

ಅಮಟೆ (ರಾನ ಅಂಬಾಡಾ).—ಬಹಳ ದೊಡ್ಡ ಮರ. ಕಟ್ಟಿಗೆ ಕೆಲಸಕ್ಕೆ ಬಾರದ್ದು. ಕಾಯಿ ಹುಳಿ, ಹುಣಶೀ ಹಣ್ಣಿನ ಸ್ಥಳದಲ್ಲಿ ಉಪಯೋಗಿಸುತ್ತದೆ; ಚಿಗರೆಗಳು ಈ ಕಾಯಿಯನ್ನು ಪ್ರೀತಿಯಿಂದ ತಿನ್ನುತ್ತವೆ. ತೋಟೆಯಿಂದ ಅಂಟು ಹೊರಡುತ್ತದೆ.

ಅರಟಾಳ (ರಿಟಾ).—ದೊಡ್ಡ ಮರ. ಕಟ್ಟಿಗೆ ಬಿರುಸು, ಗಟ್ಟಿ; ಆದರೆ ಉಪಯೋಗದ್ದಲ್ಲ. ಘನಫೂಟಿನ ತೂಕ ೬೪ ಪೌಂಡು. ಕಾಯಿಯನ್ನು ಹೊಲಸು ತೊಳೆಯಲಿಕ್ಕೆ ಮೈಗೂ ಅರಿವೆಗೂ ಹಚ್ಚುವರು. ಬೀಜದಿಂದ ಯೆಣ್ಣೆ ಹೊರಡುತ್ತದೆ.

ಅರದಾಳ.—ಮೇಲಿನ ಜಾತಿಯ ವೃಕ್ಷ. ಅದಕ್ಕೂ ಹೆಚ್ಚು ವಿಪುಲವಾಗಿಯೂ ವಿಸ್ತಾರವಾಗಿಯೂ ಬೆಳೆಯುತ್ತದೆ. ಇದರ ಅಂಟಾದರೂ ರೇವಾಚಿನ್ನಿಯ ಹಾಗೆ ಕೆಲಸಕ್ಕೆ ಬರುವಂಥಾದಿರುತ್ತದೆ.

ಅರನಟ್ಟು.—ತೋಟಗಳಲ್ಲಿ ಸಾಧಾರಣವಾದದ್ದು. ಇದು ಮೇಲಾದ ಅಂಜೇರೀ ಬಣ್ಣ ಹುಟ್ಟಿಸುತ್ತದೆ.

ಅರಸಿನಗುರ್ಜಿ (ವರಾಂಬ).—ಮಧ್ಯಮ ಆಕಾರದ್ದು; ಕಟ್ಟಿಗೆ ಬಹಳವಾಗಿ ಉಪಯೋಗಿಸುವದಿಲ್ಲ. ಇದರ ಅಂಟಿನಿಂದ ಹುಟ್ಟುವ ರೇವಾಚಿನ್ನಿ ಯೆಂಬ ಹಳದೀ ಬಣ್ಣದ ವ್ಯಾಪಾರವು ಬಹಳ ನಡಿಯುತ್ತದೆ.

ಅರಳೆ (ಪಿಂಪಳ).—ತಕ್ಕ ಮಟ್ಟಿಗೆ ದೊಡ್ಡದಾಗುತ್ತದೆ. ಕಟ್ಟಿಗೆ ಹೇಡಿ, ಕೆಲಸಕ್ಕೆ ಬರುವದಿಲ್ಲ. ಎಲೆ ತೋಟೆಗಳು ಔಷಧಕ್ಕೆ ಬರುತ್ತವೆ. ಹಿಂದು ಜನರ ಪವಿತ್ರ ವೃಕ್ಷವು.

ಅಶೋೕಕ.—ಬಹು ಸುಂದರವಾದ ಮಧ್ಯಮ ಆಕಾರದ ವೃಕ್ಷ. ಕಟ್ಟಿಗೆಯೊಳಗಿನ ಗಂಡು ಕಪ್ಪು ಬಣ್ಣದ್ದು, ಬಿರಸು; ಆದರೆ ಬಹಳವಾಗಿ ಉಪಯೋಗಿಸುವದಿಲ್ಲ. ಈ ಮರವನ್ನು ಶೋಭೆಗಾಗಿ ತೋಟಗಳಲ್ಲಿಯೂ ಗುಡಿಗಳಲ್ಲಿಯೂ ಹಚ್ಚುವರು.

ಅಳಲೆ (ಹಿರಡಾ).—ಬಹು ಸಾಧಾರಣ, ತಕ್ಕ ಮಟ್ಟಿಗೆ ದೊಡ್ಡದಾಗುತ್ತದೆ. ಕಟ್ಟಿಗೆ, ಕಪ್ಪು, ಹಳದೀ ಛಾಯವುಳ್ಳದ್ದು, ಬಿರುಸು, ನುಣುಪು, ಜಡ; ಎಲ್ಲ ಕೆಲಸಕ್ಕೆ ಬರುತ್ತದೆ. ಕಾಯಿಯ ವ್ಯಾಪಾರ ಬಹಳ ನಡಿಯುತ್ತದೆ. ಬಣ್ಣ ಕೊಡಲಿಕ್ಕೂ, ಚರ್ಮ ಮಿದು ಮಾಡಲಿಕ್ಕೂ ಇದರ ಉಪಯೋಗವಾಗುತ್ತದೆ, ಮತ್ತೂ ಇದು ಹೆಸರಾದ ಸಾರಕ ಔಷಧವು. ದಕ್ಷಿಣ ಭಾಗದಲ್ಲಿ ಪ್ರತಿ ವರ್ಷ ೧೧೦೦೦ ಖಂಡಿ ಅಳಲೇಕಾಯಿ ಹುಟ್ಟುತ್ತವೆ. ಅವುಗಳ ಬೆಲೆ, ೧ ಲಕ್ಷ ರೂಪಾಯಿ. ಆ ಕಾಯಿಯನ್ನು ಕೂಡಿಸುವ ವೆಚ್ಚ ಆದಾಯದ ೩ನೇ ಪಾಲಷ್ಟು ಆಗುತ್ತದೆ.

ಆಲ (ವಢ).—ಬಹು ಪ್ರಸಿದ್ಧ; ವಿಸ್ತಾರವಾಗಿ ಬೆಳಿಯುತ್ತದೆ. ಇದರ ಛಾಯೆಯು ೧೫೦ ಫೂಟಗಿಂತ ಹೆಚ್ಚು ವಿಸ್ತಾರವಿರುತ್ತದೆ. ಜಡಿಗಳು ನೆಲಕ್ಕೆ ಇಳಿಬಿದ್ದು ನೆಲದೊಳಗೆ ಶೇರಿ ಹೊಸ ಬೊಡ್ಡಿಗಳಾಗುತ್ತವೆ. ಬಲಿತ ಜಡಿಯ ಕಟ್ಟಿಗೆ ಜಿಗಟು, ಭಾರಕ್ಕೆ ಮಣಿಯುವಂಥಾದ್ದು, ಗಟ್ಟಿ ಇರುವ ಕಾರಣ ಅದರಿಂದ ಡೇರೆಗಳ ಕಂಬಗಳನ್ನೂ, ನಗಗಳನ್ನೂ, ಬಾಗಿಲುಗಳನ್ನೂ, ಮಾಡುವರು. ಘನಫೂಟನ ತೂಕ ೩೩ ಪೌಂಡು. ಈ ಮರವು ಬೇಕಾದಂಥ ನೆಲದಲ್ಲಿ ಬೆಳಿಯುತ್ತದೆ. ಆಲ, ಅತ್ತೀ ಮರಗಳು ಕಾದ ಅಡವಿಯಲ್ಲಿ ಇದ್ದರೆ, ಅಡವಿಗೆ ಅಪಾಯವಾಗುತ್ತದೆ. ಇವುಗಳ ಫಲಗಳನ್ನು ಪಕ್ಷಿಗಳು ತಿಂದು ಬೇರೆ ಮರಗಳ ಮೇಲೆ ಬೀಜಗಳನ್ನು ಚಲ್ಲುತ್ತವೆ. ಆ ಬೀಜಗಳು ಅಲ್ಲೇ ಮೊಳಿತು, ಅವುಗಳ ಬೇರು ಮರದ ಬೊಡ್ಡಿಗೆ ಸುತ್ತಿಕೊಂಡು ಅದನ್ನು ಕೊಲ್ಲುತ್ತವೆ. ಹೀಗಾಗಿ ಅಡವಿ ಹಾಳಾಗುತ್ತದೆ.

ಆಸನ (ಕೌಂಚಿ).—ಇದರ ಕಟ್ಟಿಗೆಯಿಂದ ಮೇಲಾದ ತೊಲೆಗಳಾಗುತ್ತವೆ. ಅವು ನೀರಿಗೂ ಹವೆಗೂ ಕೆಡುವದಿಲ್ಲ. ಘನಫೂಟನ ತೂಕ ೬೦ ಪೌಂಡು.

ಇಪ್ಪೆ (ಮೋಹ).—ತಕ್ಕ ಮಟ್ಟಿಗೆ ಯೆತ್ತರವಾಗಿ ಬೆಳಿಯುವದು. ಇದರ ಕಟ್ಟಿಗೆಯು ತಾಳಿಕೆಯುಳ್ಳದ್ದು, ಜನರ ಉಪಯೋಗಕ್ಕೆ ಬರುತ್ತದೆ. ಆದರೆ ಕಾನಡಾ ಜಿಲ್ಲೆಯಲ್ಲಿ ಇದನ್ನು ಯಾರೂ ಉಪಯೋಗಿಸುವದಿಲ್ಲ. ಘನಫೂಟನ ತೂಕ ೬೧ ಪೌಂಡು. ಇದರ ಹೂವಿನಿಂದ ಶರೆಯನ್ನು ಮಾಡುವರು. ಆ ಹೂ ಶೀ ಇರುತ್ತದೆ. ಅದು ಔಷಧಕ್ಕೂ ಬರುತ್ತದೆ. ಇಪ್ಪೇ ಯೆಲೆಯು ಭೋಜನದ ಕೆಲಸದಲ್ಲಿ ಸುವರ್ಣಪಾತ್ರವೆಂಬ ಹೆಸರು ಪಡಿದದೆ.

ಕಕ್ಕಿ (ಬಹವಾ).—ಹೂವಾದಾಗ ಬಹು ಸುಂದರವಾಗಿ ಕಾಣುತ್ತದೆ. ಬೈಲಿನಲ್ಲಿ ಕಿರಿದಾಗಿ ಬೆಳಿಯುವದು. ಕಟ್ಟಿಗೆ ಬಹು ಬಿರುಸು, ಜಿಗಟು, ಸುಂದರವಾದದ್ದು, ಬಹಳ ಕೆಲಸಕ್ಕೆ ಬರುತ್ತದೆ. ಘನಫೂಟನ ತೂಕ ೫೪ ಪೌಂಡು. ಕಾಯಿಯೊಳಗಿನ ತಿಳಲು

ಸಾರಕವಿರುತ್ತದೆ; ಅದನ್ನು ಔಷಧಕ್ಕೆ ಉಪಯೋಗಿಸುವರು. ತೋಟೆಯಲ್ಲಿ ಅಂಟು ಹೊರಡುತ್ತದೆ.

ಕಡಾಲ (ಕಳಂಬ).—ಉನ್ನತ ವೃಕ್ಷ; ಕಟ್ಟಿಗೆ ಇಮಾರತಿಗೆ ಬರುತ್ತದೆ; ನೀರು ಗಾಳಿಗೆ ತಡಿಯುವದಿಲ್ಲ. ಘನಫೂಟನ ತೂಕ ೪೧ ಪೌಂಡು.

ಕಣಗಲ (ಕರ್ಮಾಣಿ).—ಮಧ್ಯಮ ಆಕಾರದ ವೃಕ್ಷ; ಕಾನಡಾ ಜಿಲ್ಲೆಯಲ್ಲಿ ಇದರ ಕಟ್ಟಿಗೆಯನ್ನು ಯಾರು ಉಪಯೋಗಿಸುವದಿಲ್ಲ. ಇದರ ಕಾಯಿಗಳನ್ನು ಪಶುಗಳು ಪ್ರೀತಿಯಿಂದ ತಿನ್ನುತ್ತವೆ.

ಕರಚೊ ಅಥವಾ ಆಸನಗುರಗಿ (ಅಂಜುನ).—ಸುಂದರ, ಸರಳ, ಎತ್ತರ. ಕಟ್ಟಿಗೆ ಕೆಂಗಪ್ಪು, ಎಳೆ ಸಣ್ಣ, ಬಿರುಸು, ಭಾರವುಳ್ಳದ್ದು; ಘನಫೂಟನ ತೂಕ ೬೬ ಪೌಂಡು. ತೋಟೆಯ ನಾರಿನಿಂದ ಮೇಲಾದ ಹಗ್ಗಗಳಾಗುತ್ತವೆ. ಎಲೆಗಳನ್ನು ದನಗಳು ಪ್ರೀತಿಯಿಂದ ತಿನ್ನುತ್ತವೆ.

ಕರಿ (ಕಾಳೇ ಝಾಡ).—ಸಣ್ಣದು, ಬಹು ಬಿರುಸು, ಗಟ್ಟಿ; ಮೇಲಾದ ದುಂಡ ಜಂತಿಗಳಾಗುತ್ತವೆ.

ಕರಿಮುತ್ತಲ (ಕಾಳಾಪಳಸ).—ತಕ್ಕ ಮಟ್ಟಿಗೆ ದೊಡ್ಡದು, ವಿಪುಲ. ಕಟ್ಟಿಗೆ ಬಹು ಗಟ್ಟಿ, ಎಲ್ಲ ಕೆಲಸಕ್ಕೆ ಬರುತ್ತದೆ. ಅದಕ್ಕೆ ಗೊರ್ಲಿ ಹತ್ತುವದಿಲ್ಲ. ತೆಂಗಿಗಿಂತ ಮೇಲಾದದ್ದೆಂದು ಹೇಳುತ್ತಾರೆ. ಘನಫೂಟನ ತೂಕ ೫೮ ಪೌಂಡು. ತೋಟೆಯಲ್ಲಿ ವೊಗರು ಅಂಟು ಹೊರಡುತ್ತದೆ.

ಕರೆ ಉತ್ತತ್ತಿ (ಕಾಳಿಖಜೂರ). — ಸುಂದರವಾದ ಉನ್ನತ ವೃಕ್ಷ. ಕಟ್ಟಿಗೆ ಕಪ್ಪು, ಚಂದವಾದದ್ದು. ಆದರೆ ಇಮಾರತಿಗೆ ಅದನ್ನು ತಕ್ಕೊಳ್ಳುವದಿಲ್ಲ. ಕಾಯಿ, ತೋಟಗಳು ಬೇವಿನಂತೆ ಔಷಧಕ್ಕೆ ಬರುತ್ತವೆ. ಕಟ್ಟಿಗೆಗೆ ಗೊರ್ಲಿ ಹತ್ತುವದಿಲ್ಲ.

ಕವಳ (ಕುಂಬಿಯ).—ಬೈಲಿನಲ್ಲಿ ಕಿರಿದಾಗಿ ಬೆಳಿಯುವದು. ಕಟ್ಟಿಯೊಳಗಿನ ಗಂಡು ನೇಗಿಲಿಗೆ ಬರುತ್ತದೆ. ಕಾಯಿಯನ್ನು ದನಗಳು ತಿನ್ನುತ್ತವೆ. ತೋಟೆಯಲ್ಲಿ ಹೊರಡುವ ನಾರಿನಿಂದ ಹಗ್ಗ ಹೊಸಿಯುವರು.

ಕವರಗಿ (ಕೇವಣ).—ಸಣ್ಣ ಗಿಡ; ತೋಟೆಯ ನಾರಿನಿಂದ ಹಗ್ಗಗಳಾಗುತ್ತವೆ.

ಕಾಡಲಿಂಬೆ (ಮಾಕಡಲಿಂಬ).—ಗಿಡ ಸಣ್ಣದು. ಕಟ್ಟಿಗೆಯ ಯೆಳೆ ಸಣ್ಣ, ಭಾರ ಬಹಳ; ಆದರೆ ಇದನ್ನು ಯಾರು ಉಪಯೋಗಿಸುವದಿಲ್ಲ.

ಕಾರೆ (ಅಬನಸ).—ಮಧ್ಯಮ ಆಕಾರದ ವೃಕ್ಷ, ಅಪರೂಪವಾಗಿ ದೊರೆಯುವದು. ಇದರ ಕಟ್ಟಿಗೆಯೊಳಗಿನ ಗಂಡು ಅಚ್ಚಕರೆದಾಗಿ ಬಹಳ ಭಾರವಿರುತ್ತದೆ. ಘನಫೂಟನ ತೂಕ ೪೧ ಪೌಂಡು. ಈ ಮರವನ್ನು ಸರಕಾರದವರು ಕಡಿಯಗೊಡುವದಿಲ್ಲ.

ಕಾವಿರ್.—ಸುಂದರವಾದ ಉನ್ನತ ವೃಕ್ಷ. ಕಟ್ಟಿಗೆ ಉಪಯುಕ್ತವಾದದ್ದು.

ಕಾಸರ್ಕಣ (ಕಾರೊ).—ಮಧ್ಯಮ ಆಕಾರದ ಸಾಧಾರಣ ವೃಕ್ಷ. ಕಟ್ಟಿಗೆ ಖೈ, ಬಿರುಸು, ತಾಳಿಕೆಯುಳ್ಳದ್ದು; ಗೊರ್ಲಿ ಹತ್ತುವದಿಲ್ಲ; ಘನಫೂಟನ ತೂಕ

೫೬ ಪೌಂಡು; ಇಮಾರತಿಗೂ ಬಂಡಿಗಳಿಗೂ ಬರುತ್ತದೆ. ಬೇರು ಔಷಧಕ್ಕೆ ಬರುತ್ತದೆ; ಕಾಯೊಳಗಿನ ತಿಳಲು ಪಕ್ಷಿಗಳೂ ಮಂಗಗಳೂ ತಿನ್ನುತ್ತವೆ.

ಕಾಳುಯತ್ಲೆ (ಲೋಖಂಡಿ).—ಸಾಧಾರಣ ವೃಕ್ಷ, ಎತ್ತರವಾದದ್ದು. ಕಟ್ಟಿಗೆ ಬಿಳೀದು, ಗಟ್ಟಿ, ಇಮಾರತಿಗೆ ಬರುತ್ತದೆ.

ಕಿತ್ತಳೆ (ನಾರಿಂಗ).—ಕಾನಡಾ ಜಿಲ್ಲೆಯಲ್ಲಿ ಯೆಲ್ಲ ಕಡೆಯಲ್ಲಿ ಬೆಳಿಯುತ್ತದೆ; ಆದರೆ ಹಣ್ಣು ಮಧ್ಯಮ.

ಕಿರ್ಸಲ.—ಇಮಾರತಿಗೆ ಬರುತ್ತದೆ. ಘನಫೂಟಿನ ತೂಕ ೪೪ ಪೌಂಡು.

ಕುಂಕುಮ (ಸಿಂದೂರ).—ಸಣ್ಣ ಗಿಡ; ಕಟ್ಟಿಗೆ ನಿರುಪಯೋಗಿ; ತೋಟಿ ಚರ್ಮ ಮಿದು ಮಾಡಲಿಕ್ಕೆ ಬರುತ್ತದೆ. ಕಾಯಿಯಲ್ಲಿ ಕೆಂಪು ಬಣ್ಣ ಹೊರಡುತ್ತದೆ.

ಕುಂಪ್ರೊಳೆ.—ಎತ್ತರವಾಗಿ ಬೆಳಿಯುತ್ತದೆ. ಒಕ್ಕಲಿಗರು ನೀರು ಹಾಕಿ ಬೆಳಿಸುವರು. ಕಟ್ಟಿಗೆ ನಸುಗೆಂಪು, ಬಹಳ ಗಟ್ಟಿ. ಇದರ ಕಾಯಿಗಳಿಂದ ಉಪ್ಪಿನ ಕಾಯಿ, ಹಾಕುವರು.

ಕೇರು (ಬಿಬ್ಬಾ).—ಬಹಳ ಯೆತ್ತರವಾಗುವದಿಲ್ಲ; ಕಟ್ಟಿಗೆ ಕೆಲಸಕ್ಕೆ ಬಾರದ್ದು. ಕೇರಿನ ಯೆಣ್ಣೆ ಔಷಧಕ್ಕೆ ಬರುವದು ಪ್ರಸಿದ್ಧ.

ಕೋದಾಳೆ (ಸಾತ್ವೀಣ).—ಬಹು ಯೆತ್ತರ, ನೆಟ್ಟಗೆ ಮೇಲಕ್ಕೆ ಬೆಳಿಯುವದು. ಕಟ್ಟಿಗೆ ಮಿದು. ಘನಫೂಟಿನ ತೂಕ ೪೦ ಪೌಂಡು.

ಕೋಡಮುರಕಿ (ಕಾಳಾಕುಡಾ).—ಸಣ್ಣ ಗಿಡ, ಕಟ್ಟಿಗೆ ಬಿಳಿದು, ಗಟ್ಟಿ, ನುಣುಪು. ಎಲೆಗಳಿಂದ ನೀಲಿ ಹುಟ್ಟುತ್ತದೆ. ತೋಟ ಬೇರುಗಳು ಅತಿಸಾರಕ್ಕೆ ಮೇಲಾದ ಔಷಧಿಗಳು.

ಕೋವಿತ.—ಒಣಭೂಮಿಯಲ್ಲಿ ಬೆಳಿಯುವದು. ಕಟ್ಟಿಗೆ ಬಿರುಸು, ಗಟ್ಟಿ, ತಾಳಿಕೆಯುಳ್ಳದ್ದು, ಬಹಳ ಕೆಲಸಕ್ಕೆ ಬರುತ್ತದೆ. ಕಚ್ಚು ಹಾಕಿದರೆ ಜಾಲೀ ಅಂಟಿನಂಥ ಅಂಟು ಹೊರಡುತ್ತದೆ. ಕಾಯೊಳಗಿನ ತಿಳಲು ಪಾಕದೊಳಗೆ ಹಾಕುವರು. ಎಲೆಯು ಔಷಧಕ್ಕೆ ಬರುತ್ತದೆ.

ಕೊಳಸಂಪಿಗೆ (ಕುಡಚಾಫಾ).—ತೋಟಗಳಲ್ಲಿ ಹಚ್ಚುವರು; ಹೂ ಬಹಳ ಸುಗಂಧ.

ಖರ್ಗಸ (ಖರ್ವತ).—ಮಧ್ಯಮ ಆಕಾರದ್ದು. ಕಟ್ಟಿಗೆ ಕೆಲಸಕ್ಕೆ ಬರುವದಿಲ್ಲ. ಕಟ್ಟಿಗೇ ಸಾಮಾನುಗಳನ್ನು ಮಾಡುವಾಗ ಉಜ್ಜುಗೊರಡು ಹೊಡಿದ ಬಳಿಕ ಈ ಮರದ ಯೆಲೆಗಳಿಂದ ತಿಕ್ಕಿ ಹೆಚ್ಚಿಗೆ ನುಣುಪು ಮಾಡುತ್ತಾರೆ.

ಖೈರದ ಮರ (ಖೈರ).—ಬಹಳ ಯೆತ್ತರವಾಗಿ ಬೆಳಿಯುವದಿಲ್ಲ. ಕಟ್ಟಿಗೆ ಬಿರುಸು, ಗಟ್ಟಿ, ತೆಂಗಿನಂತೆ ತಾಳಿಕೆಯುಳ್ಳದ್ದು. ಘನಫೂಟು ಬಲಿತ ಕಟ್ಟಿಗೆ ಸುಮಾರು ೮೦ ಪೌಂಡಿನ ತೂಕವಿರುತ್ತದೆ. ಈ ಕಟ್ಟಿಗೆಯನ್ನು ಕುದಿಸಿ ಕರೆಕಾಚು ಮಾಡುತ್ತಾರೆ. ಆ ಕಾಚು ವಿಳ್ಳೆಗೂ ಔಷಧಕ್ಕೂ ಬೇಕಾಗುತ್ತದೆ.

ಗೊಜ್ಜಲ (ಮೊಯಿ).—ಮಧ್ಯಮ ಆಕಾರದ್ದು. ಇಮಾರತಿಗೆ ಬರುತ್ತದೆ. ಅಂಟು ಔಷಧಿಯುಂಟು.

ಗೊಡ್ಡಹುಣಶಿ (ಸಿರಸ).—ಇದರ ಕಟ್ಟಿಗೆಯನ್ನು ಇಮಾರತಿಗೆ ಬಹಳವಾಗಿ ಹಾಕುವರು. ಘನಫೂಟನ ತೂಕ ೩೮ರಿಂದ ೫೩ ಪೌಂಡಿನ ವರೆಗೆ. ಇದರ ಬೀಜಗಳೂ ಅವುಗಳ ಯೆಣ್ಣೆಯೂ ಔಷಧಕ್ಕೆ ಬರುತ್ತವೆ.

ಗೋಡಂಬಿ (ಕಾಜೂ).—ಪ್ರಸಿದ್ಧ. ಕಟ್ಟಿಗೆ ಕೆಲಸಕ್ಕೆ ಬಾರದ್ದು. ಕಾಯಿಯ ಮೇಲಿನ ಚಿಪ್ಪಿನಿಂದ ಯೆಣ್ಣೆ ಹೊರಡುತ್ತದೆ. ಅದು ಮೈಗೆ ಹಚ್ಚಿದರೆ ಸುಡುತ್ತದೆ. ಗಿಡಕ್ಕೆ ಜಾಲಿಯ ಅಂಟನಂಥ ಅಂಟು ಹೊರಡುತ್ತದೆ. ಅದರಿಂದ ರೋಗಂದವಾಗುತ್ತದೆ. ಬೀಜಗಳೇ ಗೋಡಂಬೆಗಳು. ಅವನ್ನು ಸುಡುವರು. ಗೋಡಂಬೆಯಿಂದಲೂ ಯೆಣ್ಣೆ ಹೊರಡುತ್ತದೆ.

ಚಂದಕಲ (ಚಂದೋರ).—ದೊಡ್ಡ ಮರ; ಕಟ್ಟಿಗೆ ಕೆಲಸದ್ದಲ್ಲ. ಅಂಟು ಔಷಧಿ.

ಚನ್ನಂಗಿ (ಬೊಂದಾರ).—ಮಧ್ಯಮ ಆಕಾರದ್ದು. ಕಟ್ಟಿಗೆ ನಸುಗೆಂಪು, ಸರಳ, ಇಮಾರತಿಗೆ ಮೇಲಾದದ್ದು. ಘನಫೂಟನ ತೂಕ ೪೦ ಪೌಂಡು.

ಚಳ್ಳಿ (ಭೋಕರ).—ಮಧ್ಯಮ ತರದ ವೃಕ್ಷ; ಕಟ್ಟಿಗೆಯನ್ನು ಹಲಕೆಲವರು ಇಮಾರತಿಗೆ ಉಪಯೋಗಿಸುವರು. ತೋಟೆಯಿಂದ ಹಗ್ಗ ಹೊಸಿಯುವರು. ಹಣ್ಣು ಶೀ, ಬಹಳ ಜಿಗಟು. ತೋಟೆ, ಬೇರು, ಹಣ್ಣುಗಳು ಔಷಧಕ್ಕೆ ಬರುತ್ತವೆ.

ಜಂಬಿ (ಜಂಬಾ).—ದೊಡ್ಡ ಮರ, ಇದರ ಕಟ್ಟಿಗೆಯು ಕಬ್ಬಿಣವುಳ್ಳ ಕಟ್ಟಿಗೇ ಜಾತಿಗಳಲ್ಲಿ ವೊಂದು, ಊದೀ ಬಣ್ಣದ್ದು, ಬಹಳ ಬಿರುಸು, ತಾಳಿಕೆಯುಳ್ಳದ್ದು. ಘನಫೂಟನ ತೂಕ ೬೬ ಪೌಂಡು. ಎಲ್ಲ ಕೆಲಸಕ್ಕೆ ಬರುತ್ತದೆ. ಗೊರ್ಲಿ ಹತ್ತುವದಿಲ್ಲ. ಅರಗಿನ ಹುಳಗಳು ಈ ಮರದ ಮೇಲೆ ಇರುತ್ತವೆ.

ಜನಗಿ.—ಮಧ್ಯಮ ವೃಕ್ಷ. ಹಳದೀ ಬಣ್ಣದ ಫಲಗಳಾಗುತ್ತವೆ. ಅವುಗಳಿಂದ ಅರದಾಳದಂಥ ಅಂಟು ಸೋರುತ್ತದೆ.

ಜನಸಂಗ (ಖರಸಿಂಗ).—ದೊಡ್ಡ ಮರ. ಕಟ್ಟಿಗೆ ನುಣುಪು, ಶೋಭೆಯುಳ್ಳದ್ದು; ಇಮಾರತಿಗೂ ಶೋಭೆಯ ಸಾಮಾನುಗಳಿಗೂ ಬರುತ್ತದೆ.

ಜಮ್ಮಿ (ತಿರಫಳ).—ಮಧ್ಯಮ ವೃಕ್ಷ. ಕಟ್ಟಿಗೆ ಸಾಧಾರಣ. ಬೀಜಗಳ ಯೆಣ್ಣೆ ಔಷಧಿಯು.

ಜಮ್ಮಾರ್ಲ (ಉಗಾದ).—ಬಹು ದೊಡ್ಡ ಮರ. ಆದರೆ ಯಾವ ಕೆಲಸಕ್ಕೂ ಬರುವದಿಲ್ಲ.

ಜಾಜಿ (ಜಾಯಫಳ).—ಕಾಡು ಜಾಜಿ ಅಡವಿಯಲ್ಲಿ ಯೆತ್ತರವಾಗಿ ಬೆಳೆಯುತ್ತದೆ. ಕಾಯಿ, ಪತ್ರಿ, ಕಟ್ಟಿಗೆ ನಿರುಪಯೋಗಿ.

ಜಾಲಿ (ಬಾಭೂಳ).—ಕಟ್ಟಿಗೆಗೆ ಸಣ್ಣ ಯೆಳೆ, ನಾಶೀಬಣ್ಣ, ಬಿರಸು, ಜಿಗಟು. ಒಂದು ಘನಪೂಟು ಬಲಿತ ಕಟ್ಟಿಗೆ ಸುಮಾರು ೫೪ ಪೌಂಡು ಆಗುತ್ತದೆ. ಬಂಡಿಗಳು, ಯೆಣ್ಣೀಗಾಣ, ಕಬ್ಬಿನಗಾಣ, ಗಳೆದ ಸಾಮಾನುಗಳು, ಮುಂತಾದವುಗಳನ್ನು ಈ ಕಟ್ಟಿಗೆ ಯಿಂದ ಮಾಡುವರು. ಆದರೆ ಕಟ್ಟಿಗೆ ಬಹಳ ಡೊಂಕ ಇರುವದರಿಂದ ಇಮಾರತಿನ ಕೆಲಸಕ್ಕೆ ಬಹಳವಾಗಿ ಬರುವದಿಲ್ಲ. ಈ ಮರದಿಂದ ಬಿಳುವಾದ ಅಂಟು ಬಹಳ ಹುಟ್ಟು ತ್ತದೆ. ಇದರ ತೋಟೆಯು ಬಣ್ಣದ ಕೆಲಸಕ್ಕೆ ಬರುತ್ತದೆ. ಕುರಿ ಆಡುಗಳು ಜಾಲೀ ತೊಪ್ಪಲವನ್ನು ಪ್ರೀತಿಯಿಂದ ತಿನ್ನುತ್ತವೆ. ಜಾಲೀ ಮುಗುಳು ಹಲ್ಲು ಸೂಲಿಗೆ ಹಿತಕರವು.

ಜಾಲಿ, ಬಿಳೆ (ಹಿವಾರ).—ಕಟ್ಟಿಗೆ ಬಿರುಸು, ಗಟ್ಟಿ, ಬಹಳ ಕೆಲಸಕ್ಕೆ ಬರುತ್ತದೆ. ಘನಪೂಟು ಕಟ್ಟಿಗೆ ೫೫ ಪೌಂಡಿನ ತೂಕವಿರುತ್ತದೆ. ತೋಟೆಯಿಂದ ಸರಾಯ ಮಾಡುವರು, ಮತ್ತೂ ಅದರ ನಾರು ತೆಗಿದು ಹಗ್ಗಗಳನ್ನು ಹೊಸಿಯುವರು.

ತಡಸಲ (ಧಾಮಣ).—ತಕ್ಕ ಮಟ್ಟಿಗೆ ದೊಡ್ಡದು. ಕಟ್ಟಿಗೆ ನಸುಗೆಂಪು, ಗಟ್ಟಿ, ಸಣ್ಣ ಯೆಳೆ, ಮಣತದ್ದು; ಘನಪೂಟನ ತೂಕ ೩೦ರಿಂದ ೪೦ ಪೌಂಡಿನ ವರೆಗೆ. ಗಾಡಿ ಗಳಿಗೆ ಮೇಲಾದದ್ದು.

ತಾಳೆ (ಮಾಡ).—ಪ್ರಸಿದ್ಧ. ಕಟ್ಟಿಗೆ ಮಧ್ಯದಲ್ಲಿ ಪೊಳ್ಳಿರುತ್ತದೆ; ಆದರೂ ತಾಳಿಕೆ ಯುಳ್ಳದ್ದು; ಇಮಾರತಿಗೂ ತೋಟಗಳಲ್ಲಿ ಕಾವಲಿಗಳನ್ನು ಮಾಡಲಿಕ್ಕೂ ಬರುತ್ತದೆ. ಎಲೆ ಗಳನ್ನು ಮನೆಗೆ ಹೊಚ್ಚುವರು; ಅವುಗಳಿಂದ ಛತ್ತರಿಗೆಗಳಾಗುತ್ತವೆ. ರಸವನ್ನು ಕುದಿ ಸಿದರೆ ಸಕ್ಕರೆ ಹೊರಡುತ್ತದೆ; ಅಥವಾ ಅದರಿಂದ ಸರಾಯಿ ಮಾಡುವರು.

ತಾರಿ (ಗೊಪಿಂಗ, ಬೆಹೆಡಾ).—ದೊಡ್ಡ ಮರ; ಕಟ್ಟಿಗೆ ಹಳದೀ ಬಣ್ಣದ್ದು, ಬಹಳ ಕೆಲಸಕ್ಕೆ ಬರುವದಿಲ್ಲ. ಘನಪೂಟನ ತೂಕ ೪೦ ಪೌಂಡು. ಹೂ ಆದಾಗ ಕೆಟ್ಟ ನಾತ ಬರುತ್ತದೆ. ತಾರೀ ಕಾಯಿಯ ವ್ಯಾಪಾರ ಬಹಳ ನಡಿಯುತ್ತದೆ; ಬಣ್ಣಕ್ಕೂ ಚರ್ಮ ಮಿದು ಮಾಡಲಿಕ್ಕೂ ಬರುತ್ತದೆ. ಈ ಕಾಯಿಗಳನ್ನು ಚಿಗರೆ, ಆಡು, ದನಗಳು ತಿನ್ನು ತ್ತವೆ. ಬೀಜದಿಂದ ಯೆಣ್ಣೆ ಹೊರಡುತ್ತದೆ.

ತಾಳಿ (ತಾಳಿ, ತಾಳಿಪತ).—೬೦, ೭೦, ಫೂಟುಗಳ ವರೆಗೆ ಯೆತ್ತರವಾಗುವದು. ಇದರೊಳಗಿನ ಬೆಂಡು ಪುಡಿಮಾಡಿ, ಅದರ ರೊಟ್ಟಿಯನ್ನು ಮಾಡುವರು. ಎಲೆಗಳಿಂದ ಛತ್ತರಿಗೆಗಳಾಗುತ್ತವೆ. ಬೀಜಗಳು ಆನೇ ಹಲ್ಲಿನಂತೆ ಕೆಲಸಕ್ಕೆ ಬರುತ್ತವೆ. ಅವುಗಳನ್ನು ಅರಬರು ೨೦, ೨೫ ರೂಪಾಯಿಗೆ ಖಂಡಗ (೬೧೬ ಪಾ.) ದಂತೆ ಕೊಂಡು ವ್ಯಾಪಾರ ಕ್ಕೋಸ್ಕರ ವೊಯ್ಯುವರು.

ತುಂಡು, ದೇವದಾರ.—ಎತ್ತರವಾಗಿ ಬೆಳಿಯುತ್ತದೆ. ತೊಲೆ ನಸುಗೆಂಪು, ಹಗುರು, ಸರಳ, ಸಾಧಾರಣ ಗಟ್ಟಿ. ಕಟ್ಟಿಗೆ ಬೇಗ ಬಲಿಯುತ್ತದೆ; ಉಜ್ಜುಗೊರಡಿನಿಂದ ಬಹಳ ನುಣುಪಾಗುವದು. ಹೊಸಗಟ್ಟಿಗೆಗೆ ಸುಗಂಧವಿರುವದು. ಘನಪೂಟನ ತೂಕ ೩೧ ಪೌಂಡು. ಇದರ ಹಲಿಗೆಗಳಿಂದ ಕಡಿಮೇ ತರದ ಪೆಟ್ಟಿಗೆ ಮುಂತಾದ ಸಾಮಾನು ಗಳನ್ನು ಮಾಡುವರು. ಹೂಗಳಿಂದ ಹಳದೀ, ಕೆಂಪು ಬಣ್ಣಗಳಾಗುತ್ತವೆ.

ತೇಗು (ಸಾಗವಾನ).— ಪ್ರಸಿದ್ಧ. ಇದರ ತೊಲೆಗಳು ಭೂಮಿಯಲ್ಲಿ ಮೇಲಾದಂಥವು. ಕಾಳೀ ನದಿಯ ದಂಡೆಯಲ್ಲಿ ವಿಶೇಷವಾಗಿ ಬೆಳೆಯುತ್ತವೆ. ಅಲ್ಲಿ ಬುಡದಿಂದ ಮೊದಲಿನ ಕೊಂಬೆಯ ವರೆಗೆ ೮೦ ಫೂಟು ಯೆತ್ತರವೂ, ೧೨ ಫೂಟು ಸುತ್ತಳತೆಯ ಗಡು ತರವೂ ಇರುವವು. ಗುಂಡೆಂಬ ತಪ್ಪಲಿನಲ್ಲಿ ವೊಂದು ಮರದ ಸುತ್ತಳತೆ ೨೧ ಫೂಟು, ಅದರ ಬಳಿಯಲ್ಲಿ ಮತ್ತೊಂದರದು ೧೯ ಫೂಟು ಉಂಟು. ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲಿಯೂ ತೇಗಿನ ಮರಗಳುಂಟು. ಆದರೆ ಅವು ಬಹಳ ದೊಡ್ಡವಿರುವದಿಲ್ಲ. ೨೦೦೦ ಫೂಟಗಿಂತ ಯೆತ್ತರವಾದ ಪ್ರದೇಶದಲ್ಲಿ ಈ ಮರವು ಸರಸಾಗಿ ಬೆಳೆಯುತ್ತದೆ. ಬೀಜ ಬಿತ್ತಿ ಈ ಮರವನ್ನು ಬೆಳಿಸ ಬಹುದು; ಒಂದು ಮರವನ್ನು ಕಡಿದಲ್ಲಿ ಬೊಡ್ಡಿಯಿಂದ ಹೊಸ ಮರವು ಚಿಗಿಯುತ್ತದೆ. ಕಟ್ಟಿಗೆ ಬಹಳ ಬಿರುಸಿದ್ದಾಗ್ಯೂ ಕೆತ್ತಲಿಕ್ಕೆ ಬಹು ಮಿದು, ನುಣುಪಾಗುತ್ತದೆ, ಯಾವತ್ತು ಕೆಲಸಗಳಿಗೆ ಬರುತ್ತದೆ. ಘನಫೂಟಿನ ತೂಕ ೪೫ ಪೌಂಡು. ಬ್ರಹ್ಮ ದೇಶದ ತೇಗು ೪೩ ಪೌಂಡಿನ ತೂಕವಿರುತ್ತದೆ. ಈ ಕಟ್ಟಿಯಿಂದ ಮೇಲಾದ ಯೆಣ್ಣೆ ಹೊರಡುತ್ತದೆ; ಎಲೆಯಿಂದ ಕೆಂಪು ಬಣ್ಣ ಹುಟ್ಟುತ್ತದೆ.

ತೊಟ್ಟಲ (ವಾಘಾಂಟಿ).— ಮುಳ್ಳುಗಳುಳ್ಳ ಬಹು ಸಾಧಾರಣವಾದ ಬಳ್ಳಿಯು. ಕಾಯಿ ಪಲ್ಯಕ್ಕೆ ಬರುತ್ತದೆ. ಬೇರು ಔಷಧಕ್ಕೆ ಬರುತ್ತದೆ.

ತೋರತ್ತಿ (ಕಾಸ್ತೆಲ).— ಸುಂದರವಾದ ಉನ್ನತ ವೃಕ್ಷ. ಕಟ್ಟಿಗೆ ಇಮಾರತಿಗೆ ಬರುತ್ತದೆ. ಬೀಜದಿಂದ ದೀಪದ ಯೆಣ್ಣೆ ಹೊರಡುತ್ತದೆ.

ತೋರಾಟೆ (ಕೌಂಟೆಲ).— ಕಟ್ಟಿಗೆ ಗಾಡದ ಕೆಲಸಕ್ಕೆ ಮೇಲಾದದ್ದು. ಇದರ ಎಣ್ಣೆ ಔಷಧಕ್ಕೂ ದೀಪಕ್ಕೂ ಬರುತ್ತದೆ.

ದಸುರ್ಕ (ಪಾಂಢರೀ ಧಾಮಣ).— ಮಧ್ಯಮ ಆಕಾರದ್ದು. ಕಟ್ಟಿಗೆ ಗಳೀ ಸಾಮಾನಿಗೆ ಬರುತ್ತದೆ. ಅದರ ನಾರಿನಿಂದ ಹಗ್ಗ ಹೊಸಿಯುವರು.

ದಾಲಚಿನ್ನಿ.— ಅಡವಿಯಲ್ಲಿ ಬಹು ಸಾಧಾರಣವಾದದ್ದು; ಬಹಳ ಯೆತ್ತರವಾಗುವದಿಲ್ಲ. ಕಟ್ಟಿಗೆ ನಿರುಪಯುಕ್ತವಾದದ್ದು. ಇದರ ತೋಟೆಯೇ ದಾಲಚಿನ್ನಿ. ವ್ಯವಹಾರದಲ್ಲಿಯ ದಾಲಚಿನ್ನಿಗಿಂತ ಕಾನಡಾ ಜಿಲ್ಲೆಯ ದಾಲಚಿನ್ನಿಯು ಬಹಳ ಕಡಿಮೇ ತರದ್ದಿರುತ್ತದೆ. ಕಾಯಿಗಳಿಂದ ಯೆಣ್ಣೆ ಹೊರಡುತ್ತದೆ. ಅದು ಔಷಧಕ್ಕೆ ಬರುತ್ತದೆ.

ದಿಂಡಲ (ಧಾವರಾ).— ಅಡವಿಯ ಹೊರ ಅಂಚಿನಲ್ಲಿ ಯೆತ್ತರವಾಗಿ ಬೆಳೆಯುವದಿಲ್ಲ; ಬನದೊಳಗೆ ಇಮಾರತಿಗೆ ಬರುವ ಹಾಗೆ ಯೆತ್ತರವಾಗಿ ಬೆಳೆಯುತ್ತದೆ. ಕಟ್ಟಿಗೆ ಬೆಳ್ಳಗೆ, ಬಿರುಸು, ಜಿಗಟುಳ್ಳದ್ದು. ಘನಫೂಟಿನ ತೂಕ ೬೦ ಪೌಂಡು. ಒಕ್ಕಲಿಗರು ಗಳೀಯ ಸಾಮಾನುಗಳನ್ನೂ ಬಂಡಿಗಳನ್ನೂ ಇದರಿಂದ ಮಾಡುವರು. ಇದಕ್ಕೆ ಜಾಲಿಯ ಅಂಟಿನಂಥ ಅಂಟು ಹೊರಡುತ್ತದೆ.

ದೀಪಮಾಲೆ.— ಸಣ್ಣ ಗಿಡ; ದೊಡ್ಡ ಬಿಳಿ ಹೂಗಳಾಗುತ್ತವೆ. ಕಟ್ಟಿಗೆ ಬಿಳಿದು, ಸಣ್ಣ ಯೆಳೆಯುಳ್ಳದ್ದು, ಗಾಡದ ಕೆಲಸಕ್ಕೆ ಮೇಲಾದದ್ದು. ಇದರ ಅಂಟು (ಡಿಕೇ ಮಾಲಿ) ಹುಳ ಬಿದ್ದಂತ ಹುಣ್ಣುಗಳಿಗೂ ಬೇರೆ ಯೆಷ್ಟೋ ಔಷಧಗಳಿಗೂ ಬರುತ್ತದೆ.

ದೂಳ, ದೇವದಾರಿ, (ಪಬ್ಬ).—ಕಾನಡಾ ಜಿಲ್ಲೆಯ ಅತ್ಯುನ್ನತ ವೃಕ್ಷಗಳಲ್ಲಿ ವೊಂದು. ಬೊಡ್ಡಿಯ ಸುತ್ತಳತಿ ೧೦ ಫೂಟಿನ ವರೆಗೆ; ಬುಡದಿಂದ ವೊದಲನೇ ಟೊಂಗಿಯ ವರೆಗೆ ೫೦ರಿಂದ ೮೦ ಫೂಟಿನ ವರೆಗೆ ಸರಳವಾಗಿ ಮೇಲಕ್ಕೆ ಹೋಗಿರುವದು. ಇದರ ಕಟ್ಟಿಗೆಯ ವ್ಯಾಪಾರ ಬಹಳ ನಡಿಯುತ್ತದೆ. ಘನಫೂಟಿನ ತೂಕ ೪೦ ಪೌಂಡು. ಕಟ್ಟಿಗೆ ಯಾವತ್ತು ಕೆಲಸಕ್ಕೆ ಬರುವದು; ಅದರ ಯೆಳೆ ಸಣ್ಣ.

ದೊಡ್ಡೊಲೆ (ಸೋಫಿ).—ಬಹು ದೊಡ್ಡ ಮರ. ಕಟ್ಟಿಗೆ ಕೆಲಸಕ್ಕೆ ಬಾರದ್ದು.

ಧಾಮರೋಜ.—ತಕ್ಕ ಮಟ್ಟಿಗೆ ದೊಡ್ಡ ಮರ. ಕಟ್ಟಿಗೆಯು ಗಟ್ಟಿ ಅಲ್ಲ. ಆದರೆ ಅದರಿಂದ ಹಣಿಗೆ, ಕನ್ನಡಿಗಳ ಚೌಕಟ್ಟು, ಮುಂತಾದವುಗಳನ್ನು ಮಾಡುವರು.

ಧೂಪದ ಮರ.—ಬಹು ಸುಂದರವಾದ ಉನ್ನತ ವೃಕ್ಷವು. ಕಟ್ಟಿಗೆ ಕೆಲಸಕ್ಕೆ ಬಾರದ್ದು. ಅಂಟಿನಿಂದ ರೋಗಂದವಾಗುತ್ತದೆ. ಬೀಜಗಳಿಂದ ಹೊರಡುವ ಯೆಣ್ಣೇ ಉಂಡಿಯು ವಾತ ಶೂಲಿಗೆ ಮೇಲಾದ ಔಷಧವು.

ಧೂಪದ ಮರ (ಗುಗ್ಗುಳ).—ಇದು ಯೆತ್ತರವಾಗಿ ಬೆಳಿಯುತ್ತದೆ. ಇದರ ಕಟ್ಟಿಗೆ ಇಮಾರತೀ ಕೆಲಸಕ್ಕೆ ಬರುವದಿಲ್ಲ. ಇದರ ಅಂಟೇ ಗುಗ್ಗುಳವು.

ನಾಗ ಸಂಪಿಗೆ (ನಾಗ ಚಾಫಾ).—ಸುಂದರವಾದ ವೃಕ್ಷ; ಹೂ ಬಹು ಸುಗಂಧ. ಕಟ್ಟಿಗೆ ಬಹು ಬಿರುಸು, ಜಡ; ಆದರೆ ಇಮಾರತಿಗೆ ಹಾಕುವದಿಲ್ಲ. ಘನ ಫೂಟಿನ ತೂಕ ೬೯ ಪೌಂಡು.

ನಿರಸಲ.—ಸುಂದರವಾದ ವೃಕ್ಷವು. ಕಟ್ಟಿಗೆ ಕೆಲಸಕ್ಕೆ ಬರುವದಿಲ್ಲ. ಬೀಜಗಳ ಯೆಣ್ಣೆ ಔಷಧಕ್ಕೆ ಬರುತ್ತದೆ.

ನಿರ್ಮಳಿ.—ದೊಡ್ಡ ಮರ; ಹೂವಿಗೆ ಸುಗಂಧವಿರುತ್ತದೆ. ರಾಡಿ ನೀರೊಳಗೆ ಬೀಜಗಳನ್ನು ಚಲ್ಲಿದರೆ, ಆ ನೀರು ನಿರ್ಮಲವಾಗುತ್ತದೆ.

ನಿವಳಿ (ನೆವಳಿ).—ಕಂಟ; ಖೈ ಹಾಲು ಹೊರಡುತ್ತದೆ. ಇದರ ಬೀಜವನ್ನು ಪುಡಿ ಮಾಡಿ ರಾಡಿ ನೀರೊಳಗೆ ಚಲ್ಲಿದರೆ ನೀರು ತಿಳಿಯಾಗುತ್ತದೆ.

ನುಗ್ಗೆ (ಶೇವಗಾ).—ಕಟ್ಟಿಗೆ ಯಾತಕ್ಕೂ ಬಾರದ್ದು; ಕಾಯಿಯು ಪಲ್ಯಕ್ಕೆ ಬರುತ್ತದೆ; ಬೀಜದಿಂದ ಹೊರಡುವ ಯೆಣ್ಣೆ ಅಂಟು, ಹೂ, ಬೇರು, ತೋಟ, ವಾತ ರೋಗಕ್ಕೆ ಮೇಲಾದ ಔಷಧಗಳು.

ನೂರ್ಕಳ (ಚಾರ).—ಮಧ್ಯಮ ಆಕಾರದ ವೃಕ್ಷ. ಕಟ್ಟಿಗೆಯೊಳಗಿನ ಗಂಡು ಗಟ್ಟಿ ಇರುತ್ತದೆ. ಘನಫೂಟಿನ ತೂಕ ೩೬ ಪೌಂಡು. ಫಲವು ಕರೆ ಛಾಯೆಯ ಅಂಜೀರೀ ಬಣ್ಣದ್ದಾಗಿ ರುಚಿಯುಳ್ಳದ್ದಿರುತ್ತದೆ. ಬೀಜದಿಂದ ಯೆಣ್ಣೆಯನ್ನು ತೆಗಿಯುವರು.

ನೆರ್ಕಳ (ಭೇಡಸ).—ಮಧ್ಯಮ ಆಕಾರದ್ದು, ಸರುವುಗಳಲ್ಲಿ ಬೆಳಿಯುವದು. ಕಟ್ಟಿಗೆ ಇಮಾರತಿಗೂ ಗಳೆಯ ಸಾಮಾನಿಗೂ ಬರುತ್ತದೆ.

ನೇಲುರ್ಗ (ಜಾಂಭೂಳ).—ಬಹು ದೊಡ್ಡ ಮರ ಭವ್ಯವಾದದ್ದು. ಕಟ್ಟಿಗೆಯು ಬಹಳ ಕೆಲಸಕ್ಕೆ ಬರುತ್ತದೆ; ನೀರೊಳಗೆ ಕೊಳಿಯುವದಿಲ್ಲ, ಬಹು ದಿವಸ ತಾಳುವದು. ಘನಫೂಟಿನ ತೂಕ ೪೮ ಪೌಂಡು.

ನೆಲಧಾರೆ (ಘುಧಗುಸ).—ಎತ್ತರವಾಗಿ ಬೆಳಿಯುವದು, ಬಹು ಶೋಭೆಯುಳ್ಳದ್ದು. ಬೆಲೆಯುಳ್ಳ ಇಮಾರತಿಯ ಕಟ್ಟಿಗೆಯು. ಅದಕ್ಕೆ ಗೆದ್ದಲಿ ಹತ್ತುವದಿಲ್ಲ. ಘನಫೂಟಿನ ತೂಕ ೫೦ ಪೌಂಡು.

ನೆಲ್ಲಿ (ಆವಳಾ).—ಮಧ್ಯಮ ಆಕಾರದ್ದು, ಬಹು ಸಾಧಾರಣ ಕಟ್ಟಿಗೆ; ಬಹುಶಃ ಉಪಯೋಗದ್ದಲ್ಲ. ಕಾಯಿಗಳು ಔಷಧ ಮುಂತಾದ ಕೆಲಸಕ್ಕೆ ಬರುತ್ತವೆ.

ಬಸರಿ (ಪಿಂಪರಿ).—ಅರಳೀ ಜಾತೀದು. ಕಟ್ಟಿಗೆ ಕೆಲಸಕ್ಕೆ ಬರುವದಿಲ್ಲ.

ಪಿನಿವಾಲ (ನಾಂದರೂಖ).—ನಿಬಿಡವಾದ ಛಾಯೆಯುಳ್ಳದ್ದಾಗಿ ಬಹು ಮನೋಹರವಿರುತ್ತದೆ. ಕಟ್ಟಿಗೆ ಮಿದು, ಕೆಲಸಕ್ಕೆ ಬಾರದ್ದು.

ಪುಂಜೆ (ಪೊಯಿ).—ಇಪ್ಪತ್ತು ಫೂಟಗಿಂತ ಹೆಚ್ಚು ಯೆತ್ತರವಾಗುವದಿಲ್ಲ. ಕಟ್ಟಿಗೆ ಚಲೋದಿದ್ದಾಗ್ಯೂ ಉಪಯೋಗದೊಳಗಿಲ್ಲ. ಕಟ್ಟಿಗೇ ಸಾಮಾನುಗಳನ್ನು ನುಣುಪು ಮಾಡುವದಕ್ಕೋಸ್ಕರ ಇದರ ಎಲೆಗಳಿಂದ ತಿಕ್ಕುವರು. ಇದರ ಹಾಲು ಔಷಧಕ್ಕೆ ಬರುತ್ತದೆ.

ಪುತ್ರಂಜಿ.—ಮಧ್ಯಮ ಆಕಾರದ್ದು. ಕಟ್ಟಿಗೆ ಕೆಲಸದ್ದಲ್ಲ. ಇದರ ಕಾಯಿಗಳನ್ನು ಹುಡುಗರ ಕೊರಳಲ್ಲಿ ಕಟ್ಟಿದರೆ ಅವರಿಗೆ ಬೇನೆ ಬರುವದಿಲ್ಲಂತೆ. ಅದರಿಂದ "ಪುತ್ರಜೀವಿ" ಯೆಂಬ ಹೆಸರು ಬಂದದೆ. ಬೀಜವು ಗಂಟುಗಳಿಗೆ ಮೇಲಾದ ಔಷಧವು.

ಪೇರಲ (ಪೇರು).—ಪ್ರಸಿದ್ಧ. ಕಟ್ಟಿಗೆ ಚಿತ್ರ ಕೊರಿಯಲಿಕ್ಕೂ, ತುಬಾಕೀ ದಸ್ತಿಗೂ ಬರುತ್ತದೆ.

ಪೊಳಕಿ.—ಸಣ್ಣ ಗಿಡ; ಬೈಲು ಶೀಮೆಯ ಅಡವಿಯಲ್ಲಿ ಬಹಳ. ಕಟ್ಟಿಗೆ ಹಗುರು, ಮಿದು. ಗೋಕಾವಿ ಮುಂತಾದ ಕಡೆಯಲ್ಲಿಯ ಜೀನಗಾರರು ಈ ಕಟ್ಟಿಗೆಯಿಂದ ಬಣ್ಣದ ಫಲಗಳು ಮುಂತಾದ ಶೋಭೆಯ ವೊಡವೆಗಳನ್ನು ಮಾಡುವರು. ಬೀಜಗಳಿಂದ ಮೇಲಾದ ಯೆಣ್ಣೆ ಹೊರಡುತ್ತದೆ.

ಬಕುಳ (ಒವಾಳಿ).—ಸುಂದರವಾದ ಉನ್ನತ ವೃಕ್ಷ. ಕಟ್ಟಿಗೆ ನಸುಗೆಂಪು, ಸಣ್ಣ ಯೆಳೆ, ಬಹು ನುಣುಪು; ಇಮಾರತಿಗೆ ಬರುತ್ತದೆ. ಘನಫೂಟಿನ ತೂಕ ೬೧ ಪೌಂಡು. ಹೂ ಸುಗಂಧ; ಬೀಜದಿಂದ ಯೆಣ್ಣೆ ಹೊರಡುತ್ತದೆ; ಬೇರು ಕಾಯಿಗಳು ಔಷಧಿಯು.

ಬರಗಿ, ಪರಗಿ (ಕರವಂದ).—ಸಣ್ಣ ಗಿಡ, ಕಂಟಿಯ ಜಾತೀದು. ಇದರ ಹಣ್ಣು ಹುಳಿಯಾಗಿ ರುಚಿಕರವಿರುತ್ತದೆ; ಅದನ್ನು ತಿನ್ನುವರು.

ಬಸರಿ (ಪಾಂಢರಾ ಪಿಂಪಳ).—ಛಾಯೆಯ ವೃಕ್ಷ; ನೀರಿನ ಆಸರಕ್ಕೆ ಬೆಳಿಯುತ್ತದೆ. ಕಟ್ಟಿಗೆ ನೀರೊಳಗೆ ಕೊಳಿಯುವದಿಲ್ಲ.

ಬಸವನ ಪಾದ. — ವಿಸ್ತಾರವಾಗಿ ಬೆಳೆಯುತ್ತದೆ. ಕಟ್ಟಿಗೆಯು ಕೆಲಸಕ್ಕೆ ಬರುವದಿಲ್ಲ.

ಶಿಯೌಡ್ಲ (ಕಾಂಚನ). — ಸಣ್ಣ ವೃಕ್ಷ. ಕಟ್ಟಿಗೆ ಗಟ್ಟಿ. ಆದರೆ ಇಮಾರತಿಗೆ ಬರುವದಿಲ್ಲ.

ಬಗನಿ. — ಬಹಳ ಯೆತ್ತರವಿರುವದಿಲ್ಲ; ಕಟ್ಟಿಗೆಯು ಮೇಲಾದದ್ದೆಂದು ಹೇಳುತ್ತಾರೆ.

ಬಣಾದುಗಿರ್. — ಧಾರವಾಡ ಜಿಲ್ಲೆಯಲ್ಲಿ ಅತಿ ಸಾಧಾರಣವಾದದ್ದು. ಇದರ ಯೆಲೆಯ ಮೇಲೆ ಹಳದೀ ಬಣ್ಣದ ಅಂಟು ಮೆತ್ತಗಿರುತ್ತದೆ. ಅದು ನಿರುಪಯುಕ್ತ.

ಬಾಚಂಗೆ (ಪನಿಯಾರ). — ಎತ್ತರವಾದ ವೃಕ್ಷವು. ಇದರ ಕಟ್ಟಿಗೆಯಿಂದ ಹಣಿಗೆಗಳನ್ನೂ, ಕರಡಿಗೆ ಮುಂತಾದ ಶೋಭೆಯ ವೊಡವೆಗಳನ್ನೂ ಮಾಡುತ್ತಾರೆ.

ಬಾಳಾಯಿ (ತುವ್ರಿ). — ಮಧ್ಯಮ ಆಕಾರದ್ದು. ಹಳೆ ಮರದ ಕಟ್ಟಿಗೆಯೊಳಗಿನ ಗಂಡು ಕರೆದಾಗಿ ಆಬನಸದ ಹಾಗೆ ಇರುತ್ತದೆ. ಆದರೆ ಅದರ ಮೇಲೆ ಹಳದೀ ರೇಖೆಗಳಿರುತ್ತವೆ. ಇದರ ಕಟ್ಟಿಗೆಯು ಗಟ್ಟಿ, ಜಿಗಟುಳ್ಳದ್ದು, ತಾಳಿಕೆಯುಳ್ಳದ್ದು; ಆದಾಗ್ಯೂ ಇದಕ್ಕೆ ಬಹಳ ಬೆಲೆ ಬರುವದಿಲ್ಲ. ಘನಫೂಟಿನ ತೂಕ ೫೦ರಿಂದ ೭೦ ಪೌಂಡುಗಳ ವರೆಗೆ. ಇದರ ಹಣ್ಣುಗಳನ್ನು ಜನರು ಪ್ರೀತಿಯಿಂದ ತಿನ್ನುವರು.

ಬಿದುರುಗಳು (ವೇಳೂ). — ಅತ್ಯುಪಯುಕ್ತವಾದದ್ದು. ಗಡು ತರವಾದ ಬಿದುರಿಗೆ ಡವಿಗೆ ಯೆಂದೆನ್ನುವರು. ಇಮಾರತಿಗಳು, ಚಪ್ಪರ, ನಿಚ್ಚಣಿಕೆ, ನೀರಿನ ಕೊಳವೆ, ತೆಪ್ಪ, ಡೇರೆಗಳ ಕಂಬ, ಡೋಣಿಗಳ ಕಂಬ, ಮುಂತಾದ ಕೆಲಸಕ್ಕೆ ಅದು ಉಪಯೋಗಿಸುವದು. ಮಧ್ಯಮ ತರದ ಬಿದುರಿಗೆ ಮ್ಯಾದಾರರು ಗಳವೆಂದೆನ್ನುವರು. ಅದಾದರೂ ಇಮಾರತಿಯ ಕೆಲಸಕ್ಕೂ ಚಪ್ಪರ ಮುಂತಾದ ಕೆಲಸಗಳಿಗೂ ಬರುವದಲ್ಲದೆ, ಮ್ಯಾದಾರರ ಹೋರೆಯು ಅದರಿಂದ ಸಾಗುತ್ತದೆ. ಅವರು ಆ ಗಳವನ್ನು ಶೀಳಿ, ಬುಟ್ಟಿ, ಮೊರ, ಸಾಣಿಗೆ, ಚಾಪಿ, ಮುಂತಾದ ಸಾಮಾನುಗಳನ್ನು ಮಾಡುವರು. ಸಣ್ಣ ಬಿದುರಿಗೆ ಕಿರಿ ಬಿದುರು ಅಥವಾ ಶೀಬು ಯೆಂಬ ಹೆಸರುಂಟು. ಇವು ವಿಶೇಷವಾಗಿ ಛಾವಣಿಗೂ, ಛಾಲಿ ಬರ್ಚಿಗಳ ಗಣಿಗಳಿಗೂ, ಕೋಲುಗಳಿಗೂ ಬರುತ್ತವೆ. ಶೀಮಾ ಬಿದುರೆಂಬ ಗಳಗಳು ಗಟ್ಟಿ ಇರುತ್ತವೆ. ಅವು ಬಹು ದಿವಸ ತಾಳುವದರಿಂದ ಮೇಲೆ ಹೇಳಿದ ಕೆಲಸಗಳಿಗೆ ಹೆಚ್ಚಿಗೆ ಉಪಯೋಗಿಸುತ್ತವೆ. ಡವಿಗೆಯು ಹತ್ತರಿಂದ ಹದಿನೈದು ವರ್ಷಗಳ ವರೆಗೆ ಬಲಿಯುತ್ತದೆ. ಪೂರಾ ಬಲಿತ ಬಳಿಕ ಅದರ ಬುಡದಿಂದ ಅಂಕುರಗಳು ಹುಟ್ಟಿ ವೊಂದು ವರ್ಷದೊಳಗೆ ೭೦ರಿಂದ ೯೦ ಫೂಟುಗಳ ವರೆಗೆ ಯೆತ್ತರವಾಗುತ್ತವೆ. ೩೦ ವರ್ಷಗಳಾದ ಬಳಿಕ ಡವಿಗೆಗಳಿಗೆ ಬೀಜಗಳಾಗಿ, ಮುಂದೆ ಬೇಗ ಅವು ಸಾಯುತ್ತವೆ. ಆ ಬೀಜಗಳಿಗೆ ಬಿದರಕ್ಕಿ ಯೆಂದೆನ್ನುವರು. ಆದರೆ ಕಾನಡಾ ಜಿಲ್ಲೆಯವರು ಅರವತ್ತು ವರ್ಷಗಳಾದ ಬಳಿಕ ಬಿದರಕ್ಕಿಗಳಾಗುತ್ತವೆಂದು ಹೇಳುತ್ತಾರೆ. ಒಂದು ಪ್ರಾಂತದೊಳಗಿನ ಡವಿಗೆಗಳಿಗೆಲ್ಲ ಅಕ್ಕಿಗಳು ವೊಮ್ಮೇಲೆ ಆಗುತ್ತವೆ. ಈ ಅಕ್ಕಿಗಳನ್ನು ಜನರು ತಿನ್ನುವರು. ಇವುಗಳ ಗುಣವು ಗೋದಿಯ ಗುಣವನ್ನು ಹೋಲುತ್ತದೆ; ಆದರೆ ವಿಶೇಷವಾಗಿ ದಾಹಕರವುಂಟು. ಸನ್‌ ೧೮೬೪, ೧೮೬೬ ಈ ವರ್ಷಗಳಲ್ಲಿ ಕಾನಡಾ ಜಿಲ್ಲೆಯ ಬಿದುರು

ಗಳಿಗೆ ಅಕ್ಕಿಗಳು ಹೇರಳವಾಗಿ ಬೆಳಿದದ್ದರಿಂದ ಆ ಬರಗಾಲದಲ್ಲಿ ಜನರಿಗೆ ಬಹಳ ಆಶ್ರಯವಾಯಿತು. ಧಾರವಾಡ, ಬೆಳಗಾವಿ, ಲಿಂಗಸೂರು, ಮುಂತಾದ ಕಡೆಯಿಂದ ಜನರು ಬಂದು ಬಿದರಕ್ಕಿಯನ್ನು ತುಂಬಿಕೊಂಡು ಹೋದರು. ಡವಿಗೆಗೆ ಹೂವಾಯಿತೆಂದರೆ ಮುಂದೆ ಅದರಿಂದ ಅಂಕುರಗಳು ಹುಟ್ಟುವದಿಲ್ಲ. ಮ್ಯಾದಾರ ಗಳ, ಕಿರಿ ಬಿದುರು, ಮುಂತಾದ ಜಾತಿಗಳಿಗೆ ೭ರಿಂದ ೩೦ ವರ್ಷಗಳ ವರೆಗೆ ಅಕ್ಕಿ ಆಗುವ ಮುದ್ದತು ಇರುತ್ತದೆ. ಈ ಅಕ್ಕಿಗಳು ಸಹ ಆಹಾರಕ್ಕೆ ಬರುತ್ತವೆ.

ಬಿಳಿನಂದಿ (ನಾಣ).—ಸುಂದರವಾದ ಉನ್ನತ ವೃಕ್ಷ. ಕಟ್ಟಿಗೆ ಇಮಾರತಿಗೆ ಮೇಲಾದದ್ದು; ಹವೆಯಲ್ಲಿ ಕೆಡುತ್ತದೆ, ಗೊರ್ಲಿ ಹತ್ತುವದು. ಘನಫೂಟಿನ ತೂಕ ೩೭ ಪೌಂಡು.

ಬಿಳಿ ಬೂರ್ಲು (ಪಾಂಢರೀ ಸಾವರಿ).—ತಕ್ಕಮಟ್ಟಿಗೆ ದೊಡ್ಡ ಮರವು. ಇದರ ಕಾಯೊಳಗಿನ ಹತ್ತಿಯು ಹಲ ಕೆಲವು ಕೆಲಸಕ್ಕೆ ಬರುತ್ತದೆ.

ಬಿಳ್ಳಂಬಿ (ಲಾಲಿ).—ಇದು ಬಹಳ ಯೆತ್ತರವಾಗಿ ಬೆಳಿಯದಿದ್ದರೂ ಇದರ ಟೊಂಗೆಗಳು ಗಡುತರವಾಗಿ ದೂರ ದೂರ ಹಬ್ಬುತ್ತವೆ. ಕಟ್ಟಿಗೆ ಬಹಳ ಗಟ್ಟಿ, ತಾಳಿಕೆಯಳ್ಳದ್ದು, ಘನಫೂಟಿನ ತೂಕ ೭೦ ಪೌಂಡು. ಕಾನಡಾ ಜಿಲ್ಲೆಯಲ್ಲಿ ಇದನ್ನು ಇಮಾರತಿಗೆ ಬಹಳ ಉಪಯೋಗಿಸುವರು.

ಬೀಟ (ಸಿಸು).—ಪ್ರಸಿದ್ಧ. ಇದರ ತೊಲೆಗಳು ಮೇಲಾದ ಜಾತಿಗಳಲ್ಲಿ ಹೆಸರಾದಂಥವು. ಕಟ್ಟಿಗೆ ಬಹಳ ಗಟ್ಟಿ, ಬಿರಸು, ಸಣ್ಣ ಯೆಳಿ, ಕಪ್ಪು ಬಣ್ಣದ್ದು. ಉಜ್ಜುಗೊರಡಿನಿಂದ ಬಹಳ ನುಣುಪಾಗುತ್ತದೆ. ಘನಫೂಟಿನ ತೂಕ ೫೦ ಪೌಂಡು. ಇದರಿಂದ ಖುರ್ಚಿ, ಮೇಜು, ಮುಂತಾದ ಸಾಮಾನುಗಳು ಬಹು ಸುಂದರವಾಗುತ್ತವೆ.

ಬೂರ್ಲ (ಶೇವರಿ).—ನೆಟ್ಟಗೆ ಬಹಳ ಯೆತ್ತರವಾಗಿ ಬೆಳಿಯುತ್ತದೆ; ಬೊಡ್ಡಿ ಬಹು ಗಡುತರವಾಗುತ್ತದೆ. ಕಟ್ಟಿಗೆ ಮಿದು, ಕೆಲಸಕ್ಕೆ ಬಾರದ್ದು. ತೋಟಿಗೆ ಕಚ್ಚು ಮಾಡಿದರೆ ಕಪ್ಪು ಬಣ್ಣದ ಅಂಟು ಸೋರುವದು. ಅದು ಔಷಧಕ್ಕೆ ಬರುತ್ತದೆ. ಕಾಯಿಯೊಳಗೆ ಜಿಗಟಿಲ್ಲದ ಹತ್ತಿ ಇರುತ್ತದೆ.

ಬೆಂದಕರಿಕೆ (ಕರವಾಳಿ).—ಸಣ್ಣ ಮರ. ಅಡವಿಯನ್ನು ಸುಟ್ಟಲ್ಲಿ ಹುಟ್ಟುತ್ತದೆ. ಕಟ್ಟಿಗೆ ಕೆಲಸದ್ದಲ್ಲ. ತೋಟಿಯಿಂದ ನಾರು ಹೊರಡುತ್ತದೆ.

ಬೆಲಪತ್ರಿ (ಬೇಲ).—ಈ ಪವಿತ್ರ ಮರವನ್ನು ಹಿಂದೂ ಜನರು ಕಡಿಯುವದಿಲ್ಲ. ಇದರ ಕಟ್ಟಿಗೆಯು ಸಣ್ಣ ಯೆಳಿಯುಳ್ಳದ್ದು. ಘನಫೂಟು ಬಲಿತ ಕಟ್ಟಿಗೆ ೪೩ ಪೌಂಡು ಇರುತ್ತದೆ. ಇದರ ಕಾಯಿ ಅತಿಸಾರದ ಔಷಧಕ್ಕೆ ಬರುತ್ತದೆ.

ಬೆಲ್ಲಾಟ.—ಎತ್ತರವಾಗಿ ಬೆಳಿಯುತ್ತದೆ. ಇದರ ತೊಲೆಗಳನ್ನು ಇಮಾರತಿಗೆ ಬಹಳ ಹಾಕುವರು.

ಬೇವು (ನಿಂಬ).—ಪ್ರಸಿದ್ಧ. ಒಣ ಭೂಮಿಯಲ್ಲಿ ಬೆಳಿಯುವದು. ಕಟ್ಟಿಗೆ ಇಮಾರತಿಗೆ ಬರುತ್ತದೆ. ಒಳಗಿನ ಗಂಡು ಕೆಂಪು, ಬಹಳ ತಾಳಿಕೆಯುಳ್ಳದ್ದು. ಘನಫೂಟಿನ

ತೂಕ ೩೦ ಪೌಂಡು. ತೋಟೆ, ಯೆಲೆ, ಕಾಯಿ ಬಹಳ ಖೈ, ಔಷಧಕ್ಕೆ ಬರುತ್ತವೆ. ಬೀಜದಿಂದ ಯೆಣ್ಣೆ ಹೊರಡುತ್ತದೆ. ಕಟ್ಟಿಗೆಗೆ ಗೊರ್ಲಿ ಹತ್ತುವದಿಲ್ಲ.

ಬೈನಿ (ಬೆಲ್ರಿ). — ಕಟ್ಟಿಗೆ ನಾರುಳ್ಳದ್ದು, ಬಿರುಸು, ಗಳೆಯ ಕೆಲಸಕ್ಕೆ ಬರುತ್ತದೆ. ಅದರೊಳಗಿನ ಬೆಂಡು ಸಬ್ಬಕ್ಕಿಯ ತರದ್ದಾಗಿ ಆಹಾರಕ್ಕೆ ಬರುತ್ತದೆ; ರಸದಿಂದ ಅರ್ಕ ತೆಗಿದು ಸರಾಯ ಮಾಡುವರು; ಎಲೆಯಿಂದ ನಾರು ಹೊರಡುತ್ತದೆ.

ಬೊಂದಬಾಳೆ (ಪಡವಳೆ). — ಮಧ್ಯಮ ಆಕಾರದ್ದು. ಕಟ್ಟಿಗೆ ಇಮಾರತಿಗೆ ಬರುತ್ತದೆ. ಘನಪ್ಪೂಟನ ತೂಕ ೪೫ ಪೌಂಡು.

ಬೊಬ್ಬಿ (ಇರಯಿ). — ನೀರಿನ ಆಸರಕ್ಕೆ ಯೆತ್ತರವಾಗಿ ಬೆಳಿಯುತ್ತದೆ. ಕಟ್ಟಿಗೆ ಗಟ್ಟಿ, ಶೋಭೆಯುಳ್ಳದ್ದು. ಬೀಜದಿಂದ ಮೇಲಾದ ಯೆಣ್ಣೆ ಹೊರಡುತ್ತದೆ.

ಬೋರೆ, ಇಳಂಜಿ (ಬೋರ). — ಮಧ್ಯಮ ಆಕಾರದ್ದು, ತೋಟಗಳಲ್ಲಿ ವಿಶೇಷ. ಕಟ್ಟಿಗೆ ಕರೆದು, ಗಟ್ಟಿ, ನುಣುಪು, ತಾಳಿಕೆಯುಳ್ಳದ್ದು; ಇಮಾರತಿಗೂ ಬೇರೆ ಕೆಲಸಕ್ಕೂ ಬರುತ್ತದೆ. ತೋಟದ ಬೋರೇ ಹಣ್ಣು ಬಹಳ ರುಚಿ. ತೋಟೆಯು ಚರ್ಮ ಮಿದು ಮಾಡಲಿಕ್ಕೆ ಬರುತ್ತದೆ. ಅಂಟು, ಬೇರು, ತೋಟೆ, ಬೀಜ ಔಷಧಿಗಳು.

ಮಂಜೂತಿ (ಮಂಜಿಷ್ಟ). — ಎತ್ತರವಾಗಿ ಬೆಳಿಯುತ್ತದೆ. ಕಟ್ಟಿಗೆ ಬಲಿತದ್ದು ಘನಪ್ಪೂಟಿಗೆ ೫೬ ಪೌಂಡಿನಂತೆ ತೂಕವಿರುತ್ತದೆ. ಈ ಕಟ್ಟಿಗೆ ಗಟ್ಟಿ ಇದ್ದಾಗ್ಯೂ ಜನರು ಬಹಳವಾಗಿ ಉಪಯೋಗಿಸುವದಿಲ್ಲ. ಇದರಿಂದ ಕೆಂಪು ಬಣ್ಣವಾಗುತ್ತದೆ. ಅದನ್ನು ಬ್ರಾಹ್ಮಣರು ಹಣೆಗೆ ಹಚ್ಚಿ ಕೊಳ್ಳುವರು. ಈ ಕಟ್ಟಿಗೆಯು ಔಷಧಕ್ಕೆ ಬಹಳ ಉಪಯೋಗಿಸುತ್ತದೆ.

ಮುಂದರ. — ಶೋಭೆಯ ವೃಕ್ಷ; ಹೂಗಳು ತರ ತರದ ಬಣ್ಣವುಳ್ಳವು; ಕಟ್ಟಿಗೆ ಗಟ್ಟಿ, ಕೆಲಸಕ್ಕೆ ಬರುತ್ತದೆ; ಆದರೆ ಬಹಳ ಗಡುತರವಾಗುವದಿಲ್ಲ. ಇದರ ತೋಟೆಯು ಬಣ್ಣದ ಕೆಲಸಕ್ಕೂ ಚರ್ಮ ಮಿದು ಮಾಡುವ ಕೆಲಸಕ್ಕೂ ಬರುತ್ತದೆ.

ಮತ್ತಿ (ಐನ). — ಬಹಳ ಸರಳ, ಯೆತ್ತರ ಬುಡದಲ್ಲಿ ತಕ್ಕ ಮಟ್ಟಿಗೆ ಗಡುತರ; ಕಟ್ಟಿಗೆ ಕಪ್ಪು, ಬಿರುಸು, ತಾಳಿಕೆಯುಳ್ಳದ್ದು; ಇಮಾರತು ಮುಂತಾದ ಬಹಳ ಕೆಲಸಕ್ಕೆ ಬರುತ್ತದೆ. ಘನಪ್ಪೂಟನ ತೂಕ ೬೦ ಪೌಂಡು. ತೋಟೆ ಚರ್ಮ ಮಿದು ಮಾಡಲಿಕ್ಕೆ ಬರುತ್ತದೆ.

ಮಶವಾಳ (ಸಾಂಢರಿ). — ಇದು ಕಾನಡಾ ಜಿಲ್ಲೆಯಲ್ಲಿ ದೊರೆಯುವದಿಲ್ಲ. ಬೆಳಗಾವಿ, ವಿಜಾಪುರ ಜಿಲ್ಲೆಗಳಲ್ಲಿ ಬೆಳಿಯುತ್ತದೆ. ಕಟ್ಟಿಗೆ ಬಿರುಸು, ತಾಳಿಕೆಯುಳ್ಳದ್ದು, ಎಳೆ ಸಣ್ಣ; ಗಾಡದಿಂದ ಹುಟ್ಟುವ ಶೋಭೆಯ ಕೆಲಸಗಳಿಗೆ ಮೇಲಾದದ್ದು. ಆದರೆ ಬಹಳ ದೊಡ್ಡದಾಗಿ ಬೆಳಿಯುವದಿಲ್ಲ. ಘನಪ್ಪೂಟನ ತೂಕ ೫೪ ಪೌಂಡು.

ಮಾಲಕಾಂಗೋಣಿ. — ಸಣ್ಣ ಗಿಡ, ಔಷಧಕ್ಕೆ ಬರುತ್ತದೆ. ಕಟ್ಟಿಗೆ ತಕ್ಕ ಮಟ್ಟಿಗೆ ಗಟ್ಟಿ; ಆದರೆ ಉಪಯೋಗಿಸಲ್ಪಡುವದಿಲ್ಲ.

ಮಾವು (ಆಂಬಾ). — ಪ್ರಸಿದ್ಧ.

ಘುತ್ತಲ (ಪಳಸ).—ಅಡವಿಯಲ್ಲಿ ಸಾಧಾರಣವಾದದ್ದು. ಕೆಂಪು ಹೂಗಳಿಂದ ಈ ವೃಕ್ಷವೆಲ್ಲ ಮುಚ್ಚಿದಾಗ ರಮಣೀಯವಾಗಿ ಕಾಣುವದು. ಆ ಹೂಗಳಿಂದ ಹಳದೀ ಬಣ್ಣ ಹುಟ್ಟುತ್ತದೆ. ಕಚ್ಚು ಹಾಕಿದರೆ ಔಷಧಕ್ಕೆ ಉಪಯುಕ್ತವಾದ ಹಾಲು ಹೊರಡುತ್ತದೆ. ಕಟ್ಟಿಗೆ ಕೆಲಸಕ್ಕೆ ಬಾರದ್ದು.

ಮುರ್ಗಳ (ಭಿರಂದ).—ಸಾಧಾರಣವಾದದ್ದು, ಆಕಾರ ಮಧ್ಯಮ; ಕಟ್ಟಿಗೆ ಲಿಂಬೀ ಬಣ್ಣದ್ದು, ಸರಳ, ಭಾರಕ್ಕೆ ಮಣಿಯುವಂಥಾದ್ದು. ಇದರ ಕಾಯಿಯ ತೋಟೆಯೇ ಅಮಸೋಲು. ಬೀಜದಿಂದ ಹೊರಡುವ ಸೋಲಮೇಣ (ಕೋಕಂಬ) ವೆಂಬ ಯೆಣ್ಣೆಯು ಔಷಧಕ್ಕೆ ಬರುತ್ತದೆ.

ಮುಳ್ಳುಕಾರೆ (ಕಾಟೆಗೊತ್ತಿ).—ಸಾಧಾರಣವಾದ ಸಣ್ಣ ಗಿಡ. ಕಟ್ಟಿಗೆ ಹಳದೀ ಬಣ್ಣದ್ದು, ಗಟ್ಟಿ, ತಾಳಿಕೆಯುಳ್ಳದ್ದು; ದೀವಟಗೆಗೂ ಗಳೆಯ ಸಾಮಾನಿಗೂ ಬರುತ್ತದೆ. ಕಾಯಿಗಳಿಂದ ಚರ್ಮಕ್ಕೆ ಕರೆ ಬಣ್ಣ ಕೊಡುವರು.

ಮುಳ್ಳುಹೊನ್ನೆ (ಕಾಟಾಕೌಂಚಿ).—ಗಡುತರವಾಗಿ ಬೆಳೆಯುತ್ತದೆ. ಕಟ್ಟಿಗೆ ಗಟ್ಟಿ, ಜಿಗಟುಳ್ಳದ್ದು, ನೀರಿಗೆ ಕೆಡುವದಿಲ್ಲ. ಇದನ್ನು ಇಮಾರತಿಗೆ ಹಾಕುವರು.

ಮುಳ್ಳುಮುತ್ತಲ (ಪಾಂಗಾರಾ).—ಮಧ್ಯಮ ಆಕಾರದ್ದು. ಇದರ ಮಿದುವಾದ ಕಟ್ಟಿಗೆಯಿಂದ ಪೆಟ್ಟಿಗೆ ಮುಂತಾದವುಗಳನ್ನು ಮಾಡುವರು.

ಮೋಕ.—ಮಧ್ಯಮ ಆಕಾರದ್ದು. ಕಟ್ಟಿಗೆ ಬಿರುಸು, ನುಣಪು; ಗಾಡಕ್ಕೆ ಬರುತ್ತದೆ.

ಯೆಲ್ಲಳ (ಅರಸುಲ).—ಸುಂದರವಾದ ವೃಕ್ಷ; ಕಟ್ಟಿಗೆ ಹಳದೀ ಬಣ್ಣದ್ದು, ಎಳೆ ಸಣ್ಣ, ಗಟ್ಟಿ, ತೋಲಾದದ್ದು.

ರಾಳಧೂಪ (ರಾಳ).—ಸುಂದರವಾದ ವೃಕ್ಷವು. ಇದರ ಅಂಟಿಗೆ ರಾಳವೆನ್ನುವರು. ಅದು ಔಷಧಕ್ಕೆ ಬರುತ್ತದೆ.

ರಾಮಿ (ರಾಮಿಟ).—ಸಣ್ಣ ಗಿಡ. ತೊಪ್ಪಲವನ್ನು ನೀರೊಳಗೆ ಚಲ್ಲಿದರೆ ಮೀನುಗಳು ನಿಶ್ಚೇತನವಾಗುತ್ತವೆ. ಕಟ್ಟಿಗೆಯಾಗಲಿ ಅದರ ಬೂದಿಯಾಗಲಿ ಹಲ್ಲಿಗೆ ಹತ್ತಿದರೆ ಬೀಳುತ್ತವೆಂದು ಹೇಳುತ್ತಾರೆ.

ರುದಾಕ (ರುದ್ರಾಕ್ಷ).—ಬಹು ದೊಡ್ಡ ಮರ. ಇದರ ಬೀಜಗಳೇ ರುದ್ರಾಕ್ಷ ಮಣಿಗಳು. ಇದರ ಕಟ್ಟಿಗೆ ನಿರುಪಯೋಗಿ.

ಲಕ್ಕಿ (ನಿಗುರ್ಗಂಡಿ).—ಸಣ್ಣ ಮರ. ಕಟ್ಟಿಗೆ ಜಿಗಟು, ಗಟ್ಟಿ; ಆದರೆ ಉಪಯೋಗದೊಳಗಲ್ಲ. ಯೆಲೆ, ಬೇರು, ಔಷಧಿಗಳು.

ಲಿಂಬೆ.—ಸಹ್ಯಾದ್ರಿಯ ಹಳ್ಳಿಗಳಲ್ಲಿ ಬಹಳ ಬೆಳೆಯುತ್ತವೆ. ವ್ಯವಹಾರದಲ್ಲಿ ಇದು ಪ್ರಸಿದ್ಧ ಉಂಟು.

ವಂಟೆ (ವೊಟಂಬಾ).—ಇದರ ಕಟ್ಟಿಗೆ ಮಿದು. ಕಾಯಿಯನ್ನು ಮಸಾಲೆಯಲ್ಲಿ ಹಾಕುವರು.

ವುಮ (ಉಂಡಿ).—ಸಮುದ್ರತೀರದಲ್ಲಿ ಬಹಳ ಯೆತ್ತರವಿರುವದಿಲ್ಲ; ಆದರೆ ಅಡವಿಯಲ್ಲಿ ಗಗನಚುಂಬಿಯಾಗಿ ಬೆಳಿಯುವದು. ಕಟ್ಟಿಗೆಯು ಗಡುತರ ಯೆಳಿಯುಳ್ಳದ್ದಾದಾಗ್ಯೂ ಕೆಲಸಕ್ಕೆ ಬರುತ್ತದೆ. ಇದರ ಬೀಜದಿಂದ ಹೊರಡುವ ಯೆಣ್ಣೆಯನ್ನು ಕಾನಡಾ ಜಿಲ್ಲೆಯಲ್ಲಿ ಬಹಳವಾಗಿ ಉಪಯೋಗಿಸುವರು. ಸಮುದ್ರತೀರದಲ್ಲಿ ಒಕ್ಕಲಿಗರು ಈ ಮರಗಳನ್ನು ಬೆಳಿಸುವರು.

ವೋವಾಳಿ.—ದೊಡ್ಡ ವೃಕ್ಷ. ಕಟ್ಟಿಗೆಯಿಂದ ಬಂಡಿಗಳನ್ನು ಮಾಡುವರು.

ಶಮಿ, ಕೆಂಪು ಖೈರ (ಲಾಲಖೈರ).—ಇದು ಖೈರದ ಹಾಗೇ ಇರುತ್ತದೆ.

ಶಿವನಿ (ಶಿವಣ).—ಮೇಲಾದ ಉನ್ನತ ವೃಕ್ಷವು. ಕಟ್ಟಿಗೆ ಬಿಳಪಿನ ಮೇಲೆ; ಎಳಿ ಸಣ್ಣ, ಗಟ್ಟಿ; ಆದರೆ ಜಡವಲ್ಲ. ಘನಪೂಟಿನ ತೂಕ ೩೦ರಿಂದ ೪೦ ಪೌಂಡಿನ ವರೆಗೆ. ಬಲಿತ ಕಟ್ಟಿಗೆ ಶೀಳುವದಿಲ್ಲ, ಬಣ್ಣವನ್ನು ವೊಳಿತಾಗಿ ತಕ್ಕೊಳ್ಳುತ್ತದೆ; ನೀರೊಳಗೆ ಕೆಡುವದಿಲ್ಲ. ಈ ಕಟ್ಟಿಗೆಯನ್ನು ಇಮಾರತಿಗೆ ಬಹಳ ಉಪಯೋಗಿಸುವರು. ಕಾಯಿ, ತೋಟೆ, ಬೇರುಗಳು ಔಷಧಕ್ಕೆ ಬರುತ್ತವೆ.

ಶೀಗೆ.—ಮರವು ತಕ್ಕಮಟ್ಟಿಗೆ ದೊಡ್ಡದಾಗುತ್ತದೆ. ಕಾಯಿ ಪ್ರಸಿದ್ಧ ವುಂಟು. ಒಂದು ಖಂಡಗ ಕಾಯಿಗೆ ೧೫ರಿಂದ ೨೦ ರೂಪಾಯಿ ವರೆಗೆ ಬೆಲೆ ಬರುತ್ತದೆ. ಎರಡು ವರ್ಷಕ್ಕೊಮ್ಮೆ ಸುಮಾರು ೧೦೦೦ ಖಂಡಗ ಕಾಯಿಗಳು ಮಾರಾಟಕ್ಕೆ ಹೋಗುತ್ತವೆ.

ಚಾಲಿ, ಡೊಣ್ಣಿ ಮುಳ್ಳಿನ ದೇವಬಾಭೂಳ.—ಸಣ್ಣ ಗಿಡವು ಬೇಲಿಯ ಕೆಲಸಕ್ಕೂ, ಗೂಟಗಳನ್ನು ಕೆತ್ತಲಿಕ್ಕೂ ಬರುತ್ತವೆ.

ಶ್ರೀಗಂಧ (ಚಂದನ).—ಪ್ರಸಿದ್ಧ. ಸುಮಾರು ೩೦ ಫೂಟು ಯೆತ್ತರ, ಬಡ್ಡಿಯಲ್ಲಿ ೪ ಫೂಟು ಸುತ್ತಳತೆ; ಇಷ್ಟಕ್ಕಿಂತ ಹೆಚ್ಚಿಗೆ ದೊಡ್ಡದು ಬಹುತರ ಆಗುವದಿಲ್ಲ. ದಕ್ಷಿಣ ಮೇರೆಯಲ್ಲಿ ಹೇರಳವಾಗಿ ಬೆಳಿಯುತ್ತದೆ. ಹೊರಗಿನ ಕಟ್ಟಿಗೆ ಬೆಳ್ಳಗಿರುತ್ತದೆ, ಸುಗಂಧವಿರುವದಿಲ್ಲ, ಅದರೊಳಗಿನ ಗಂಡು ಸ್ವಲ್ಪ ಹಳದೀ ಮೇಲೆ, ಬಿರುಸು, ಸಣ್ಣ ಯೆಳಿಯುಳ್ಳದ್ದು. ಸುಗಂಧ ಇರುತ್ತದೆ. ಘನಪೂಟಿನ ತೂಕ ೫೮ ಪೌಂಡು. ಅದರಿಂದ ಪೆಟ್ಟಿಗೆ ಮುಂತಾದ ಶೋಭೆಯ ವೊಡವೆಗಳನ್ನು ಮಾಡುವರು; ಯೆಣ್ಣೆಯನ್ನು ತೆಗಿಯುವರು. ಈ ಕಟ್ಟಿಗೆಯು ವ್ಯಾಪಾರ ಬಹಳ ನಡಿಯುತ್ತದೆ. ಮಣಕ್ಕೆ (೨೮ ಪೌಂಡು) ೫, ೬ ರೂಪಾಯಿ ಬರುತ್ತವೆ.

ಸಂಪಿಗೆ (ತಾಂಬಟ).—ಬಹಳ ದೊಡ್ಡದಲ್ಲ. ಕಟ್ಟಿಗೆ ಬಿಳಿದು, ಬಿರುಸು, ಜಿಗಟು, ಗಳಿಯ ಸಾಮಾನಿಗೆ ಬರುತ್ತದೆ.

ಸವಗ (ಸಾಡಾರ್).—ಕಟ್ಟಿಗೆ ಕೆಲಸಕ್ಕೆ ಬಾರದ್ದು. ತೋಟೆಯ ನಾರಿನಿಂದ ಮೇಲಾದ ಹಗ್ಗಗಳಾಗುತ್ತವೆ. ತೊಲೆಗಳನ್ನು ಯೆಳಿಸಲಿಕ್ಕೆ ಆನೆಗೆ ಈ ಹಗ್ಗವನ್ನು ಹಚ್ಚುತ್ತಾರೆ.

ಸಾಗಾಡೆ (ಕಸಂಬ).—ದೊಡ್ಡ ಮರ, ಶೋಭೆಯುಳ್ಳದ್ದು, ಬಹು ಸಾಧಾರಣ; ಕಟ್ಟಿಗೆಯು ಕಪ್ಪು, ಬಿರುಸು, ಜಡ; ಕಬ್ಬಿನ ಗಾಣ ಮುಂತಾದ ಕೆಲಸಕ್ಕೆ ಮೇಲಾದದ್ದು;

ಇಮಾರತಿಗೂ ಬೇರೆ ಯಾವತ್ತು ಕೆಲಸಕ್ಕೂ ಬರುತ್ತದೆ. ಘನಪೂಟನ ತೂಕ ೬೮ ಪೌಂಡು. ಅರಗಿನ ಹುಳಗಳು ಈ ಮರದ ಮೇಲೆ ಇರುತ್ತವೆ. ಬೀಜದಿಂದ ಯೆಣ್ಣೆ ಹೊರಡುತ್ತದೆ.

ಸಾಮಿ (ರಾಯಿನಿ).—ದೊಡ್ಡ ವೃಕ್ಷ. ಕಟ್ಟಿಗೆ ಕೆಂಪು, ಇಮಾರತಿಗೆ ಉಪಯೋಗಿಸುತ್ತದೆ, ತಾಳಿಕೆಯುಳ್ಳದ್ದು, ಗಟ್ಟಿ; ಆದರೆ ನುಣುಪಾಗುವದಿಲ್ಲ, ಶೀಳುತ್ತದೆ. ಘನಫೂಟನ ತೂಕ ೬೬ ಪೌಂಡು. ತೋಟೆಯಿಂದ ನಾರು ಹೊರಡುತ್ತದೆ.

ಸುರ.—ಪರದೇಶದ್ದು; ನಡಿಯುವ ಶತಕದ ಆರಂಭದಲ್ಲಿ ಹಿಂದುಸ್ಥಾನಕ್ಕೆ ಬಂದದ್ದು; ಸಮುದ್ರತೀರದಲ್ಲಿ ಸರಸಾಗಿ ಬೆಳಿಯುತ್ತದೆ. ಕಟ್ಟಿಗೆ ಬಹು ಗಟ್ಟಿ, ಉಪಯುಕ್ತವಾದದ್ದು. ಕಾರವಾಡದ ಹತ್ತರ ಇದರ ಬನವು ಪ್ರೌಳಿತಾಗಿ ಹಬ್ಬಿರುತ್ತದೆ.

ಸುರಗಿ (ಸುರಂಜಿ).—ದೊಡ್ಡ ಮರ. ಕಟ್ಟಿಗೆ ಕೆಲಸದ್ದಲ್ಲ. ಹೂವಿನಿಂದ ಬಣ್ಣ ಹುಟ್ಟುತ್ತದೆ.

ಸುರ ಹೊನ್ನೆ (ನಾಗಣಿ).—ಬಹು ಭವ್ಯವಾದ ವೃಕ್ಷವು; ೧೫೦ ಪೂಟುಗಳ ವರೆಗೆ ಯೆತ್ತರವಾಗುತ್ತದೆ. ಬೊಡ್ಡಿಯು ಗಡುತರವಾಗಿಯೂ ಸರಳವಾಗಿಯೂ ಬೆಳಿಯುವದು. ಬುಡದಿಂದ ೮೦ರಿಂಧ ೧೦೦ ಫೂಟುಗಳ ಆಚೆಯಲ್ಲಿ ಮೊದಲಿನ ಟೊಂಗೆ ಇರುವದು. ಇದರ ಕಟ್ಟಿಗೆಯು ಕೆಂಪು ಬಣ್ಣದಿಂದ ತೋರಿಕೆಯಲ್ಲಿ ಸೊಗಸಾಗಿರುತ್ತದೆ. ಅದು ಹಡಗಗಳ ಪಟ್ಟಸ್ತಂಭಕ್ಕೆ ಬಹಳವಾಗಿ ಉಪಯೋಗಿಸಲ್ಪಡುತ್ತದೆ. ಒಂದು ಮರದ ಬೆಲೆಯು ೧೦೦೦ ರೂಪಾಯಿಯ ವರೆಗೆ ಬರುವದು. ಬೀಜದಿಂದ ಯೆಣ್ಣೆ ಹೊರಡುತ್ತದೆ.

ಸೆಂಕಣಿ (ಸೋನಗರ್ಭಿ).—ಮಧ್ಯಮ ಆಕಾರದ್ದು, ನೀರಿನ ಆಸರಕ್ಕೆ ಹುಟ್ಟುತ್ತದೆ. ಕಟ್ಟಿಗೆ ಸಾಧಾರಣ ಗಟ್ಟಿ, ಘನಫೂಟನ ತೂಕ ೪೦ ಪೌಂಡು.

ಹಪ್ಪುಸವಗ.—ಶೋಭೆಯುಳ್ಳ ದೊಡ್ಡ ಮರ. ಕಟ್ಟಿಗೆ ಕೆಲಸಕ್ಕೆ ಬರುವದಿಲ್ಲ. ತೋಟೆಯ ನಾರಿನಿಂದ ಹಗ್ಗಗಳಾಗುತ್ತವೆ. ಸಮುದ್ರತೀರದಲ್ಲಿ ಈ ನಾರಿನ ವಸ್ತ್ರಗಳನ್ನು ಮಾಡುವರು.

ಹಲಸು (ಫಣಸ).—ಇದು ಅಡವಿಯಲ್ಲಿಯೂ ತೋಟಗಳಲ್ಲಿಯೂ ಬೆಳಿಯುವದು. ಕಟ್ಟಿಗೆ ಮೊದಲು ಅರಶಿನ ಬಣ್ಣದ್ದು, ಕಡೆಗೆ ಕಪ್ಪಾಗುತ್ತದೆ. ಇದು ಬಹಳ ನುಣುಪಾಗುವದರಿಂದ ಮೇಲಾದ ಪೆಟ್ಟಿಗೆ, ಖುರ್ಚಿ, ಮೇಜು, ಮಣೆ, ಮುಂತಾದ ಸಾಮಾನುಗಳು ಇದರಿಂದ ಆಗುತ್ತವೆ. ಘನಫೂಟನ ತೂಕ ೪೦ ಪೌಂಡು. ಹಣ್ಣು ಪ್ರಸಿದ್ಧ. ಬೀಜಗಳನ್ನು ಸುಟ್ಟು ಬಡವರು ತಿನ್ನುವರು.

ಹಸೆ ಬೆಂಡಿ.—ಮಧ್ಯಮ ಆಕಾರದ ವೃಕ್ಷ. ಕಟ್ಟಿಗೆ ಹಳದೀ ಬಣ್ಣದ್ದು; ಮೇಲಾದ ಜಂತೆಗಳಾಗುತ್ತವೆ.

ಹಳದೀ ಅಡವೀ ಬೆಂಡಿ.—ಸಣ್ಣ ಗಿಡ. ಕಟ್ಟಿಗೆ ಮಿದುವಾದಾಗ್ಯೂ ಅದರಿಂದ ನಗಗಳನ್ನು ಮಾಡುವರು. ತೋಟೆಯಿಂದ ಮೇಲಾದ ಹಗ್ಗಗಳಾಗುತ್ತವೆ.

ಹಳಬಾಳಗೆ (ಕುಡಕ).—ಮಧ್ಯಮ ಆಕಾರದ್ದು. ಕಟ್ಟಿಗೆ ಕೆಲಸಕ್ಕೆ ಬರುವದಿಲ್ಲ. ತೋಟೆಯು ಚರ್ಮ ಮಿದು ಮಾಡಲಿಕ್ಕೆ ಬರುತ್ತದೆ. ಅಂಟು ಹೊರಡುತ್ತದೆ. ಕಾಯಿ ತಿನ್ನುವರು.

ಹಾರಿವಾಳ (ಪಾಂಗಾರಾ).—ಮಧ್ಯಮ ಆಕಾರದ ವೃಕ್ಷವು. ಕಟ್ಟಿಗೇ ಕೊರೆದು ಹಲಿಗೆಗಳನ್ನು ಮಾಡುವರು.

ಹುಣಸೆ (ಚಿಂಚ).—ಪ್ರಸಿದ್ಧ. ಅಡವಿಯಲ್ಲಿ ಬಹುತರ ಬೆಳಿಯುವದಿಲ್ಲ. ತೋಟಗಳಲ್ಲಿಯೂ ಹಳೆ ಗುಡಿಗಳ ಬಳಿಯಲ್ಲಿಯೂ ಇರುತ್ತದೆ. ಕಟ್ಟಿಗೆ ಕಪ್ಪು, ಬಿರುಸು, ತಾಳಿಕೆಯುಳ್ಳದ್ದು; ಕಬ್ಬಿನ ಗಾಣಕ್ಕೂ, ಬಂಡಿಗಳಿಗೂ, ಇಮಾರತಿಗೂ ಬರುತ್ತದೆ; ಘನಪೂಟಿನ ತೂಕ ೭೯ ಪೌಂಡು. ಹುಣಸೆ ಕಾಯಿ ಪ್ರಸಿದ್ಧ. ಎಲೆಗಳಿಂದ ಬಣ್ಣ ಹುಟ್ಟುತ್ತದೆ, ಬೀಜಗಳಿಂದ ಸರಿಯಾಗುತ್ತದೆ.

ಹುಣಾಬ (ಕಿಂವಳ).—ಮತ್ತಿಯಷ್ಟೇ ದೊಡ್ಡದಾಗುತ್ತದೆ. ಕಟ್ಟಿಗೆ ಮತ್ತಿಯಷ್ಟು ಕಪ್ಪಲ್ಲ; ಇಮಾರತಿಗೆ ಬರುತ್ತದೆ. ಆದರೆ ಮತ್ತಿಯಷ್ಟು ಗಟ್ಟಿ ಅಲ್ಲ.

ಹುಲಗಲಿ (ಕರಂಜ).—ಎತ್ತರವಾಗಿ ಬೆಳಿಯುತ್ತದೆ. ಕಟ್ಟಿಗೆ ಹಗುರು, ಜಿಗಟು, ಹಳದೀ ಬಣ್ಣದ್ದು; ಹಲವು ಕೆಲಸಗಳಿಗೆ ಬರುತ್ತದೆ. ಬೀಜದ ಯೆಣ್ಣೆ ದೀಪಕ್ಕೂ ಹುರುಕಿಗೂ ಬರುತ್ತದೆ. ಘನಪೂಟಿನ ತೂಕ ೪೦ ಪೌಂಡು.

ಹುಳಿ ಇಪ್ಪೆ (ಮೋಹ).—ತಕ್ಕಮಟ್ಟಿಗೆ ಯೆತ್ತರವಾಗುತ್ತದೆ. ಇದರ ಬೀಜದಿಂದ ಯೆಣ್ಣೆ ಹೊರಡುತ್ತದೆ. ಅದರಿಂದ ಮೇಣ ಬತ್ತಿಗಳಾಗಬಹುದು.

ಹೆಣ್ಣು ಗೊರವಿ (ಖುರ).—ಸುಂದರವಾದ ಸಣ್ಣ ಗಿಡ. ದೀವಟಿಗೆಗೆ ಬರುತ್ತದೆ. ಕಟ್ಟಿಗೆ ನಸುಗೆಂಪು, ಸಣ್ಣ ಯೆಳೆ; ಇಮಾರತಿಗೂ, ಪೆಟ್ಟಿಗೆ ಮುಂತಾದವುಗಳಿಗೂ ಬರುತ್ತದೆ. ಘನಫೂಟಿನ ತೂಕ ೬೬ ಪೌಂಡು.

ಹೆಣ್ಣು ಸಂಪಿಗೆ (ಚಂಪರ).—ಮಧ್ಯಮ ಆಕಾರದ್ದು. ಕಟ್ಟಿಗೆ ಕೆಂಪು ಬಣ್ಣದ್ದು, ಬಹು ಗಟ್ಟಿ. ಫಲಗಳನ್ನು ತಿನ್ನುವರು.

ಹೆಮ್ಮರ (ಟೇಟು).—ಸಣ್ಣ ಗಿಡ; ಕಟ್ಟಿಗೆ ಕೆಲಸಕ್ಕೆ ಬಾರದ್ದು. ತೋಟೆ, ಕಾಯಿಗಳು ಚರ್ಮವನ್ನು ಮಿದು ಮಾಡಲಿಕ್ಕೆ ಬರುತ್ತವೆ. ಬೇರು ಔಷಧಕ್ಕೆ ಬರುತ್ತದೆ.

ಹೆಬ್ಬಲಸು (ಪಾಟ ಫಣಸ).—ಬಹು ಸುಂದರವಾದ ಉನ್ನತ ವೃಕ್ಷವು; ಸರಳವಾಗಿ ೧೫೦ ಫೂಟಿನ ವರೆಗೆ ಯೆತ್ತರವಾಗಿ ಬೆಳಿಯುವದು. ಇಮಾರತಿಗೂ ಹಡಗಗಳಿಗೂ ಇದರ ಕಟ್ಟಿಗೆ ಉಪಯೋಗಿಸುವರು. ಘನಫೂಟಿನ ತೂಕ ೪೦ ಪೌಂಡು. ಹಲಸಿನ ಹಣ್ಣು ಪ್ರಸಿದ್ಧ.

ಹೈಗ (ಕವಸಿ).—ದೊಡ್ಡ ಮರ; ಕಟ್ಟಿಗೆ ಚಲೋದು, ಬಿರಸು, ತಾಳಿಕೆಯುಳ್ಳದ್ದು; ಬಹಳ ಕೆಲಸಗಳಿಗೆ ಬರುತ್ತದೆ.

ಹೊನ್ನವರಿ (ತರವಡ).—ಕೆಂಪು ಗರಸಿನ ನೆಲದಲ್ಲಿ ಬಹಳ ಬೆಳಿಯುತ್ತದೆ; ಔಷಧಕ್ಕೆ ಬರುತ್ತದೆ. ತೋಟೆಯು ಚರ್ಮ ಮಿದು ಮಾಡಲಿಕ್ಕೆ ಬರುತ್ತದೆ.

ಹೊನ್ನಿ (ಅಸನ).— ಬಹಳ ಯೆತ್ತರ. ಕಟ್ಟಿಗೆ ಕಪ್ಪು, ಬಿರುಸು, ತಾಳಿಕೆಯುಳ್ಳದ್ದು, ಇಮಾರತಿಗೆ ಮೇಲಾದದ್ದು. ದೇವರ ರಥಗಳನ್ನು ವಿಶೇಷವಾಗಿ ಇದರಿಂದ ಮಾಡುತ್ತಾರೆ. ಘನಪೂಟು ೫೬ ಪೌಂಡು. ಅಂಟು ಕೆಂಪು ಬಣ್ಣದ್ದು, ಅದಕ್ಕೆ "ಕಿನೊ" ಯೆಂಬ ಹೆಸರುಂಟು.

ಹೊಳೆಕಾವ್ಯ (ಮಾನಕುಂಬ).— ಮಧ್ಯಮ ಪ್ರತಿಯ ವೃಕ್ಷವು, ನೀರಿನ ಆಸರಕ್ಕೆ ಹುಟ್ಟುತ್ತದೆ. ಕಟ್ಟಿಗೆ ಕೆಂಪು ಬಣ್ಣದ್ದು; ಅದು ಜಿಗಟುಳ್ಳದ್ದಾಗಿ, ಬಹು ಗಟ್ಟಿ ಇರುತ್ತಿದ್ದಾಗ್ಯೂ, ಅದನ್ನು ಜನರು ಉಪಯೋಗಿಸುವದಿಲ್ಲ. ಘನಪೂಟನ ತೂಕ ೬೦ ಪೌಂಡು. ಇದರ ತೊಟೆಯೂ ಮೀನ ಹಿಡಿಯುವ ಕೆಲಸಕ್ಕೆ ಬರುತ್ತದೆ.

ಹೊಳೆಗರ (ಶೂದ್ರಬಿಬೊ).— ದೊಡ್ಡ ವೃಕ್ಷ. ಕಟ್ಟಿಗೆ ಮಿದು, ಡೋಣಿ, ಛತ್ತೇಮಾರಿಗಳಿಗೆ ಬರುತ್ತದೆ. ಕಾಯಿ, ತ್ರೋಟೆಗಳು ಔಷಧಿಗಳು; ಅವುಗಳಿಂದ ಮೇಲಾದ ಕರೆ ರೋಗಣವಾಗುತ್ತದೆ.

ಹೊಳೆ ದಾಶಾಳ (ತಾಮುಣ).— ಎತ್ತರ, ಬಹು ಸುಂದರ; ಹೂವಾದಾಗ ಬಹು ಮನೋಹರವಾಗಿ ಕಾಣುತ್ತದೆ. ಕಟ್ಟಿಗೆ ಸಸುಗೆಂಪು, ಬಹು ಉಪಯುಕ್ತ. ಘನಪೂಟನ ತೂಕ ೩೬-೪೭ ಪೌಂಡು.

ಹೊಳೆ ಮತ್ತಿ (ಸಾವಿ, ಮಾಡತ).— ಬಹು ದೊಡ್ಡ ಮರ, ಹೊಳೆಗಳಲ್ಲಿ ಹುಟ್ಟುತ್ತವೆ. ಕಟ್ಟಿಗೆ ಇಮಾರತಿಗೂ ಬೇರೆ ಕೆಲಸಗಳಿಗೂ ಬರುತ್ತದೆ. ಅದು ಗಟ್ಟಿ, ಬಿರುಸು, ಜಡ. ಘನಪೂಟನ ತೂಕ ೫೪ ಪೌಂಡು. ತ್ರೋಟೆಯು ಪುಷ್ಟಿಯ ಔಷಧವು; ಘಾಯಗಳನ್ನು ಮಾಯಿಸುತ್ತದೆ.

No. 3133

## ಉಳಿದ ಮೂರು ಜಿಲ್ಲೆಗಳಲ್ಲಿಯ ಅಡವಿಯು.

ಕಾನಡಾ ಜಿಲ್ಲೆಯ ಅಡವಿಯಷ್ಟು ಭವ್ಯವಾದ ಅಡವಿಯು ಉಳಿದ ಮೂರು ಜಿಲ್ಲೆಗಳಲ್ಲಿ ಯೆಲ್ಲಿಯೂ ಇಲ್ಲ. ಬೆಳಗಾವಿ, ಧಾರವಾಡ, ಜಿಲ್ಲೆಗಳ ಮಲ್ನಾಡದ ಶರಗಿನ ಭಾಗದಲ್ಲಿ ತಕ್ಕಮಟ್ಟಿಗೆ ಅಡವಿಯುಂಟು. ಈ ಜಿಲ್ಲೆಗಳ ಬೈಲು ಭಾಗದಲ್ಲಿ ಅದಕ್ಕೂ ಕಡಿಮೆ. ವಿಜಾಪುರದ ಜಿಲ್ಲೆಯಲ್ಲಿ ಅಡವಿಯ ವಿಸ್ತಾರವು ಯೆಲ್ಲಕ್ಕೂ ಕಡಿಮೆ ಇರುತ್ತದೆ.

ಮಲ್ಲಾಡದ ಶರಗಿನಲ್ಲಿಯ ಅಡವಿ.— ಧಾರವಾಡ ಜಿಲ್ಲೆಯ ಹಾನಗಲ್ಲು, ಬಂಕಾಪುರ, ಕಲಘಟಗಿ, ಧಾರವಾಡ, ಈ ನಾಲ್ಕು ತಾಲೂಕುಗಳಲ್ಲಿ ಕೂಡಿ ೨೦೦ ಚಚ್ಚೌಕು ಮೈಲು; ಬೆಳಗಾವೀ ಜಿಲ್ಲೆಯ ಖಾನಾಪುರ, ಬೆಳಗಾವಿ, ಇವೆರಡು ತಾಲೂಕುಗಳಲ್ಲಿ ಕೂಡಿ ೬೦೦ ಚಚ್ಚೌಕು ಮೈಲು, ಅಂತೂ ೮೦೦ ಚಚ್ಚೌಕು ಮೈಲು ಒಟ್ಟಿಗೆ ಅಡವಿಯ ವಿಸ್ತಾರವಿರುತ್ತದೆ. ಇವೆಲ್ಲ ಕೂಡಿ ಕಾನಡಾ ಜಿಲ್ಲೆಯ ಅಡವಿಯ ನಾಲ್ಕನೇ ಪಾಲಷ್ಟು ಸಹ ಆಗುವದಿಲ್ಲ. ಆದರೆ ಈ ೮೦೦ ಚ. ಮೈಲುಗಳಲ್ಲಿ ಮೊದಲಿನಿಂದ ತನಗೆ ತಾನೇ ಬೆಳೆದಂಥ ಅಡವಿಯ ವಿಸ್ತಾರವು ೫೬೬ ಚ. ಮೈಲಿಗಿಂತ ಹೆಚ್ಚಿಲ್ಲ. ಇದಕ್ಕೆ ಸರಕಾರದವರು ಕಾದ ಅಡವಿ ಯೆಂದೆನ್ನುವರು. ಉಳಿದದ್ದೆಲ್ಲ ೨೫೪ ಚ. ಮೈಲು, ವೊಳಗಡೆಯಲ್ಲಿ ಸರಕಾರದ

ವರು ಕಾವಲ ಇಟ್ಟು ಬೆಳಿಸಿದ್ದಿರುತ್ತದೆ. ಇದಕ್ಕೆ ಸಂರಕ್ಷಿಸಿದ ಅಡವಿ ಯೆಂದೆನ್ನುವರು. ಧಾರವಾಡ ಜಿಲ್ಲೆಯಲ್ಲಿ ಧಾರವಾಡ, ಕಲಘಟಗಿ, ತಾಲೂಕುಗಳಲ್ಲಿಯ ಅಡವಿಯು ಹೆಚ್ಚಿಗೆ ಪ್ರಬಲವಾದದ್ದು. ಇದರಲ್ಲಿ ತೇಗು, ಚಂದನ, ಸಿಸುವು, ಮತ್ತಿ, ಹೊನ್ನಿ, ಹಲಸು, ಮುಂತಾದ ಬೆಲೆಯುಳ್ಳ ಮರಗಳು ತಕ್ಕಮಟ್ಟಿಗೆ ಯೆತ್ತರವಾಗಿ ಬೆಳಿದವೆ. ಆದರೆ ಈ ಅಡವಿಯಲ್ಲಿ ಸಣ್ಣ ದೊಡ್ಡ ಯೆಳಿಗಳೇ ಹೊರ್ತು ತೊಲೆಗಳು ಹುಟ್ಟುವದಿಲ್ಲ. ಖಾನಾಪುರ ತಾಲೂಕಿನ ಅಡವಿಯ ಪಶ್ಚಿಮ ಭಾಗದಲ್ಲಿ, ಅಂದರೆ ಸಹ್ಯಾದ್ರಿಯ ಇಳಕಲಿನ ಮೇಲೆ, ಹೇಳ ತಕ್ಕಂಥ ಬನಗಳಿಲ್ಲ; ಕಿರಿ ಗಿಡಗಳೂ ನಾನಾ ಪ್ರಕಾರದ ಕಂಟಿಗಳೂ ಮುಖ್ಯವಾಗಿ ಬೆಳಿದಿರುತ್ತವೆ. ಆದರೆ ಪೂರ್ವಕ್ಕೆ ಬಂದ ಹಾಗೆ ಯೆತ್ತರವಾದ ಮರಗಳುಳ್ಳಂಥ ದಟ್ಟ ಅಡವಿಯು ದೃಷ್ಟಿಗೆ ಬೀಳುತ್ತದೆ. ಇದರಲ್ಲಿಯೂ ಮೇಲೆ ಹೇಳಿದ ತೇಗು, ಚಂದನ, ಮುಂತಾದ ವೃಕ್ಷಗಳನ್ನು ಕಾಣ ಬಹುದು. ಆದರೆ ಕಲಘಟಗಿ, ಧಾರವಾಡ ತಾಲೂಕುಗಳಲ್ಲಿಯಷ್ಟು ಸಹ ದಡಸಾದ ಕಟ್ಟಿಗೆಯು ಈ ಅಡವಿಯಲ್ಲಿ ದೊರಿಯುವದಿಲ್ಲ. ಆದರೂ ಸರಕಾರೀ ಕಾವಲುಗಾರರು ಈ ಮಲ್ಲಾಡದ ಶರಗಿನ ಯಾವತ್ತು ಅಡವಿಯನ್ನು ಬಹು ಯೆಚ್ಚರದಿಂದ ಕಾಯುತ್ತಿರುವ ಕಾರಣ ಕೆಲವು ವರ್ಷಗಳ ನಂತರ ಕಲಘಟಗಿ, ಧಾರವಾಡ, ಖಾನಾಪುರ, ಬೆಳಗಾವಿ, ತಾಲೂಕುಗಳಲ್ಲಿಯ ಅಡವಿಯಲ್ಲಿ ದೊಡ್ಡ ದೊಡ್ಡ ತೊಲೆಗಳಾಗುವಂಥ ಮರಗಳನ್ನು ಕಾಣ ಬಹುದು. ಮಲ್ಲಾಡದ ಶರಗಿನ ಅಡವಿಯಲ್ಲಿ ಮೇಲೆ ಹೇಳಿದ ಆರು ಜಾತಿ ಮರಗಳಲ್ಲದೆ ಈ ಕೆಳಗೆ ವಿವರಿಸಿದ ವೃಕ್ಷಗಳು ಪ್ರಮುಖ ಜಾತಿಗಳೆಂದು ಹೇಳ ಬಹುದು.

ಅಳಲೆ, ಅತ್ತಿ, ಬನ್ನಿ (ಅಪ್‌ಟಾ), ಬೆಲಪತ್ರಿ (ಬೆಲ), ಬಿಳಿನಂದಿ (ನಾಣಾ), ಬೂರ್ಲ (ಶೇವರಿ), ದಿಂಡಲ (ಧಾವಡಾ), ಡಿಕ್ಕೀಮಾಲಿ, ಕೇರು, ಹುಣಬ (ಕಿಂಡಳ) ಹುಣಶಿ, ಅರಟಾಳ (ರಿಟಾ) ಕಕ್ಕೆ (ಬಹವಾ), ಕರಿಗಿಡ (ಗೇಳ), ಮುತ್ತಲ (ತಿವಸ), ಕೋಕಂಬ (ಖಿರಂದ), ರಕ್ತ ಹೊನ್ನಿ (ಲಾಲ ಅಸನ), ಶಿವನ್ನಿ (ಶಿವಣ), ಶಿರಸಲ (ಶಿರಸ), ತಡಸಲ (ಧಾಮಣ), ನೇರಿಲ, ಹಾರಿವಾಳ (ಪಾಂಗಾರಾ), ನಂದಿ (ನಾಂದರೂಖ), ನೆಲ್ಲಿ, ಕಂಚಾಳ (ಕಾಂಚನ), ಬದಾಮು, ನಾಗಸಂಪಿಗಿ (ನಾಗಾಚಾಫಾ), ಸೋನಚಾಫಾ, ಇತ್ಯಾದಿ.

ಈ ಅಡವಿಯಲ್ಲಿ ಇಮಾರತಿಯ ಕಟ್ಟಿಗೆ, ಉರಿಯುವ ಕಟ್ಟಿಗೆಗಳಲ್ಲದೆ ಬೇರೆ ಹಲವು ಪ್ರಕಾರದ ವ್ಯಾಪಾರದ ಸರಕುಗಳು ಹುಟ್ಟುತ್ತವೆ. ಅವುಗಳಲ್ಲಿ ಜೇನತುಪ್ಪ, ಮೇಣ, ಬಿದರು, ಇದ್ದಲಿ, ಅಳಲೆಕಾಯಿಗಳು ಮುಖ್ಯ. ಇವಲ್ಲದೆ ಕೇರು, ಅರಟಾಳಕಾಯಿ, ನೆಲ್ಲೀಕಾಯಿ ಶೀಗೇಕಾಯಿ, ಮುಂತಾದ ಫಲಗಳನ್ನು ಬಡಬಗ್ಗರು ಆರಿಸಿ ತಂದು ಮಾರಿ ಹೊಟ್ಟೆ ತುಂಬಿ ಕೊಳ್ಳುತ್ತಾರೆ. ಬೆಳಗಾವಿ, ಖಾನಾಪುರ ತಾಲೂಕುಗಳಲ್ಲಿ ವೊಂದೇ ಅಳಲೆಕಾಯಿಂದ ಸರಕಾರಕ್ಕೆ ಸನ್ ೧೮೮೩—೮೪ ವರ್ಷದಲ್ಲಿ ೩೭೦೦೦ ರೂಪಾಯಿಗಿಂತ ಹೆಚ್ಚು ಆದಾಯವಾಯಿತು. ಈ ಮಲ್ಲಾಡದ ಶರಗಿನ ಅಡವಿಯ ಪೂರ್ವ ದಂಡೆಯಲ್ಲಿ ಮುಳ್ಳುಗಳ್ಳಿಯು ಬಹಳ ಬೇಗ ಹಬ್ಬುತ್ತದೆ. ಅದನ್ನು ಕಡಿದು ಸುಡುವ ಪ್ರಯತ್ನವನ್ನು ಸರಕಾರದವರು ನಡಿಸಿದ್ದಾರೆ. ಪೂರ್ವದಲ್ಲಿ ಸರಕಾರೀ ಕಾವಲವಿಲ್ಲದಾಗ ಜನರು ಬೇ

ಕಾಟ ಹಾಗೆ ಅಡವಿಯನ್ನು ಕಡಿದು ಹಾಳು ಮಾಡುವರು. ಇದಲ್ಲದೆ ಪ್ರವಾಸಿಗಳು ಹುಲ್ಲಿನ ಅಡವಿಯಲ್ಲಿ ಅಡಿಗೇ ಮಾಡಿ ಕೊಳ್ಳುವದರಿಂದ, ಇಲ್ಲವೆ ತಂಬಾಕ ಶೇದಿ ಹೊತ್ತಿದ ಬತ್ತಿಯನ್ನು ಹುಲ್ಲಿನೊಳಗೆ ಚಲ್ಲುವದರಿಂದ ಅಡವಿಗೆ ಬೆಂಕೀ ಹಚ್ಚುವರು. ಅದರಿಂದ ಯೆಷ್ಟೋ ಮೈಲುಗಳ ವರೆಗೆ ಅಡವಿಯು ಸುಟ್ಟು ಹಾಳಾಗುವದು. ಕುಮರಿ ಪೈರು ತಕ್ಕೊಳ್ಳುವ ಕಾಡು ಜನರು ಪ್ರತಿ ವರ್ಷ ಹೊಸ ಅಡವಿಯನ್ನು ಕಡಿದು ವೊಂದು ವರ್ಷ ಪೈರು ತಕ್ಕೊಂಡು, ಭೂಮಿಯನ್ನು ಬೈಲು ಮಾಡಿ ಮುಂದಕ್ಕೆ ಸಾಗುವರು. ಆದರೆ ಸರಕಾರದವರ ಕಾವಲು ಕೂತಾಗಿನಿಂದ ಈ ಪ್ರಕಾರದ ನಾಶವು ಬಹಳ ಕಡಿಮೆಯಾಗಿ ಅಡವಿಯು ಬೆಳಿಯುತ್ತ ನಡಿದದೆ. ಅಡವಿಯನ್ನು ಬೆಳಿಸುವದರಿಂದ ಸರಕಾರದವರ ಆದಾಯವು ಬೆಳಿಯುವದಲ್ಲದೆ ದೇಶದಲ್ಲಿ ಮಳಿಯು ಹೆಚ್ಚಾಗಲಿಕ್ಕೆ ಆಸ್ಪದವಾಗುತ್ತದೆ.

ಬೆಳಗಾವಿ, ಧಾರವಾಡ ಜಿಲ್ಲೆಗಳ ಅಡವಿಗಳಿಗಾಗಿ ವೊಬ್ಬೊಬ್ಬ ಸ್ವತಂತ್ರ ಯುರೋಪಿಯನ್ ಅಧಿಕಾರಿಯನ್ನು ನೇಮಿಸಿದ್ದಾರೆ. ಈ ಅಧಿಕಾರಿಗಳ ಕೈಕೆಳಗೆ ಫೈಟರರು, ಕಾರಕೂನರು, ಕಾವಲುಗಾರರು, ಮುಂತಾದವರು ಅಡವಿಯನ್ನು ಸಂರಕ್ಷಿಸುವ ಕೆಲಸ ಮಾಡುತ್ತಾರೆ. ಈ ಅಧಿಕಾರಿಗಳು ಮುಂದೆ ಬೆಳಿಯಲಾರದಂಥ ಅಡವಿಯನ್ನು ಕಡಿಸಿ, ಇಮಾರತಿಯ ಕಟ್ಟಿಗೆಯನ್ನೂ ಉರಿಯುವ ಕಟ್ಟಿಗೆಯನ್ನೂ ಸ್ವಲ್ಪ ದರದಿಂದ ಮಾರುತ್ತಾರೆ. ಸನ್ ೧೮೮೨-೮೩ನೇ ವರ್ಷದಲ್ಲಿ ಧಾರವಾಡ ಬೆಳಗಾವಿ ಜಿಲ್ಲೆಗಳ ಆದಾಯ ವೆಚ್ಚಗಳು ಹ್ಯಾಗಂದರೆ—

## ಅಡವಿಯ ಆದಾಯ ವೆಚ್ಚಗಳು.

| | ಆದಾಯ. | ವೆಚ್ಚ. | ಶಿಲಕು. |
|---|---|---|---|
| ಧಾರವಾಡ ........... | ೮೨೯೧೦ | ೪೧೯೫೦ | ೪೦೯೬೦ |
| ಬೆಳಗಾವಿ ........... | ೧೪೨೧೫೦ | ೪೩೬೧೦ | ೯೮೫೪೦ |
| | ೨೨೫೦೬೦ | ೮೫೫೬೦ | ೧೩೯೫೦೦ |

ಖಾಸಗೀ ಜನರ ಹೊಲಗಳಲ್ಲಿ ಇರುವ ತೇಗು, ಚಂದನ, ಸಿಸುವು, ಈ ಮೂರು ಜಾತಿಗಳ ಮರಗಳು ಸರಕಾರೀ ಮಾಲೆಂದು ಕಾಯದೆ ಇರುತ್ತದೆ. ಪಡಬಿದ್ದ ಭೂಮಿಯಲ್ಲಿ ಈ ಮೂರು ಜಾತಿಗಳಲ್ಲದೆ ಮತ್ತಿ, ಹೊನ್ನಿ, ಇವೆರಡು ಜಾತಿಗಳಾದರೂ ಸರಕಾರೀ ಮಾಲೆಂದು ಎಣಿಸಲ್ಪಡುತ್ತವೆ. ಅಡವಿಯ ನೆರೆಹೊರೆಯ ಗ್ರಾಮಗಳ ನಿವಾಸಿಗಳು ಸರಕಾರೀ ಅಡವಿಯೊಳಗಿನ ಹುಲ್ಲು ಕೊಯಿ ಕೊಂಡು ಹೋಗಲಿಕ್ಕೂ ಹೊಲಗಳ ಬೇಲಿಗಳಿಗಾಗಿ ಮುಳ್ಳು ಕಂಟಿಗಳನ್ನು ತಕ್ಕೊಂಡು ಹೋಗಲಿಕ್ಕೂ ಅಡ್ಡಿ ಇಲ್ಲ. ಇದಲ್ಲದೆ ಆ ನಿವಾಸಿಗಳು ತಮ್ಮ ಸ್ವಂತ ಉಪಯೋಗಕ್ಕಾಗಿ ಉರಿ ಕಟ್ಟಿಗೆಯ ಹೊರೆಗಳನ್ನು ಸರಕಾರೀ ಅಡವಿಯೊಳಗಿಂದ ಬೇಕಾದಾಗ ತರ ಬಹುದು. ಈ ಕಟ್ಟಿಗೆಯನ್ನು ಮಾರಾಟಕ್ಕೆ

ವೊಯ್ಯುವವರು ಮಾತ್ರ ಸರಕಾರಕ್ಕೆ ಫೀ ಕೊಡಬೇಕಾಗುತ್ತದೆ. ಆ ಫೀಯ ದರಗಳು ಹ್ಯಾಗಂದರೆ. ಎರಡೆತ್ತಿನ ಬಂಡಿ ತುಂಬುವಷ್ಟು, ಅಂದರೆ ೬ ಫೂಟು ಉದ್ದ, ೪ ಫೂಟು ಅಗಲು, ೪ ಫೂಟು ಯೆತ್ತರ, ಇಷ್ಟು ಕಟ್ಟಿಗೆಯ ರಾಶಿಗೆ ೧ ರೂಪಾಯಿ; ಒಂದು ಎತ್ತಿನ ಲದ್ದಿಗೆ ೧ ಆಣೆ; ಗಂಡಸಿನ ತಲೆ ಹೊರೆಗೆ ೧ ದುಡ್ಡು; ಹೆಂಗಸಿನ ತಲೆ ಹೊರೆಗೆ ೨ ಪೈ; ಹುಡುಗನ ತಲೆ ಹೊರೆಗೆ ೧ ಪೈ. ಈ ಪ್ರಕಾರ ಫೀ ಕೊಟ್ಟು ಉರಿ ಕಟ್ಟಿಗೆಯನ್ನು ಬೇಕಾದವರು ತಂದು ಮಾರಾಟ ಮಾಡಿ ಕೊಳ್ಳ ಬಹುದು. ಸರಕಾರೀ ಅಡವಿಯಲ್ಲಿ ವೊಕ್ಕಲಿಗರು ತಮ್ಮ ದನಗಳನ್ನು ಮೇಯಲಿಕ್ಕೆ ಬಿಡ ಬೇಕಾದರೆ, ಕೋಡಿನ ದನಗಳಿಗೆ ವರ್ಷಕ್ಕೆ ೨ ಆಣೆ, ಕುರಿ ಆಡುಗಳಿಗೆ ವರ್ಷಕ್ಕೆ ಅರ್ಧಾಣೆ ಸರಕಾರಕ್ಕೆ ಫೀ ಕೊಡಬೇಕಾಗುತ್ತದೆ. ಪತ್ರಾವಳಿಯ ಯೆಲೆ, ಅರಟಾಳ ಕಾಯಿ, ಕವಳೀ ಹಣ್ಣು, ಇಂಥಾ ಕಿರುಕುಳ ಪದಾರ್ಥಗಳನ್ನು ಸರಕಾರೀ ಅಡವಿಯೊಳಗಿಂದ ಯೇನು ಕೊಡದೆ ಬೇಕಾದವರು ತಕ್ಕೊಂಡು ಹೋಗಬಹುದು.

ಕುಮ್ರಿ ಕಡಿಯುವ ನಡಾವಳಿಯು ಧಾರವಾಡ ಜಿಲ್ಲೆಯಲ್ಲಿ ಇಲ್ಲ; ಬೆಳಗಾವೀ ಜಿಲ್ಲೆಯಲ್ಲಿ ಮಾತ್ರ ನಡಿಯುತ್ತದೆ. ಬಡ ಒಕ್ಕಲಿಗರು ಅಡವಿಯನ್ನು ಕಡಿದು ಬೈಲು ಮಾಡಿ, ಕಡಿದ ಗಿಡಗಳನ್ನು ಅಲ್ಲೇ ವೊಣಗ ಬಿಡುವರು. ಅವು ವೊಣಗಿದ ಬಳಿಕ ಅವುಗಳ ಕಟ್ಟಿಗೆ, ಯೆಲೆ, ಮುಂತಾದವುಗಳನ್ನು ಸುಟ್ಟು ಬೂದಿಯ ಮಾಡಿ, ಆ ಬೂದಿಯನ್ನು ಅದೇ ಭೂದಿಯಲ್ಲಿ ಹರವುವರು, ಇಷ್ಟಾದ ಬಳಿಕ ಆ ಭೂಮಿಯು ಬಿತ್ತಲಿಕ್ಕೆ ತಕ್ಕದ್ದಾಗುತ್ತದೆ. ಅದರಲ್ಲಿ ಮೊದಲಿನ ವರ್ಷ ರಾಗಿಯ ಪೈರನ್ನೂ ಮರು ವರ್ಷ ಸಾವಿಯ ಪೈರನ್ನೂ ತಕ್ಕೊಂಡು ಅದನ್ನು ಹಾಳಗೆಡಿವಿ ಮೂರನೇ ವರ್ಷ ಮತ್ತೆ ಹೊಸ ಅಡವಿಯನ್ನು ಕಡಿಯುವರು. ಆ ಹಾಳು ಬಿದ್ದ ಅಡವಿಯು ೨೦ ವರ್ಷದ ತರುವಾಯ ಮತ್ತೆ ಕುಮ್ರಿ ಪೈರಿಗೆ ತಕ್ಕದ್ದಾಗುತ್ತದೆ. ಅಲ್ಲಿಯ ತನಕ ಅದರಲ್ಲಿ ಹೊಸ ಅಡವಿಯು ಬೆಳಿಯುತ್ತ ಹೋಗುವದು. ಈ ಕುಮ್ರಿ ಪೈರಿನ ಪದ್ಧತಿಯಿಂದ ಅಡವಿಯು ಬಹಳ ಹಾಳಾಗುವ ಕಾರಣ ಸರಕಾರದವರು ನಡುವೆ ಕೆಲವು ದಿವಸ ಇದನ್ನು ಮುರಿದಿದ್ದರು. ಆದರೆ ಬಡ ಜನರಿಗೆ ಕುಮ್ರಿ ಭೂಮಿ ಇಲ್ಲದ್ದರಿಂದ ಬಹಳ ಸಂಕಟ ವೊದಗಿದ್ದು ನೋಡಿ, ಸನ್ ೧೮೭೫ನೇ ಇಸವಿಯಿಂದ ಕುಮ್ರಿ ಕಡಿಯಲಿಕ್ಕೆ ಸರಕಾರದವರು ಮತ್ತೆ ಅಪ್ಪಣೆ ಕೊಟ್ಟರು. ಆದರೆ ಕುಮ್ರಿ ಕಡಿಯುವವನು ಯೆಷ್ಟು ಭೂಮಿಯನ್ನು ಬೈಲಿಡುವನೋ, ಅದರ ಮೂರನೇ ಪಾಲಷ್ಟು ಬೇರೆ ಭೂಮಿಯಲ್ಲಿ ಉಪಯುಕ್ತವಾದಂಥ ಹೊಸ ಮರಗಳನ್ನು ಹಚ್ಚಲಿಕ್ಕೆ ಬೇಕೆಂದು ನಿಯಮ ಮಾಡಿದ್ದಾರೆ; ಮತ್ತೂ ಸರಕಾರದವರು ತೋರಿಸಿದಲ್ಲಿ ಅಡವಿಯನ್ನು ಕಡಿಯ ಬೇಕೇ ಹೊರ್ತು ಕಂಡಲ್ಲಿ ಕಡಿಯ ಕೂಡದು.

ಬೈಲು ಶೀಮೆಯ ಅಡವಿ.—ಮುಂಬಯಿ ಕರ್ನಾಟಕದ ಬೈಲು ಶೀಮೆಯ ಪ್ರದೇಶದಲ್ಲೆಲ್ಲ ಹೆಚ್ಚಾಗಿ ಬೈಲೇ ಇರುತ್ತದೆ. ಧಾರವಾಡ ಜಿಲ್ಲೆಯಲ್ಲಿ ಗದಗು, ಕೋಡ, ರಾಣೇ ಬಿನ್ನೂರು, ಕರ್ಜಗಿ; ಬೆಳಗಾವೀ ಜಿಲ್ಲೆಯಲ್ಲಿ ಚಿಕ್ಕೋಡಿ, ಗೋಕಾವಿ, ಸಂಪಗಾವಿ; ವಿಜಾಪುರ ಜಿಲ್ಲೆಯಲ್ಲಿ ಬಾದಾವಿ, ಬಾಗಲಕೋಟೆ, ಹುನಗುಂದ; ಇಷ್ಟು ತಾಲೂಕುಗಳಲ್ಲಿ ಮಾತ್ರ ಅಲ್ಪ ಸ್ವಲ್ಪ ಅಡವಿಯನ್ನು ಕಾಣ ಬಹುದು. ಆದರೆ ಮೇಲೆ

ವಿವರಿಸಿದ ವೃಕ್ಷ ಜಾತಿಗಳನ್ನು ಈ ಅಡವಿಯಲ್ಲಿ ಕಾಣುವದು ದುರ್ಲಭವು. ತೆಂಗು, ತಾಳೆ, ಚಂದನ, ತೇಗು, ಮತ್ತಿ, ಸಿಸುವು, ಇಂಥಾ ಜಾತಿಯ ಮರಗಳನ್ನು ಮಲ್ಲಾಡದ ಶರಗಿಗೆ ಹೊಂದಿರುವ ಬೈಲು ಶೀಮೆಯ ಪ್ರದೇಶಗಳಲ್ಲಿ ಮಾತ್ರ ಅಲ್ಪ ಸ್ವಲ್ಪವಾಗಿ ಕಾಣಬಹುದು. ಆದರೆ ಇವು ಬಹಳ ಯೆತ್ತರವಾಗಿ ಬೆಳಿಯುವದಿಲ್ಲ, ಬಹಳ ಗಡುತರವೂ ಆಗುವದಿಲ್ಲ. ಬೈಲು ಶೀಮೆಯ ಅಡವಿಯಲ್ಲಿ ಸಾಧಾರಣವಾಗಿ ಯೆಲ್ಲ ಕಡೆಯಲ್ಲಿಯೂ ದೃಷ್ಟಿಗೆ ಬೀಳುವ ವೃಕ್ಷ ಜಾತಿಗಳು ಯಾವವೆಂದರೆ— ಜಾಲಿ, ಈಚಲ, ಕಳ್ಳಿ, ಮುಳ್ಳುಗಳ್ಳಿ, ಬೇವು, ಬಸರಿ, ಹುಣಚಿ, ಅರಳಿ, ಆಲ, ನೇರಲ, ಬೆಳುವಲು, ನೆಲ್ಲಿ, ಬೋರೆ, ಮಾವು, ಮಶಿವಾಳ, ಹುಲಗಲಿ, ದಿಂಡಲ, ಜಂಬಿ, ಅತ್ತಿ, ಬಣದುರ್ಬಿ, ಕೇಂಡಾಳಿ, ಕಕ್ಕಿ, ಇತ್ಯಾದಿ. ಹೊನ್ನವರಿ, ಇಪ್ಪಿ, ಕಾರಿ, ಮದ್ದುಗಣಕಿ, ಗೊಳಗೊಳಕಿ, ಮುಂತಾದ ಕಿರಿ ಜಾತಿಗಳನ್ನು ಬಹುತರ ಯೆಲ್ಲ ಕಡೆಯಲ್ಲಿ ನೋಡ ಬಹುದು. ನೀರಿನ ಆಸರವಿದ್ದಲ್ಲಿ ಈಚಲ, ಜಾಲಿ, ಕಳ್ಳಿ, ಇವುಗಳ ಬನಗಳು ವಿಸ್ತಾರವಾಗಿ ಹಬ್ಬಿರುತ್ತವೆ. ಮುಳ್ಳುಗಳ್ಳಿ ಇಲ್ಲದಂಥ ಸ್ಥಳವು ದೊರೆಯುವದೇ ಅಪರೂಪ. ತೋಟಗಳಲ್ಲಿ ಮಾವಿನ ಬನಗಳು ಬಹು ಮನೋಹರವಾಗಿ ಬೆಳಿದಿರುತ್ತವೆ. ಅರೆ ಬೇವಿನ ಜಾತಿಯ ಮರವು ನೆಟ್ಟಗೆ ಯೆತ್ತರವಾಗಿ ಬೆಳಿಯುತ್ತದೆ; ಆದರೆ ೪, ೫ ಇಂಚುಗಳಿಗಿಂತ ಹೆಚ್ಚು ಗಡುತರವಾಗುವದಿಲ್ಲ. ಇದರ ಕಟ್ಟಿಗೆಗೆ ಹುಳ ಹತ್ತುವದಿಲ್ಲ; ಅದು ಬಹು ತಾಳಿಕೆಯುಳ್ಳದ್ದಿರುವ ಕಾರಣ, ಮನೆಗಳಿಗೆ ಅದರ ಜಂತಿಗಳನ್ನು ಹಾಕುವರು. ಒಳಗಡೆಯಲ್ಲಿ ಸರಕಾರೀ ಅಧಿಕಾರಿಗಳು ಹಲ ಕೆಲವು ಕಡೆಯಲ್ಲಿ ಬಿದರಿನ ಮೆಳಿಗಳನ್ನು ಹಚ್ಚಿ ಬೆಳಿಸ ಹತ್ತಿದ್ದಾರೆ.

ವಿಜಾಪುರ ಜಿಲ್ಲೆಯಲ್ಲಿ ಮೇಲೆ ಹೇಳಿದ ಮೂರು ತಾಲೂಕುಗಳಲ್ಲಿ, ಅಂದರೆ ಕೃಷ್ಣೆಯ ದಕ್ಷಿಣ ಭಾಗದಲ್ಲಿ ಮಾತ್ರ ಅಡವಿಯ ಸುದ್ದಿಯು. ಆ ಹೊಳೆಯನ್ನು ದಾಟ ಉತ್ತರಕ್ಕೆ ಹೋದ ಬಳಿಕ ಭೂಮಿಯಲ್ಲಿ ಮರಗಳನ್ನು ಕಾಣುವದೇ ಅಪರೂಪವು. ಗ್ರಾಮಗಳಲ್ಲಿ ಸಹ ಮರಗಳಿಲ್ಲದ್ದರಿಂದ ಅವು ದೂರಿಂದ ಸುಟ್ಟಂತೆ ಕಾಣುತ್ತಿರುತ್ತವೆ.

ಧಾರವಾಡ, ಬೆಳಗಾವಿ, ಜಿಲ್ಲೆಗಳ ಬೈಲು ಶೀಮೆಯ ಅಡವಿಗಳು ಆಯಾ ಜಿಲ್ಲೆಯ ಸರಕಾರೀ ವನರಕ್ಷಕರ ಅಧಿಕಾರಕ್ಕೆ ಶೇರಿರುತ್ತವೆ. ಧಾರವಾಡ ಜಿಲ್ಲೆಯಲ್ಲಿ ಬೈಲು ಶೀಮೆಯ ಅಡವಿಯ ವಿಸ್ತಾರವು ೨೦೪ ಚಚ್ಚೌಕು ಮೈಲು; ಇದರಲ್ಲಿ ಕಾದದ್ದು ೪೭ ಮೈಲು, ಸಂರಕ್ಷಿಸಿದ್ದು ೧೭೭ ಮೈಲು. ಬೆಳಗಾವೀ ಜಿಲ್ಲೆಯಲ್ಲಿ ಈ ಅಡವಿಯು ವೊಟ್ಟಗೆ ೨೯೯ ಚಚ್ಚೌಕು ಮೈಲು ವಿಸ್ತಾರವಾಗಿದೆ; ಇದರಲ್ಲಿ ಕಾದದ್ದು ೨೩೦ ಚಚ್ಚೌಕು ಮೈಲು, ಸಂರಕ್ಷಿಸಿದ್ದು ೬೯ ಮೈಲು.

ವಿಜಾಪುರ ಜಿಲ್ಲೆಗೆ ವೊಬ್ಬ ಸಬ ಅಶಿಷ್ಟಾಂಟ ಕಾನ್‌ಸರ್ವೇಟರನೆಂಬ ಅಧಿಕಾರಿಯನ್ನು ನೆಮಿಸಿದ್ದಾರೆ. ಈ ಜಿಲ್ಲೆಯ ಯಾವತ್ತು ಅಡವಿಯ ವಿಸ್ತಾರವು ೨೪೫ ಚ. ಮೈಲಿಗಿಂತ ಹೆಚ್ಚಿಲ್ಲ; ಅದರಲ್ಲಿ ಕಾದದ್ದು ೧೫೫ ಚ. ಮೈಲು, ಸಂರಕ್ಷಿಸಿದ್ದು ೯೦ ಚ. ಮೈಲು. ಸನ್ ೧೮೮೦-೮೧ನೇ ವರ್ಷ ಈ ಅಡವಿಯ ವೊಟ್ಟು ಉದಾಯ ೧೨೩೭೦ ರೂಪಾಯಿ. ವೊಟ್ಟು ವೆಚ್ಚ, ಕಾಯಿಮ ನೌಕರರು, ಬೀಜ, ಗಿಡ ಹಚ್ಚುವದು, ನೀರು ಹಾಕುವದು ಸಹಿತ

೯೦೮೦ ರೂಪಾಯಿ; ಶಿಲಕು, ೩೯೯೦ ರೂಪಾಯಿ. ಸದ್ಯಕ್ಕೆ ಈ ಜಿಲ್ಲೆಯಲ್ಲಿ ಅಡವಿಯ ವಿಸ್ತಾರವನ್ನು ಬೆಳಿಸುವ ಪ್ರಯತ್ನವು ಬಹಳ ಜಾರಿಯಿಂದ ನಡಿದಿರುತ್ತದೆ. ಈ ಜಿಲ್ಲೆಯಲ್ಲಿ ಕುಮ್ರಿಯ ಸುದ್ದಿಯೇ ಇಲ್ಲ. ಉಳಿದ ಬಾಬುಗಳಲ್ಲಿ ಸರಕಾರದವರ ಹಕ್ಕುಗಳೂ ರೈತರ ಹಕ್ಕುಗಳೂ ಬೆಳಗಾವಿ, ಧಾರವಾಡ, ಜಿಲ್ಲೆಗಳ ಸಂಬಂಧದಲ್ಲಿ ಹೇಳಿದಂತೆ ಇರುತ್ತವೆ. ಈಚಲಮರಗಳಿಂದ ಹೆಂಡ ತೆಗಿಯುವ ಕೆಲಸವು ಈ ಜಿಲ್ಲೆಯಲ್ಲಿ ಪೊಳಿತಾಗಿ ನಡಿಯುವ ಕಾರಣ, ಅದರಿಂದ ಸರಕಾರಕ್ಕೆ ತಕ್ಕಮಟ್ಟಿಗೆ ಆದಾಯವಾಗುತ್ತದೆ.

## ಪಶು ಮೃಗಾದಿಗಳು.

ಪಶುಗಳು, (ಎತ್ತು, ಆಕಳು, ಕೋಣ, ಎಮ್ಮೆ, ಕುದುರೆ, ಕತ್ತೆ, ಕುರಿ, ಆಡು).— ಘಟ್ಟದ ಕೆಳಗೂ ಮಲ್ಲಾಡದಲ್ಲಿಯೂ (ಹಲ್ಯಾಳ ಯಲ್ಲಾಪುರ ತಾಲೂಕುಗಳಲ್ಲಿ) ದನಗಳು ಬಾಳುವದೇ ಇಲ್ಲ. ಧಾರವಾಡ, ಬೆಳಗಾವಿ, ಜಿಲ್ಲೆಗಳಲ್ಲಿಯೂ ವಿಜಾಪುರ ಜಿಲ್ಲೆಯ ನದೀತೀರದ ಪ್ರದೇಶಗಳಲ್ಲಿಯೂ ಯಾವತ್ತು ಪ್ರಕಾರದ ದನಗಳು ತಕ್ಕಮಟ್ಟಿಗೆ ಕಸುವಿನಿಂದ ಬೆಳಿಯುತ್ತವೆ. ವಿಜಾಪುರ ಜಿಲ್ಲೆಯ ಉತ್ತರ ಭಾಗದಲ್ಲಿ, ಅಂದರೆ ಕೃಷ್ಣೆಯ ಉತ್ತರದಲ್ಲಿ ಹುಟ್ಟುವ ದನಗಳು ಗಿಡ್ಡ, ಕಸುವಿಲ್ಲದವು.

ಕಾನಡಾ ಜಿಲ್ಲೆಯಲ್ಲಿ ದನಗಳ ಜಾತಿ ಬಹಳ ಕೀಳಾಗುತ್ತದೆ. ಸಮುದ್ರ ದಂಡೆಯಲ್ಲಿ ಹುಲ್ಲು ಬೆಳಿಯುವದಿಲ್ಲ, ಬತ್ತದ ಹುಲ್ಲಿನಿಂದ ದನದ ಹೊಟ್ಟೆ ತುಂಬುವದಿಲ್ಲ. ಆದರಿಂದ ಘಟ್ಟದ ಕೆಳಗೆ ದನಗಳು ಹುಟ್ಟಿ ಬೆಳಿಯುವದು ಬಹು ದುರ್ಲಭ. ಪರ ಜಿಲ್ಲೆಗಳಿಂದ ಕೆಲವರು ಯೆತ್ತು, ಯೆಮ್ಮೆ, ಮುಂತಾದವುಗಳನ್ನು ತರುತ್ತಾರೆ. ಆದರೆ ಅವು ಬೇಗ ಬಡಕಾಗುತ್ತವೆ. ಕುದುರೆಗಳಿಗಂತು ಅಲ್ಲಿಯ ಹವೆಯೇ ತಾಳುವದಿಲ್ಲ. ಸುಪೆ ಯಲ್ಲಾಪುರ ತಾಲೂಕುಗಳಲ್ಲಿ ದನ ಕಾಣುವದೇ ದುರ್ಲಭ. ಸಿರಶಿ, ಸಿದ್ದಾಪುರ ತಾಲೂಕುಗಳಲ್ಲಿ ಕೆಲವು ಮಟ್ಟಿಗೆ ದನಗಳು ಬಾಳುತ್ತವೆ. ಮೊದಲು ಮಲ್ಲಾಡದ ಅಡವಿಯ ನೆರೆಹೊರೆಯಲ್ಲಿ ಗೌಳಿಗರು ಯೆಮ್ಮೆಗಳನ್ನು ಕಟ್ಟಿಕೊಂಡು ಅಡವಿಯನ್ನು ಬಹಳ ಹಾಳು ಮಾಡುವರು. ಆದರೆ ಈಗ ಅವರ ಯೆಮ್ಮೆಗಳೇ ಉಳಿದಿಲ್ಲ. ಹೈಗ ಬ್ರಾಹ್ಮಣರಿಗೆ ಮೊಸರು ಮಜ್ಜಿಗೆ ಬಹಳ ಬೇಕಾಗುವ ಕಾರಣ ಅವರು ಘಟ್ಟದ ಕೆಳಗೆ ಸಹ ಯೆಮ್ಮೆಗಳನ್ನು ಕಟ್ಟುವರು.

ಘಟ್ಟದ ಕೆಳಗೆ ಬಂಡಿಗಳೂ ದನಗಳೂ ಇಲ್ಲವೇ ಇಲ್ಲ. ಆದದರಿಂದ ಸುಖಿ ಜನರು ಮಚಲೆಂಬದೊಂದು ಪ್ರಕಾರದ ವಾಹನವನ್ನು ಉಪಯೋಗಿಸುತ್ತಾರೆ. ಸುಮಾರು ೧೦ ಮೊಳ ಉದ್ದವಾದದ್ದೊಂದು ಡವಿಗೆಯ ಯೆರಡೂ ತುದಿಗಳನ್ನು ಸುಮಾರು ಮೂರು ಮೂರು ಮೊಳ ಬಿಟ್ಟು, ಅದರಲ್ಲಿ ಯೆರಡು ಗಡುತರವಾದ ವಂಕಿಗಳನ್ನು ಜಡಿಯುತ್ತಾರೆ. ಒಂದು ಮೊಳ ಅಗಲು, ೪ ಮೊಳ ಉದ್ದ, ದಪ್ಪನ್ನ ಪಡಮದ ತುಂಡು ತಕ್ಕೊಂಡು, ಅದರ ಯೆರಡೂ ತುದಿಗಳಲ್ಲಿ ಯೆರಡು ದುಂಡು ಕಟ್ಟಿಗೆಗಳ ತುಂಡು ಗಟ್ಟಿಯಾಗಿ ಹೊಲಿದು

ಕೂಡ್ರಿಸಿ ಆ ಕಟ್ಟಿಗೆಗಳ ತುದಿಗಳಿಗೆ ನೂಲಿನ ಹಗ್ಗಗಳನ್ನು ಕಟ್ಟಿ ಅವುಗಳನ್ನು ಡವಿಗೆಯ ವಂಕಿಗಳಿಗೆ ತೂಗ ಹಾಕುವರು. ಇದು ಮಂಚಲಾಯಿತು. ಇದರಲ್ಲಿ ಕೂಡ್ರುವ ಮನುಷ್ಯನು ಪಡಮದ ಮೇಲೆ ಮಲಿಕೊಳ್ಳುವನು. ಡವಿಗೆಯ ಯೆರಡೂ ತಿದಿಗಳನ್ನು ಇಬ್ಬಿಬ್ಬರು ಭೋಯಿಗಳು ಪಲ್ಲಕ್ಕಿಯಂತೆ ಹೊರುವರು. ಭೋಯಿಗಳಲ್ಲದೆ ಹರಿಕಾಂತರು, ಕಾರ್ವಿ ಜನರು, ಅಂಬಿಗರು, ಮಂಚಲುಗಳನ್ನು ಹೊರುವ ಹೋರೆಯನ್ನು ಮಾಡುವರು. ಕುದುರೆಯು ಕಬ್ಬಿಣ (ಲಗಾಮು) ಕಡಿಯುವ ಕಾಡುಮಿಕವೆಂದು ಹೇಳಿ ಈ ಜನರು ಅದನ್ನು ಮುಟ್ಟುವದಿಲ್ಲ.

ಯೆತ್ತು ಆಕಳು.— ಯೆತ್ತುಗಳಲ್ಲಿ ಸೋರಟಿ, ಮೂಡಲು, ಕುಂಡಲವಾಡಿ, ಜವಾರಿ, ಧಣಗರೀ, ಖಿಲಾರೀ, ಹಣಬಿರಿ, ಚಿಲ್ಲರಿ, ಯೆಂಬ ೮ ಜಾತಿಗಳುಂಟು. ಸೋರಟೀ ಯೆತ್ತುಗಳು ಗುಜರಾಥದಿಂದ ಬರುತ್ತವೆ; ಮೂಡಲದವು ಬಳ್ಳಾರಿಯ ಶೀಮೆಯಿಂದ ಬರುತ್ತವೆ; ಜವಾರೀ ಯೆತ್ತುಗಳು ಇದೇ ಶೀಮೆಯಲ್ಲಿ ಹುಟ್ಟುತ್ತವೆ. ಕುಂಡಲವಾಡಿ ಯೆಂಬ ಜಾತಿಯ ಯೆತ್ತುಗಳೂ, ಧನಗರೀ ಮುಂತಾದ ನಾಲ್ಕು ಕಡಿಮೇ ಜಾತಿಯ ಯೆತ್ತುಗಳೂ ಬೆಳಗಾವಿ ಜಿಲ್ಲೆಯಲ್ಲಿ ಮಾತ್ರ ಇರುತ್ತವೆ. ಉಳಿದ ಮೂರು ಜಾತಿಗಳು ಬೆಳಗಾವಿ, ವಿಜಾಪುರ ಜಿಲ್ಲೆಗಳಲ್ಲಿ ಪ್ರಸಿದ್ಧ; ಅವುಗಳ ಹೊರ್ತು ಯೆರಡು ಜಾತಿಗಳು ಧಾರವಾಡ ಜಿಲ್ಲೆಯಲ್ಲಿ ಪ್ರಸಿದ್ಧ. ಹೊಳೆ ಸಾಲಿನೆತ್ತೆಂಬ ಕೃಷ್ಣಾ ತೀರದ ಯೆತ್ತುಗಳಿಗಾದರೂ ಧಾರವಾಡ ಜಿಲ್ಲೆಯಲ್ಲಿ ತಕ್ಕಮಟ್ಟಿಗೆ ಮಾನವಿರುತ್ತದೆ. ಸೋರಟೀ ಜಾತಿ ಬಹಳ ಯೆತ್ತರ, ಮೈ ಕೈಯಲ್ಲಿ ಗಡುತರವಾಗಿ ಬೆಳಿದಿರುತ್ತದೆ. ಮೂಡಲ ದನ ಅದಕ್ಕೂ ಕಿರಿದು; ಜವಾರೀದು ಯೆಲ್ಲಕ್ಕೂ ಕಿರಿದು, ಮೊದಲಿನ ಯೆರಡು ಜಾತಿಗಳು ಬಹಳ ಕಸುವುಳ್ಳವುಗಳಾದಾಗ್ಯೂ, ಅವುಗಳಿಗೆ ಮಿತಿಮೀರಿ ಶ್ರಮವೂ ಉಪವಾಸವೂ ತಾಳುವದಿಲ್ಲ, ಸುಗ್ರಾಸ ಬೇಕು. ಜವಾರಿಯ ದನಕ್ಕೆ ಅಲ್ಪ ಸ್ವಲ್ಪ ಶಿಕ್ಕಂಥ ಆಹಾರ ಕೊಟ್ಟು ಬೆಳಗಿನಿಂದ ಸಾಯಂಕಾಲದ ವರೆಗೆ ಅವುಗಳನ್ನು ದುಡಿಸಿ ಕೊಳ್ಳುವರು. ಅದರಿಂದ ವೊಕ್ಕಲಿಗರು ಜವಾರಿಯ ಯೆತ್ತುಗಳನ್ನೇ ಹೆಚ್ಚಾಗಿ ಕಟ್ಟುವರು. ಹೊಳೆ ಸಾಲಿನವಾದರೂ ಇಂಥವೇ. ಸೋರಟೀ ಎತ್ತುಗಳಿಗೂ ಮೂಡಲದೆತ್ತುಗಳಿಗೂ ಬೆಲೆ ಬಹಳ ಬೀಳುತ್ತದೆ. ಗಾಡಿಗಳನ್ನು ಯೆಳಿಯುವದರಲ್ಲಿ ಇವು ಜವಾರಿಯ ಯೆತ್ತುಗಳಿಗಿಂತ ಬಹಳ ಮೇಲು.

ಆಕಳುಗಳಲ್ಲಿ ಸೋರಟೀ, ಜವಾರಿ, ಮಲ್ಲಾಡದವು, ಯೆಂದು ಮೂರು ವರ್ಗಗಳನ್ನು ಮಾಡ ಬಹುದು. ಮೂಡಲ ಜಾತಿಯ ಆಕಳುಗಳು ಈ ಶೀಮೆಗೆ ಬರುವದಿಲ್ಲ. ಸೋರಟೀ ಆಕಳು ಯೆಲ್ಲಕ್ಕೂ ಯೆತ್ತರ, ಕೈಕಾಲು ಬೀಸು, ಯೆಮ್ಮೆಯ ಸರಿ ಹಾಲು ಕೊಡುತ್ತದೆ; ಮತ್ತೂ ಅದರಿಂದ ಹುಟ್ಟುವ ದನವಾದರೂ ಸೋರಟೀ ದನವೇ ಆಗುತ್ತದೆ. ಆ ಕಾರಣ ಸೋರಟೀ ಆಕಳುಗಳಿಗೆ ೧೦೦ ರೂಪಾಯಿಯ ವರೆಗೆ ಬೆಲೆ ಬೀಳುವದು. ಜವಾರಿಯ ಆಕಳುಗಳು ಜವಾರೀ ಯೆತ್ತುಗಳಂತೆ ಕಿರಿದಾಗಿ ಇರುತ್ತವೆ. ಇವುಗಳ ಹೈನ ಕಡಿಮೆ, ೬ರಿಂದ ೯ ತಿಂಗಳುಗಳ ವರೆಗೆ ನಡಿಯುತ್ತದೆ. ಮಲ್ಲಾಡದ ಆಕಳು ಜವಾರೀ ಆಕಳಿಗಿಂತ ಕಿರಿದಾದದ್ದು; ಅದರ ಹೈನವೂ ಅಷ್ಟಕ್ಕಷ್ಟೇ.

ಕೋಣ, ಯೆಮ್ಮೆಗಳು.—ಗೌಳಿಗರವು, ಜವಾರೀ, ಯೆಂಬೆರಡು ಜಾತಿಯ ಕೋಣಗಳು ಪ್ರಸಿದ್ಧ. ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲಿ ಗೌಳಿಗರ ಕೋಣಗಳು ಕಿರಿದಿರುತ್ತವೆ; ವಿಜಾಪುರ ಜಿಲ್ಲೆಯಲ್ಲಿ ಯೆತ್ತರವಿರುತ್ತವೆ. ಕೋಣಗಳು ಯೆತ್ತುಗಳಿಗಿಂತ ಹೆಚ್ಚು ಕಸುವಿರುತ್ತವೆ. ಆದರೆ ಅವುಗಳಿಗೆ ಬುದ್ಧಿ ಬಹು ಕಡಿಮೆ, ಬಿಸಿಲು ತಾಳುವದಿಲ್ಲ. ರಂಟೆ ಮುಂತಾದ ಕಸುವಿನ ಕೆಲಸಕ್ಕೆ ವೊಕ್ಕಲಿಗರು ಕೋಣಗಳನ್ನು ಹೂಡುವರು. ಆದರೆ ೩, ೪ ತಾಸು ಹೊತ್ತು ಯೇರಿತೆಂದರೆ ಅವುಗಳ ಆಟ ನಿಂತು ಹೋಗುತ್ತದೆ. ಪ್ರತಿ ದಿನ ಕೋಣಗಳ ಮೈ ಮೇಲೆ ನೀರು ಬೀಳುತ್ತಿದ್ದರೆ ಅವು ನೆಟ್ಟಗಿರುತ್ತವೆ.

ಯೆಮ್ಮೆಗಳಲ್ಲಿಯೂ ಗೌಳಿ, ಜವಾರಿ ಯೆಂಬೆರಡು ವರ್ಗಗಳುಂಟು. ಇವಲ್ಲದೆ ಬೆಳಗಾವೀ ಜಿಲ್ಲೆಯ ಅಡವಿಯಲ್ಲಿ ವಾಸಿಸುವ ಕುರುಬರ ಯೆಮ್ಮೆಗಳು ಬೇರೆ ಇರುತ್ತವೆ. ಅವುಗಳಿಗೆ ಧನಗರೀ ಯೆಂಬ ಹೆಸರುಂಟು. ಈ ಧನಗರೀ ಯೆಮ್ಮೆಗಳು ಬಹಳ ಬೆದರಬಡಕ, ಇರಕುಳಿ. ವಿಜಾಪುರ ಜಿಲ್ಲೆಯಲ್ಲಿ ಗೌಳಿಗರು ನಾಗಪುರದ ಶೀಮೆಯ ಯೆಮ್ಮೆಗಳನ್ನು ಕಟ್ಟುವರು. ಅವು ಜವಾರೀ ಯೆಮ್ಮೆಗಳಿಗಿಂತ ಯೆತ್ತರಿರುತ್ತವೆ. ಧಾರವಾಡ ಬೆಳಗಾವೀ ಜಿಲ್ಲೆಗಳಲ್ಲಿ ಗೌಳಿಗರ ಯೆಮ್ಮೆಗಳಿಗೂ ಜವಾರೀ ಯೆಮ್ಮೆಗಳಿಗೂ ತೋರಿಕೆಯಲ್ಲಿ ಬಹಳ ಹೆಚ್ಚುಕಡಿಮೆ ಇರುವದಿಲ್ಲ. ಯಾವತ್ತು ಪ್ರಕಾರದ ಹೈನದಲ್ಲಿ ಯೆಮ್ಮೆಯ ಹೈನವೇ ಮೇಲಾದದ್ದು. ಯೆಮ್ಮೆಯ ಹಾಲು ಆಕಳಿನ ಹಾಲಿಗಿಂತ ಗಟ್ಟಿ, ಅದಕ್ಕೆ ಹೆಡಸು ಬಹಳ. ಒಂದು ಸೂಲದ ಹೈನವು ಸುಮಾರು ವೊಂದು ವರ್ಷ ನಡಿಯುತ್ತದೆ. ಕೃಷ್ಣಾ ತೀರದ ಯೆಮ್ಮೆಗಳ ತುಪ್ಪವು ಯೆಲ್ಲಕ್ಕೂ ಮೇಲಾದದ್ದು. ಹಾಲು ಬೆಣ್ಣೆಗಳನ್ನು ಮಾರುವರು. ಒಂದು ಯೆಮ್ಮೆಯ ಹೈನದ ಮೇಲೆ ಐದಾರು ಜನರ ಹೊಟ್ಟೆಯನ್ನು ಸಾಗಿಸಿಕೊಳ್ಳುತ್ತಾರೆ.

ಯೆತ್ತು, ಆಕಳು, ಕೋಣ, ಯೆಮ್ಮೆಗಳ ಮಾರಾಟದ ಮುಖ್ಯ ಬಾಜಾರುಗಳು ಧಾರವಾಡ ಜಿಲ್ಲೆಯಲ್ಲಿ ನವಲಗುಂದ, ರೋಣ, ಗದಗು; ಬೆಳಗಾವೀ ಜಿಲ್ಲೆಯಲ್ಲಿ ನಿಪಾಣಿ, ಬೈಲಹೊಂಗಲ, ಗೋಕಾವಿ, ಬೆಳಗಾವಿ, ಕಿತ್ತೂರು, ನಂದಗಡ; ವಿಜಾಪುರ ಜಿಲ್ಲೆಯಲ್ಲಿ ಅಮಿನಗಡ, ಬಾದಾವಿ. ಕಿತ್ತೂರಲ್ಲಿ ಕೋಣಗಳ ಮಾರಾಟವು ಬಹಳಾಗುತ್ತದೆ.

ಕತ್ತೆಗಳು.—ಇವುಗಳನ್ನು ಉತ್ತಮ ಜಾತಿಯವರು ಮುಟ್ಟುವದಿಲ್ಲ. ವಾಡಿಕೆಯಾಗಿ ವೊಡ್ಡರು, ಡೊಂಬರು, ಕೊರವರು, ಕುಂಬಾರರು, ಅಗಸರು, ಮುಂತಾದ ಕಡಿಮೇ ಜಾತಿಗಳ ಜನರು ಕತ್ತೆಗಳನ್ನು ಕಟ್ಟುವರು. ಈ ಜನರು ಬೇಕಾದಾಗ ಅವುಗಳ ಕೈಯಿಂದ ಕೆಲಸ ಮಾಡಿಸಿಕೊಂಡು, ಕೆಲಸ ತೀರಿದ ಕೂಡಲೆ ಅವುಗಳನ್ನು ಬಿಟ್ಟು ಬಿಡುವರು. ಆ ಬಡ ಪಶುಗಳು ತಿಪ್ಪೆಗಳಲ್ಲಿಯೂ ಓಣಿಗಳಲ್ಲಿಯೂ ಶಿಕ್ಕದ್ದು ತಿಂದು ಜನ್ಮ ಕಳಿಯುವವು. ಅವುಗಳ ಸಂಬಂಧವಾಗಿ ವೊಡಿಯನಿಗೆ ವೊಂದು ದಮ್ಮಡಿಯ ವೆಚ್ಚವಿಲ್ಲ, ಬೇಕಾದಾಗ ಕೆಲಸಕ್ಕೆ ಸಿದ್ಧ. ಆದದರಿಂದ ಮನುಷ್ಯ ಜಾತಿಯ ಋಣ ತೀರಿಸುವದೇ ಕತ್ತೆಯ ಜನ್ಮವೆಂದು ಹೇಳ ಬಹುದು. ಕತ್ತೆಗಳ ಬೆಲೆಯು ೧೦ರಿಂದ ೨೦ ರೂಪಾಯಿಯ ವರೆಗೆ ಇರುತ್ತದೆ.

ಹೇಸರಗತ್ತೆಯು ಈ ಶೀಮೆಯಲ್ಲಿ ಬಹಳ ಪ್ರಸಿದ್ಧವಿಲ್ಲ. ಸರಕಾರೀ ಕಮಿಸರೀ ಖಾತೆಯಲ್ಲಿಯೂ ಒಳಗಡೆಯಲ್ಲಿ ಟಪಾಲ ಖಾತೆಯಲ್ಲಿಯೂ ಹೇಸರಗತ್ತೆಗಳನ್ನು ಹೂಡುವರು.

ಕುರಿ, ಆಡು.—ಇವುಗಳ ಹಿಂಡುಗಳನ್ನು ವಾಡಿಕೆಯಾಗಿ ಕುರುಬರು ಸಾಕುವರು. ಆದರೆ ಮುಸಲ್ಮಾನರೂ ಕುಂಬಾರರೂ ಸಹ ಕುರಿಗಳನ್ನು ಸಾಕುವದುಂಟು. ಕುರಿಗಳಲ್ಲಿ ಕೆಂಗುರಿ, ಜವಾರಿ, ಯೆಳಗ, ಯೆಂಬ ಮೂರು ಜಾತಿಗಳಿವೆ. ಆಡುಗಳಲ್ಲಿ ಕರೆ ಆಡು, ಕುಯ್ಯಾಡು, ಯೆಂಬೆರಡು ಜಾತಿಗಳು. ಕುರಿಯ ಹಾಲಿಗೂ ಕರೆ ಆಡಿನ ಹಾಲಿಗೂ ಉಗ್ರವಾಸನೆ ಬಹಳ. ಕುಯ್ಯಾಡು ಬೆಳ್ಳಗಿರುತ್ತದೆ; ಅದರ ಹಾಲು ಬಹಳ ನಾರುವದಿಲ್ಲ. ಆಡಿನ ಹಾಲು ಶರೀರಕ್ಕೆ ಬಹಳ ಆರೋಗ್ಯಕರವು. ಕುರಿ, ಯೆಳಗಗಳ, ಉಣ್ಣೆಯನ್ನು ವರ್ಷದಲ್ಲಿ ಎರಡು ಸಾರಿ ಕತ್ತರಿಸುವರು. ಕೆಂಗುರಿಯ ಉಣ್ಣೆಯು ಕಿರಿಗೆಂಪಾಗಿ ಹೆಚ್ಚು ಮಿದುವಿರುತ್ತದೆ. ಹೆಣ್ಣುಗುರಿಗೂ ಹೋತಿಗೂ ಸಂಯೋಗವಾಗುವದರಿಂದ ಯೆಳಗ ಹುಟ್ಟುತ್ತದೆ. ಕತ್ತೆಗಳಂತೆ ಕುರಿ, ಆಡುಗಳನ್ನು ಸಾಕುವವರಿಗೂ ವೆಚ್ಚವೇನೇನು ಇಲ್ಲ. ಒಬ್ಬ ಹುಡುಗನು ನೂರಾರು ಕುರಿ ಆಡುಗಳ ಹಿಂಡನ್ನು ಕಾಯುವನು. ಅವು ಅಡವಿಯಲ್ಲಿ ಸಿಕ್ಕಂಥ ಹಸುರು ಯೆಲೆಗಳನ್ನು ತಿಂದು ಬದುಕುವವು. ಕುರುಬನಿಗೆ ಕುರಿಗಳ ಹಾಲು, ಬೆಣ್ಣೆ, ಉಣ್ಣೆಗಳಿಂದ ಲಾಭವಾಗುವದಲ್ಲದೆ, ಕೊಯ್ಯುವದಕ್ಕೋಸ್ಕರವಾಗಿ ಅವುಗಳನ್ನು ಅವನು ಮಾರುವನು. ಮಾರಾಟದಿಂದ ಕುರುಬನಿಗೆ ಆಗುವಷ್ಟು ಲಾಭವು ಹೈನದಿಂದಲೂ ಉಣ್ಣೆಯಿಂದಲೂ ಆಗುವದಿಲ್ಲ. ಕುರಿಗಳೂ ಆಡುಗಳೂ ವೊಂದೊಂದು ಸೂಲಕ್ಕೆ ೧, ೪, ೫ ಮರಿಗಳನ್ನು ಈಯುವದರಿಂದ ಅವುಗಳ ಸಂತತಿಯು ಬಹು ಬೇಗ ಬೆಳಿಯುತ್ತದೆ. ಕುರಿ ಆಡುಗಳ ಸಂಖ್ಯೆವು ಧಾರವಾಡ, ಬೆಳಗಾವಿಗಳಿಗಿಂತ ವಿಜಾಪುರ ಜಿಲ್ಲೆಯಲ್ಲಿ ಹೆಚ್ಚಿರುವದು. ಕುರುಬರ ಹೊರ್ತು ಆಡುಗಳನ್ನು ಬೇರೆ ಜಾತಿಗಳ ಜನರು ಸಹಾ ಹೈನದ ಸಲುವಾಗಿ ಕಟ್ಟುವರು.

ಹಂದಿಗಳು.—ಇವುಗಳನ್ನು ವೊಡ್ಡರೂ ಧಾರವಾಡ, ಬೆಳಗಾವೀ ಜಿಲ್ಲೆಗಳಲ್ಲಿ ಕ್ರಿಸ್ತೀ ಜನರೂ ಸಾಕುವರು. ಇವುಗಳ ಉಪಜೀವನವು ಹ್ಯಾಗಾಗುತ್ತದೆಂಬದನ್ನು ಕುರಿತು ಬರಿಯುವ ಪ್ರಯೋಜನವಿಲ್ಲ. ಹಂದಿಗಳನ್ನು ಸಾಕುವವರೇ ಹೊರ್ತಾಗಿ ಬೇರೆ ಯಾರೂ ಬಹುತರ ಅವನ್ನು ತಿನ್ನುವದಿಲ್ಲ. ಮುಸಲ್ಮಾನರಂತು ಹಂದಿಯನ್ನು ನೋಡಿದರೆ ಹೇಸುವರು.

ನಾಯಿಗಳು.—ಸಣ್ಣ ದೊಡ್ಡ ಹಳ್ಳಿಗಳಲ್ಲಿ ಸಹ ಓಣೋಣಿಗೆ ನಾಯಿಗಳನ್ನು ಕಾಣಬಹುದಾದಾಗ್ಯೂ ಅವುಗಳಿಗೆ ಬಹುತರ ವೊಡಿಯರೇ ಇರುವದಿಲ್ಲ. ತಿಪ್ಪೆಯ ಮೇಲೆ ಅವುಗಳ ಬಾಳ್ವೆಯು. ಆದರೆ ಈ ಬಗೆಯಾಗಿ ಬದುಕುವ ನಾಯಿಗಳು ತೀರ ಕೀಳು ಕುಲದವಿರುತ್ತವೆ. ಉತ್ತಮ ಕುಲದ ನಾಯಿಗಳನ್ನು ಬೇಟೆಗಾರರು ಸಾಕುವರು. ಅವು ಮೊಲ, ನರಿ, ಚಿಗರೆಗಳನ್ನು ಸಹ ಹಿಡಿಯುವವು. ಅಂಥಾ ಉತ್ತಮ ಕುಲದ ನಾಯಿಗೆ ನೂರಾರು ರೂಪಾಯಿ ಬೆಲೆ ಬೀಳುವದು. ಕುರುಬರ ವೊಂದೊಂದು ಹಿಂಡಿನಲ್ಲಿ

ಬಹುತರ ವೊಂದೊಂದು ನಾಯಿ ಇರುತ್ತದೆ. ಅದು ಕುರಿಗಳನ್ನು ಕಾಯುವ ಕೆಲಸದಲ್ಲಿ ತನ್ನ ವೊಡಿಯನಿಗೆ ಸಹಾಯ ಮಾಡುವದು. ನಾಯಿಯು ಪಶುಗಳಲ್ಲಿ ಯೆಲ್ಲಕ್ಕೂ ಹೆಚ್ಚು ಬುದ್ಧಿಯುಳ್ಳದ್ದಾಗಿ, ಯಾವಾತನ ಅನ್ನ ತಿನ್ನುವದೋ ಅವನ ಚಾಕರಿಯನ್ನು ಮನಮುಟ್ಟಿ ಮಾಡುವದೇ ಹೊರ್ತು ಅವನಿಗೆ ಯೆಂದೆಂದು ಅಪಕಾರ ಮಾಡಲರಿಯದು. ಈ ಕಾರಣದಿಂದ ಕೆಲವರು ಉತ್ತಮ ಕುಲದವರು ಸಹ ಉತ್ತಮ ಕುಲದ ನಾಯಿಗಳನ್ನು ಸಾಕುವರು.

ಸಾಕಿದ ಪಶುಗಳ ಸಂಬಂಧದಲ್ಲಿ ಕಾನಡಾ ಜಿಲ್ಲೆಯು ಉಳಿದ ಮೂರು ಜಿಲ್ಲೆಗಳಿಗಿಂತ ಯೆಷ್ಟು ಪ್ರಮಾಣದಿಂದ ಹಿಂದಿರುತ್ತದೆಯೋ ಅಷ್ಟೇ, ಕಿಂಬಹುನಾ, ಅದಕ್ಕೂ ಹೆಚ್ಚು ಪ್ರಮಾಣದಿಂದ ಆ ಜಿಲ್ಲೆಯು ವನ ಪಶುಗಳ ಸಂಬಂಧದಲ್ಲಿ ಯೆಲ್ಲಕ್ಕೂ ಮೇಲಾಗಿರುತ್ತದೆ. ಅನ್ಯ ಪ್ರದೇಶಗಳಲ್ಲಿ ಯಾವ ಮೃಗಗಳ ಹೆಸರು ಸಹ ಗೊತ್ತಿಲ್ಲವೋ, ಅಂಥಾ ಮೃಗಗಳು ಕಾನಡಾ ಜಿಲ್ಲೆಯ ಅಡವಿಯಲ್ಲಿ ಬುನಾದಿಯಿಂದ ಮನೆ ಮಾಡಿಕೊಂಡು ವಾಸಿಸುತ್ತವೆಂದು ಈ ಕೆಳಗಿನ ವಿವರದಿಂದ ತಿಳಿಯುವದು.

**ಆನೆಗಳು.**— ಪೂರ್ವದಲ್ಲಿ ಕಾಡಾನೆಗಳ ಹಿಂಡುಗಳು ಮೈಸೂರು ಶೀಮೆಯಿಂದ ಬಂದು ಯಲ್ಲಾಪುರದ ವರೆಗೆ ಅಡವಿಯಲ್ಲಿ ತಿರುಗಾಡುವವು. ಆದರೆ ಸನ್ ೧೮೬೮ರಿಂದಿತ್ತ ಇವು ಬರುವದಿಲ್ಲ.

**ಹುಲಿಗಳು.**— ಮೂವತ್ತು ವರ್ಷಗಳ ಹಿಂದೆ ವಿಜಾಪುರದ ಹೊರ್ತು ಮೂರು ಜಿಲ್ಲೆಗಳಲ್ಲಿ ಹುಲಿಯ ಉಪದ್ರವವಿತ್ತು. ಆದರೆ ಸರಕಾರದವರು ಹುಲಿ ಹೊಡಿಯುವವರಿಗೆ ಇನಾಮು ಕೊಡುವ ಕಾರಣ ಆ ಉಪದ್ರವವು ಈಗ ಬಹಳ ಕಡಿಮೆಯಾಗಿದೆ. ಆದರೂ ಖಾನಾಪುರ ತಾಲೂಕಿನಲ್ಲಿ ಈಗ್ಯೂ ಅಲ್ಪ ಸ್ವಲ್ಪ ಹುಲಿಗಳನ್ನು ಕಾಣಬಹುದು. ಧಾರವಾಡ, ಕಲಘಟಗಿ, ಬಂಕಾಪುರ, ಹಾನಗಲ್ಲು ತಾಲೂಕುಗಳಲ್ಲಿ ವಿಶೇಷವಾಗಿ ಮಳೆಗಾಲದಲ್ಲಿ ಹುಲಿಗಳು ಬರುತ್ತವೆ. ಬಾದಾಮಿ, ಹುನಗುಂದುಗಳ ನೆರೆಯಲ್ಲಿ ಸಣ್ಣ ಕುಲದ ಹುಲಿಗಳು ವೊಮ್ಮೊಮ್ಮೆ ದೃಷ್ಟಿಗೆ ಬೀಳುತ್ತವೆ. ಕಾನಡಾ ಜಿಲ್ಲೆಯ ದಟ್ಟಾದ ಅಡವಿಯುಳ್ಳಂಥ ನದೀ ತೀರದಲ್ಲಿಯೂ, ಬಳ್ಳಿ ಮುಳ್ಳುಗಳಿಂದ ತುಂಬಿ ಕೊಂಡಂಥ ನಡುಗಡ್ಡೆಗಳಲ್ಲಿಯೂ ಹುಲಿಗಳು ಇರುತ್ತವೆ. ಬಲಿತ ಹುಲಿಯು ಮೂಗಿನಿಂದ ಬಾಲದ ತುದಿಯ ವರೆಗೆ ಸುಮಾರು ೧೦ ಫೂಟು ಉದ್ದವಿರುತ್ತದೆ. ಹೆಣ್ಣು ಸ್ವಲ್ಪ ಕಡಿಮೆ. ಚಳಿಗಾಲದಲ್ಲಿ ಹುಲಿಗಳು ಕಟ್ಟುತ್ತವೆಂದು ಅಡವಿಯಲ್ಲಿ ತಿರುಗಾಡುವ ಜನರು ಹೇಳುತ್ತಾರೆ. ಆದರೆ ಹತ್ತೆಂಟು ದಿವಸದ ಮರಿಗಳನ್ನು ಯೆಲ್ಲ ಋತುಗಳಲ್ಲಿ ಕಂಡವರು ಬಹು ಜನರುಂಟು. ಸುಮಾರು ೩ ವರ್ಷಕ್ಕೊಮ್ಮೆ ೪, ೫ ಮರಿಗಳ ವರೆಗೆ ಹುಲಿಯು ಈಯುತ್ತದೆಂದು ತೋರುತ್ತದೆ. ಈದ ಬಳಿಕ ೨, ೩ ವಾರಗಳ ವರೆಗೆ ತಾಯಿಯು ಮರಿಗಳನ್ನು ಕಾಯುತ್ತ ಅವುಗಳ ಬಳಿಯಲ್ಲಿಯೇ ಇರುತ್ತದೆ. ಮುಂದೆ ಮರಿಗಳು ತಾಯಿಯಷ್ಟು ದೊಡ್ಡವಾಗುವ ವರೆಗೆ ತಾಯಿಯ ಸಂಗಡ ತಿರುಗುತ್ತವೆ. ಕಾಡ ಕೋಣ, ಕಾಡ ಹಂದಿ, ಚಿಗರಿ, ಇವೇ ಹುಲಿಯ ಮುಖ್ಯ ಆಹಾರವು. ಈ ಪಶುಗಳು ಕಾನಡಾ ಅಡವಿಯಲ್ಲಿ

ಈಗ ಬಹಳ ದೊರೆಯುವದಿಲ್ಲಾದ ಕಾರಣ ಹುಲಿಗಳು ದನಗಳನ್ನು ಹಿಡಿದು ತಿನ್ನುತ್ತವೆ. ಅವು ತಮ್ಮ ತಮ್ಮೊಳಗೆ ಜಗಳಾಡಿ ವೊಂದು ಹುಲಿಯು ಮತ್ತೊಂದನ್ನು ಕೊಂದು ತಿನ್ನುವದುಂಟು. ಅಡವಿಯಲ್ಲಿ ಸತ್ತು ಬಿದ್ದಂಥ ಹೆಣಗಳನ್ನು ಹುಲಿಗಳು ತಿನ್ನಲಿಕ್ಕೆ ಹೇಸುವದಿಲ್ಲ.

ಹುಲಿಯ ಶಿಕಾರಿಯು.—ಅಡವಿಯ ನೆರೆಹೊರೆಯ ಹಳ್ಳಿಗಳಲ್ಲಿ ಹುಲಿಯ ಶಿಕಾರಿಯನ್ನು ಆಡ ಬಲ್ಲಂಥ ಜನರು ಇರುತ್ತಾರೆ. ಯುರೋಪಿಯನ್ ಬೇಟೆಗಾರರು ಆ ಜನರನ್ನು ಕರೆಕೊಂಡು ಬೇಟೆಗೆ ಹೋಗುವರು. ಆ ಬೇಟೆಗಾರರು ತಾವು ಮರದ ಮೇಲೆ, ಇಲ್ಲವೆ ಮರಕ್ಕೆ ಆನಿಶಿ ನಿಲ್ಲಿಸಿದ ನಿಚ್ಚಣಿಕೆಯ ಮೇಲೆ ನೆಲದಿಂದ ೧೬ ಫೂಟಗಿಂತ ಹೆಚ್ಚು ಯೆತ್ತರವಾಗಿ ಕೂತು, ಅಥವಾ ದೊಡ್ಡದೊಂದು ಮರದ ಹಿಂದಾಗಲಿ ಕಂಟಿಯ ಹಿಂದಾಗಲಿ ಅಡಗಿ ನಿಂತು ಹುಲಿಯ ಮಾರ್ಗ ಪ್ರತೀಕ್ಷೆ ಮಾಡುವರು. ಹುಲಿಯು ಯಾವದಾದರೂ ವೊಂದು ಪಶುವನ್ನು ಕೊಂದು ಅರ್ಧ ತಿಂದು ಉಳಿದದ್ದನ್ನು ಚಲ್ಲಿದಂಥ ಸ್ಥಳ ಹುಡುಕಿಕೊಂಡು ಅದರ ನೆರೆಯಲ್ಲಿ ಯುರೋಪಿಯನ್ನನು ಹೊಂಚಿಕೊಂಡು ನಿಲ್ಲುವನು. ಅವನು ತನ್ನ ಬಳಿಯಲ್ಲಿ ೨, ೩ ತುಂಬಿದ ತುಬಾಕಿಗಳನ್ನು ಇಟ್ಟುಕೊಳ್ಳುವನು. ಅವನ ಸಹಾಯಕರಾದ ದೇಶೀ ಬೇಟೆಗಾರರು ಹುಲಿಯು ಮಲಗಿದ ಸ್ಥಳವನ್ನು ಹುಡಿಕಿ ತೆಗಿದು ಅದನ್ನು ಸುತ್ತುಗಟ್ಟಿಕೊಂಡು, ಯುರೋಪಿಯನ್ ಬೇಟೆಗಾರನ ತನಕ ನಡುವೆ ಹುಲಿಗೆ ಮಾರ್ಗವಿಟ್ಟು, ಯೆರಡೂ ಬದಿಗಳಲ್ಲಿ ಮರಗಳ ಮೇಲೆ ಯೇರಿ ಕೂಡ್ರುವರು. ಇಷ್ಟೆಲ್ಲ ವ್ಯವಸ್ಥೆಯನ್ನು ಯೆಷ್ಟು ಮಾತ್ರವೂ ಸಪ್ಪಳ ಮಾಡದೆ ಮುಗಿಸಿಕೊಂಡ ಬಳಿಕ ದೇಶೀ ಬೇಟೆಗಾರರಲ್ಲಿ ಮುಖ್ಯಸ್ಥನು ಸನ್ನೆ ಮಾಡಿದ ಕೂಡಲೆ ಯೆಲ್ಲ ಜನರು ವೊಮ್ಮೇಲೆ ಕೂಗಾಟ ವೆಬ್ಬಿಸುವರು. ಅದರಿಂದ ಹುಲಿಯು ತನ್ನ ಸ್ಥಳ ಬಿಟ್ಟು ಯೆದ್ದು, ಕೂಗಾಟವಿಲ್ಲದ ದಿಕ್ಕಿಗೆ ಅಂದರೆ ಯುರೋಪಿಯನ್ ಬೇಟೆಗಾರನು ಅಡಗಿ ನಿಂತ ಸ್ಥಳದ ಕಡೆಗೆ, ಓಡುವದು. ಅದು ಗುಂಡಿನ ಆಹಾರದೊಳಗೆ ಬಂದ ಕೂಡಲೆ ಆ ಬೇಟೆಗಾರನು ಅದಕ್ಕೆ ಗುಂಡು ಹೊಡಿಯುವನು. ಒಂದು ಗುಂಡು ತಪ್ಪಿದರೆ ಮತ್ತೊಂದು, ಈ ಪ್ರಕಾರ ಮೂರು ಗುಂಡುಗಳೊಳಗೆ ಅವನು ಹುಲಿಯನ್ನು ಕೊಂದು ನೆಲಕ್ಕೆ ಕೆಡಹುವನು. ಗುಂಡು ಹಾರಿದ ಬಳಿಕ ಬೇಟೆಗಾರನು ಕೂತ ಸ್ಥಳವು ಹುಲಿಗೆ ತಿಳಿದರೆ, ಅದು ೧೫ ಫೂಟನವರೆಗೆ ಯೆತ್ತರವಾಗಿ ಹಾರಿ ಅವನನ್ನು ಹಿಡಿದೆಳೆಯಲಿಕ್ಕೆ ಹವಣಿಸುವದು. ಕಾನಡಾ ಜಿಲ್ಲೆಯಲ್ಲಿ ವರ್ಷಕ್ಕೆ ಸುಮಾರು ೮೦೦ಗಿಂತ ಹೆಚ್ಚು ದನಗಳನ್ನು ಹುಲಿಗಳು ಕೊಲ್ಲುತ್ತವೆ.

ಅಡವಿಯಲ್ಲಿ ಹುಲಿಯನ್ನು ಕಂಡ ಕೂಡಲೆ ಮಂಗಗಳು ಚೀರಾಡ ಹತ್ತುತ್ತವೆ.

ಶಿವಂಗಿಗಳೂ ಚಿರ್ಚಗಳೂ.—ಕಾನಡಾ ಜಿಲ್ಲೆಯ ಅಡವಿಯಲ್ಲಿ ಹುಲಿಯ ಜಾತಿಯ ಸಣ್ಣ ಮೃಗಗಳು ವಿಪುಲವಾಗಿ ಇರುತ್ತವೆ. ಅವುಗಳಿಗೆ ಶಿವಂಗಿ ಇಲ್ಲವೆ ಚಿರ್ಚ ಯೆಂದೆನ್ನುವರು. ಇವುಗಳ ಸ್ವಭಾವ, ಆಹಾರ, ಈಯುವ ಕಾಲ, ಮರಿಗಳನ್ನು ಸಂರಕ್ಷಿಸುವ ರೀತಿ ಯಾವತ್ತು ಹುಲಿಗಳಂತೆ; ಒದರುವ ಸ್ವರ ಮಾತ್ರ ಬೇರೆ. ಈ ಪಶುಗಳು ನೀರು ಕುಡಿಯುವದಿಲ್ಲೆಂದು ಹೇಳುತ್ತಾರೆ. ಬೇಟೆಗಾರರು ಹುಲಿಯಂತೆ ಚಿರ್ಚ

ಶಿವಂಗಿಗಳ ಬೇಟೆಯನ್ನು ಆಡುವರು. ಸರಕಾರದವರು ಹುಲಿ, ಶಿವಂಗಿ, ಚಿರ್ಚುಗಳನ್ನು ಕೊಂದವರಿಗೆ ಇನಾಮು ಕೊಡುತ್ತಾರೆ. ಧಾರವಾಡ, ಬೆಳಗಾವೀ ಜಿಲ್ಲೆಗಳ ಪಶ್ಚಿಮ ತಾಲೂಕುಗಳ ಅಡವಿಯಲ್ಲಿಯೂ, ಹುನಗುಂದ ಬಾದಾವಿಗಳ ಅಡವಿಯಲ್ಲಿಯೂ ಶಿವಂಗಿ ಚಿರ್ಚುಗಳು ಅಲ್ಪ ಸ್ವಲ್ಪ ಇರುತ್ತವೆ. ಬೈಲು ಶೀಮೆಯಲ್ಲಿ ಗೋಕಾವಿ, ನರಗುಂದಗಳ ನೆರೆಯಲ್ಲಿ ಚಿರ್ಚುಗಳನ್ನು ಕಾಣ ಬಹುದು.

ಅಡವೀ ಬೆಕ್ಕು.—ಇದರ ಆಕಾರವು ಚಿರ್ಚಿನ ಹಾಗೇ ಇರುತ್ತದೆ; ಆದರೆ ೩ ಫೂಟಗಿಂತ ಹೆಚ್ಚು ಉದ್ದವಿರುತ್ತದೆ. ಕಾನಡಾ ಜಿಲ್ಲೆಯ ಅಡವಿಯಲ್ಲಿ ಇವು ಅಪರೂಪ ವಾಗಿ ಇರುತ್ತವೆ. ಆದರೆ ಬೆಳಗಾವಿ ಧಾರವಾಡ ಜಿಲ್ಲೆಗಳಲ್ಲಿ ಇವುಗಳ ಉಪದ್ರವವು ಹೆಚ್ಚಿರುತ್ತದೆ. ಕಿರಿ ಅಡವಿಯಲ್ಲಿ ಕಾಡು ಬೆಕ್ಕುಗಳು ವಿಶೇಷವಾಗಿ ವಾಸಿಸುತ್ತವೆ.

ಕತಿಗಿರಬು (ತರಸ).—ಇವನ್ನು ಕಾನಡಾ ಜಿಲ್ಲೆಯ ಅಡವಿಯಲ್ಲಿಯೂ ದಕ್ಷಿಣ ಭಾಗದ ಉಳಿದ ಮೂರು ಜಿಲ್ಲೆಗಳ ಅಡವಿಯ ಪ್ರದೇಶಗಳಲ್ಲಿಯೂ ಕಾಣ ಬಹುದು. ಇದು ಬಹಳ ಧೈರ್ಯವುಳ್ಳ ಮೃಗವಲ್ಲ, ಬೇಗ ಓಡಲಿಕ್ಕೂ ಅರಿಯದು; ಆದರೂ ಕೋಣ, ಕುರಿ, ನಾಯಿಗಳನ್ನು ಹಿಡಿದು ತಿನ್ನುತ್ತದೆ.

ತೋಳಗಳು.—ಕಾನಡಾ ಜಿಲ್ಲೆಯ ಅಡವಿಯಲ್ಲಿ ಇಲ್ಲ. ಆದರೆ ಕಲಘಟಗಿ, ಕರ್ಜಗಿ, ಕೋಡ ತಾಲೂಕುಗಳಲ್ಲಿಯೂ, ಬೆಳಗಾವೀ ಜಿಲ್ಲೆಯ ಪೂರ್ವ ಭಾಗದಲ್ಲಿಯೂ ವಿಜಾಪುರ ಜಿಲ್ಲೆಯ ದಕ್ಷಿಣ ಭಾಗದಲ್ಲಿಯೂ ಇವುಗಳ ಉಪದ್ರವವು ಬಹಳ ಇರುತ್ತದೆ.

ಕಾಡು ನಾಯಿ (ಕೋಳಸುಂದಾ).—ಇವು ಕಾನಡಾ ಜಿಲ್ಲೆಯ ಅಡವಿಯಲ್ಲಿ ಹಿಂಡುಗಟ್ಟಿ ತಿರುಗುತ್ತವೆ. ಇವುಗಳ ಹಿಂಡಿಗೆ ಚಿರ್ಚುಗಳೂ ಹುಲಿಗಳೂ ಹೆದರುತ್ತವೆ. ಈ ಹಿಂಡುಗಳು ಮನುಷ್ಯರನ್ನೂ ಹುಲಿಗಳನ್ನೂ ಕೊಲ್ಲುತ್ತವೆಂದು ಹೇಳುತ್ತಾರೆ. ಇವು ಧಾರವಾಡ ಬೆಳಗಾವೀ ಜಿಲ್ಲೆಗಳ ಪಶ್ಚಿಮ ಅಡವಿಯಲ್ಲಿಯೂ ಬರುತ್ತವೆ; ಆದರೆ ಕಾನಡಾ ಜಿಲ್ಲೆಯ ಅಡವಿಯೇ ಇವುಗಳ ಮನೆಯೆಂದು ಹೇಳ ಬಹುದು.

ನರಿಗಳು ಎಲ್ಲ ಕಡೆಯಲ್ಲಿ ಇರುತ್ತವೆ. ಆದರೆ ಸಣ್ಣ ಕೆಂಪು ನರಿಯು ಕಾನಡಾ ಜಿಲ್ಲೆಯಲ್ಲಿ ಇಲ್ಲ; ಉಳಿದ ಮೂರು ಜಿಲ್ಲೆಗಳಲ್ಲಿ ಇದನ್ನು ಕಾಣಬಹುದು.

ಮುಳ್ಳ ಹಂದಿ ಯೆಂಬ ಮೃಗವು ಕಾನಡಾ ಅಡವಿಯಲ್ಲಿ ವಿಶೇಷ, ಬೇರೆ ಕಡೆ ಯಲ್ಲಿ ಅಷ್ಟಿಲ್ಲ.

ಪುನಗಿನ ಬೆಕ್ಕು.—ಖಾನಾಪುರ ಗೋಕಾವಿ ತಾಲೂಕುಗಳಲ್ಲಿ ಇವು ಅಪರೂಪವಾಗಿ ದೃಷ್ಟಿಗೆ ಬೀಳುತ್ತವೆ.

ಕರಡಿಯು.—ಇದು ಕಾನಡಾ ಅಡವಿಯಲ್ಲಿಯೂ ಅದಕ್ಕೆ ಹೊಂದಿರುವ ಧಾರ ವಾಡ ಬೆಳಗಾವೀ ಜಿಲ್ಲೆಗಳ ಅಡವಿಗಳಲ್ಲಿಯೂ ಇರುತ್ತದೆ. ವಿಜಾಪುರ ಜಿಲ್ಲೆಯಲ್ಲಿ ಕಡಿಮೆ. ಆದರೆ ಕರಡಿಗಳು ಕಡಿಮೆಯಾಗುತ್ತ ನಡಿದವೆ. ಇದರ ಯೆತ್ತರ ೩ ಫೂಟು ಉದ್ದಳತೆ ೫ ಫೂಟು. ಸರ್ತಿಗೆ ೨, ೩ ಮರಿಗಳನ್ನು ಈಯುವದು, ಮತ್ತೂ ಆ ಮರಿ ಗಳನ್ನು ತನ್ನ ಬೆನ್ನ ಮೇಲೆ ಕೂಡ್ರಿಸಿ ಕೊಂಡು ತಿರುಗಾಡುವದು. ಕರಡಿಯು ಬಹುತರ

ಮಾಂಸ ತಿನ್ನುವದಿಲ್ಲ; ಗೊರ್ಲಿಗಳನ್ನೂ ಮರಗಳಲ್ಲಿಯ ಕೀಟಕಗಳನ್ನೂ ಕೆದರಿ ತೆಗಿದು ತಿನ್ನುವದು. ಹಲಸಿನ ಕಾಯಿ, ಕಕ್ಕೀ ಕಾಯಿಗಳು ಅದರ ಪ್ರೀತಿಯ ಆಹಾರವು. ಕರಡಿಗಳು ಈಚಲಶರೆಯನ್ನು ಪ್ರೀತಿಯಿಂದ ಕುಡಿಯುತ್ತವೆ. ಕರಡಿಗಳು ಕಾರಣವಿಲ್ಲದೆ ಮನುಷ್ಯರನ್ನು ಕೊಲ್ಲಲಿಕ್ಕೆ ಹೆದರುವದಿಲ್ಲ. ಹುಲಿಯಂತೆ ಕರಡಿಯ ಬೇಟೆಯನ್ನು ಆಡುವರು: ಬೆಳಿಗ್ಗಾಗಲಿ ಸಂಜೆಗಾಗಲಿ ಅದರ ಗವಿಯ ಬಾಗಿಲಲ್ಲಿ ಹೊಂಚಿಕೊಂಡು ಕೂತು ಅದನ್ನು ಹೊಡಿಯ ಬಹುದು.

ಯೇದು.—ಧಾರವಾಡ, ಬೆಳಗಾವಿ, ಕಾನಡಾ ಜಿಲ್ಲೆಗಳ ಕಿರಿ ಅಡವಿಯುಳ್ಳ ಗುಡ್ಡದ ಶೀಮೆಯಲ್ಲಿಯೂ ವಿಜಾಪುರದ ನೆರೆಯಲ್ಲಿಯೂ ಬಹಳ. ಇದರ ಗಣಿಗಳು ಬರಿಯಲಿಕ್ಕೂ ಔಷಧಕ್ಕೂ ಬರುತ್ತವೆ.

ಕಾಡುಕೋಣ.—ಇದು ಕಾನಡಾ ಜಿಲ್ಲೆಯಲ್ಲಿ ವಿಶೇಷವಾಗಿ ಇರುತ್ತದೆ. ಬೆಳಗಾವೀ ಜಿಲ್ಲೆಯಲ್ಲಿ ಅಪರೂಪ, ಧಾರವಾಡ ವಿಜಾಪುರ ಜಿಲ್ಲೆಗಳಲ್ಲಿ ದುರ್ಲಭ. ಇದರ ಯೆತ್ತರ ಸುಮಾರು ೬ ಪೂಟು. ಬಲಿತ ಕೋಣನ ಬಣ್ಣ ಕಪ್ಪು; ಆದರೆ ಹೊಟ್ಟೆಯ ಮೇಲೂ ಮೊಣಕಾಲ ಕೆಳಗೂ ಬೆಳ್ಳಿಗೆ, ಮೈ ಮೇಲೆ ಕೂದಲು ಬಹುಶಃ ಇರುವದಿಲ್ಲ. ಕಾಡೆಮ್ಮೆಗಳು ಅಷ್ಟು ಕಪ್ಪಲ್ಲ. ಕೋಣಗಳಂತೆ ಅವಕ್ಕೂ ಕೆಳಭಾಗದಲ್ಲಿ ಬಿಳೆಬಣ್ಣವಿರುತ್ತದೆ. ಎರಡುಗಳ ಖುರಗಳು ಬಹಳ ಮೊಣಚು, ಮೋರೆಯ ಮೇಲೆ ಬಿಳೆಗಪ್ಪು, ಕೋಡಿನ ತುದಿ ಮೊಂಡ. ಕೋಣನ ಕೋಡುಗಳು ಉಂಗರಗಟ್ಟಿರುತ್ತವೆ. ೧೫, ೨೦ ಕಾಡೆಮ್ಮೆಗಳು ಹಿಂಡುಗಟ್ಟಿ ಮೇಯುತ್ತಿರುತ್ತವೆ. ಒಂದು ಹಿಂಡಿನಲ್ಲಿ ವೊಂದೆರಡು ಕೋಣಗಳು ಮಾತ್ರ ಇರುತ್ತವೆ. ಆದರೆ ಬಲಿತ ಕೋಣಗಳು ವ್ರೊಂಟಿಯಾಗಿ ತಿರುಗಲಿಕ್ಕೆ ಮೆಚ್ಚುತ್ತವೆ. ಚಳಿಗಾಲದಲ್ಲಿ ಕಾಡೆಮ್ಮೆಗಳು ಕಟ್ಟುತ್ತವೆ. ಆಗ ಬಲಿತ ಕೋಣಗಳನ್ನು ಯೆಮ್ಮೆಗಳ ಹಿಂಡಿನಲ್ಲಿ ಕಾಣ ಬಹುದು. ಈ ಪಶುಗಳು ಹುಲ್ಲು ಬಳ್ಳಿಗಳನ್ನು ಮೇಯುವವು; ನೆಲ್ಲೀಕಾಯಿ, ಬಿದರಿನ ಮೊಳಿಕೆ, ಬತ್ತದ ಹುಲ್ಲು, ಇವುಗಳನ್ನು ಬಹಳ ಪ್ರೀತಿಯಿಂದ ತಿನ್ನುತ್ತವೆ. ಬೇಟೆಗಾರರು ಹುಲಿಯಂತೆ ಕಾಡುಕೋಣಗಳ ಬೇಟೆಯಾಡುವರು.

ಕಡವಿ.—ಇದಾದರೂ ಕಾನಡಾ ಜಿಲ್ಲೆಯಲ್ಲಿ ಸಮೃದ್ಧಿಯಾಗಿರುತ್ತದೆ; ಬೆಳಗಾವಿಯ ಜಿಲ್ಲೆಯಲ್ಲಿ ಬಹು ಕಡಿಮೆ; ವಿಜಾಪುರದ ಜಿಲ್ಲೆಯಲ್ಲಿ ದುರ್ಲಭ; ಧಾರವಾಡ ಜಿಲ್ಲೆಯ ಕಲಘಟಗೀ ತಾಲೂಕಿನಲ್ಲಿ ವೊಮ್ಮೊಮ್ಮೆ ದೃಷ್ಟಿಗೆ ಬೀಳುತ್ತದೆ. ಕಡವಿಯು ಸುಮಾರು ಹದಿಮೂರು ಮೊಳ ಯೆತ್ತರವಿರುತ್ತದೆ. ಬಣ್ಣ ಹೊಗೆಗಪ್ಪು; ಬೆನ್ನ ಮೇಲೆ ಕೂದಲು ಬಹು ಕಡಿಮೆ. ಹೆಣ್ಣು ನಿಲುವಿಕೆಯಲ್ಲಿ ಸ್ವಲ್ಪ ಕಿರಿದು; ಬಣ್ಣವು ಬಿಳಿ ಛಾಯವುಳ್ಳದ್ದು. ಇವು ಚಳಿಗಾಲದ ಕಡೆಯಲ್ಲಿ ಕಟ್ಟುತ್ತವೆ. ಕಡವಿಗಳು ಹುಲ್ಲು ಬಳ್ಳಿಗಳನ್ನು ತಿನ್ನುವದಲ್ಲವೆ ನೆಲ್ಲೀಕಾಯಿ ಮುಂತಾದ ಫಲಗಳನ್ನೂ ತಿನ್ನುತ್ತವೆ. ಗಂಡು ಕಡವಿಯ ಕೋಡುಗಳು ಯೆರಡು ಮೂರು ವರುಷಕ್ಕೊಮ್ಮೆ ಕಳಚಿ ಬಿದ್ದು ಹೊಸ ಕೋಡುಗಳು ಚಿಗಿಯುತ್ತವೆ. ದೇಶೀ ಬೇಟೆಗಾರರು ನೀರಿನ ನೆರೆಯಲ್ಲಿ ತಗ್ಗು ಅಗಿದು, ಅದರೊಳಗೆ ಅಡಗಿ

ಕೂತು, ಕಡವಿಗಳೂ ಚಿಗರಿಗಳೂ ನೀರು ಕುಡಿಯಲಿಕ್ಕೆ ಬಂದಾಗ ಅವುಗಳಿಗೆ ಗುಂಡು ಹಾಕುತ್ತಾರೆ.

ಕಾಡಹಂದಿ.—ಧಾರವಾಡ, ಕಲಘುಟಗಿ, ನರಗುಂದ, ಹುನಗುಂದ, ಬಾದಾವಿಗಳ ನೆರೆಯ ಅಡವಿಗಳಲ್ಲಿ ಇರುತ್ತದೆ. ಕಾನಡಾ ಜಿಲ್ಲೆಯಲ್ಲಿಯೂ ಕಾಡಹಂದಿಯನ್ನು ಕಾಣಬಹುದು. ವಿಜಾಪುರ ಜಿಲ್ಲೆಯಲ್ಲಿ ವೊಳಗಡೆಯಲ್ಲಿ ಇವುಗಳ ಸಂಖ್ಯೆವು ಬೆಳೆಯುತ್ತ ನಡಿದದೆ.

ಚಿಗರೆಗಳು.—ಇವುಗಳಲ್ಲಿ ಹಲವು ಜಾತಿಗಳುಂಟು. ಸಾರಂಗವೆಂಬ ಚಿಕ್ಕೆಗಳುಳ್ಳ ಚಿಗರಿಯು ಕಾನಡಾ ಜಿಲ್ಲೆಯಲ್ಲಿ ವಿಪುಲ; ಬೆಳಗಾವಿ ಧಾರವಾಡಗಳಲ್ಲಿ ಕಡಿಮೆ; ವಿಜಾಪುರದಲ್ಲಿ ದುರ್ಲಭ. ಮೈ ಬಣ್ಣ ಹಳದಿ; ಮೈತುಂಬ ಬಿಳಿ ಚಿಕ್ಕೆಗಳು; ಬೆನ್ನ ಮೇಲೆ ಕರೆ ಪಟ್ಟೆ; ವೋರೆ ಕಪ್ಪು; ಗದ್ದ, ಗಂಟಲು, ನಾಲ್ಕು ಕಾಲುಗಳು ಬೆಳ್ಳಗೆ. ಮೂಗಿನಿಂದ ಬಾಲದ ವರೆಗೆ ಉದ್ದಳತೆ ಸುಮಾರು ನಾಲ್ಕೂವರೆ ಫೂಟು, ಯೆತ್ತರ ಹೆಗಲಿನಲ್ಲಿ ಸುಮಾರು ೩ ಫೂಟು; ಕೋಡಿಗೆ ವೊಂಬತ್ತರ ವರೆಗೆ ಟಿಸಿಲುಗಳಿರುತ್ತವೆ. ಮೂರು ವರ್ಷಕ್ಕೊಮ್ಮೆ ಹಳೆ ಕೋಡು ಹೋಗಿ ಹೊಸವು ಬರುತ್ತವೆ.

ಅಡವೀ ಕುರಿ ಯೆಂಬ ಚಿಗರೆಯ ವೋರೆಯ ಮೇಲೆ ಬರಕೀ ಯೆಲುಗಳಂತೆ ಯೆರಡೆರಡು ಗೆರೆಗಳಿರುತ್ತವೆ. ಇದು ಕಾನಡಾ ಬೆಳಗಾವೀ ಜಿಲ್ಲೆಗಳಲ್ಲಿ ವಿಪುಲ; ಧಾರವಾಡದಲ್ಲಿ ಕಡಿಮೆ; ವಿಜಾಪುರದಲ್ಲಿ ದುರ್ಮಿಲ. ಮೈಬಣ್ಣ ಹೊಲಸು ಹಳದಿ; ಕಾಲು ಬಾಲಗಳ ವೊಳ ಮೈ, ಗದ್ದ, ಬೆಳ್ಳಗೆ. ಉದ್ದಳತೆ ಮೂರುವರೆ ಫೂಟು; ಎತ್ತರ ೨೬ ಇಂಚು; ಕೋಡು ಸುಮಾರು ೯ ಇಂಚು. ಇದು ಹೆದರಿದಾಗ ನಾಯಿಯಂತೆ ಬೊಗಳುತ್ತದೆ. ಅಡವೀ ಕುರಿಯು ವೊಂಟಿಯಾಗಿರುವವೇ ಹೆಚ್ಚು; ಓಡುವಾಗ ವೋರೆ ಕೆಳಗೆ, ಹಿಂಭಾಗ ಮೇಲೆ ಆಗುವದು.

ಪಿಸಾಯಿ ಯೆಂಬ ಸಣ್ಣ ಜಾತಿಯು ಕಾನಡಾ ಬೆಳಗಾವೀ ಜಿಲ್ಲೆಗಳಲ್ಲಿ ಇರುತ್ತದೆ; ಧಾರವಾಡ ವಿಜಾಪುರಗಳಲ್ಲಿ ದುರ್ಮಿಲ. ಇದೂ ವೊಂಟಿಯಾಗಿ ಇರುವದು. ಬಣ್ಣ ಮೇಲ್ಭಾಗ ನಸುಗೆಂಪು, ಹಳದಿ; ಕೆಳಗೆ ಬೆಳ್ಳಗೆ; ಮಗ್ಗಲಿನ ಮೇಲೆ ಹಳದೀ ಚಿಕ್ಕೆಗಳು ಸಾಲಾಗಿರುತ್ತವೆ. ಉದ್ದಳತೆ ೨೨ ಇಂಚು, ಎತ್ತರ ಸುಮಾರು ೧೦ ಇಂಚು, ತೂಕ ಸುಮಾರು ೧೦ ಶೇರು.

ಕುರಂಜ (ಚೌಶಿಂಗ)ವೆಂಬ ಚಿಗರೆಯು ಕಾನಡಾ, ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲಿ ಅಲ್ಪ ಸ್ವಲ್ಪ ಉಂಟು; ವಿಜಾಪುರದಲ್ಲಿ ಇಲ್ಲ. ಇದರ ಓಡುವ ರೀತಿ ಅಡವೀ ಕುರಿಯಂತೆ; ಆದರೆ ಇದು ದಟ್ಟ ಅಡವಿಯಲ್ಲಿ ಇರುವದಿಲ್ಲ. ಬೆನ್ನ ಮೇಲೆ ಕಂದೀ ಬಣ್ಣ; ಹೊಟ್ಟೆ, ಕಾಲು ಕಿವಿಗಳ ಒಳ ಮೈ ಬಿಳುಪು; ವೋರೆ, ಮುಂಗಾಲು ಕಿವಿಗಳ ಅಂಚು ಕಪ್ಪು. ಉದ್ದಳತೆ ೪೦ ಇಂಚು; ಎತ್ತರ ೨ ಫೂಟು; ಕಿವಿ ನಾಲ್ಕೂವರೆ ಇಂಚು. ಕುರಂಜಕ್ಕೆ ನಾಲ್ಕು ಕೋಡುಗಳಿರುತ್ತವೆ. ಮುಂದಿನವೆರಡು ೪, ೫ ಇಂಚು, ಹಿಂದಿನವೆರಡು ವೊಂದೂವರೆ ಇಂಚು.

ಚಿನ್ನಕಾರವೆಂಬ ಜಾತಿಯು ಕಾನಡಾ ಜಿಲ್ಲೆಯಲ್ಲಿ ಇಲ್ಲ. ಉಳಿದ ಮೂರು ಜಿಲ್ಲೆಗಳಲ್ಲಿ ಅಪರೂಪವಾಗಿ ದೊರೆಯುವದು. ಈ ಮೃಗಗಳು ಬೈಲಿನಲ್ಲಿ ಹಿಂಡುಗಟ್ಟಿಕೊಂಡು ಇರುತ್ತವೆ. ಬೆನ್ನ ಮೇಲೆ ಹೊಲಸು ಕೆಂಬಣ್ಣ; ಗದ್ದ, ಎದೆ, ಕಾಲಿನ ಕೆಳಭಾಗ, ತಿಗ, ಇವೆಲ್ಲ ಬೆಳ್ಳಗೆ; ಬಾಲ, ನೆತ್ತಿ, ಮೊಣಕಾಲು ಕಪ್ಪು; ಕಣ್ಣಿನಿಂದ ಬಾಯಿಯ ವರೆಗೆ ಕಪ್ಪು ಬಣ್ಣವಿರುತ್ತದೆ. ಉದ್ದಳತೆ ಮೂರುವರೆ ಫೂಟು, ಎತ್ತರ ೨೬ ಇಂಚು. ಕೋಡು ೧೨ ಇಂಚು; ಬುಡದಲ್ಲಿ ಮುರಿಗೆಗಳಿರುತ್ತವೆ. ಹೆಣ್ಣಿನ ಕೋಡು ೬ ಇಂಚಿಗಿಂತ ಹೆಚ್ಚು ಇರುವದಿಲ್ಲ.

ಸಾಧಾರಣ ಚಿಗರೆಯು ಕಾನಡಾ ಹೊರ್ತಾಗಿ ಉಳಿದ ಯೆಲ್ಲ ಕಡೆಯಲ್ಲಿ ಬೈಲೊಳಗೆ ವಾಸಿಸುತ್ತದೆ. ಗಂಡೆರಳಿಯ ಬಣ್ಣ ಬೆನ್ನ ಮೇಲೆ ಅಚ್ಚಗರದು; ಹೊಟ್ಟೆ ಕಾಲುಗಳ ವೊಳಮೈ ಬೆಳ್ಳಗೆ; ಮೂಗು ತುಟಿಗಳೂ, ಕಣ್ಣಿನ ಸುತ್ತು ಮುತ್ತಲೂ ಬಿಳಿಪಿರುತ್ತದೆ. ಉದ್ದಳತೆ ಸುಮಾರು ೪ ಫೂಟು, ಎತ್ತರ ೩೨ ಇಂಚು, ಕಿವಿ ೫ ಇಂಚು, ಕೋಡು ೨೪ ಇಂಚು, ಕೋಡಿಗೆ ಮುರಿಗೆಗಳಿರುತ್ತವೆ. ಹೆಣ್ಣು ಸ್ವಲ್ಪ ಸಣ್ಣದು; ಅದಕ್ಕೆ ಕೋಡುಗಳಿಲ್ಲ, ಬೆನ್ನಿನ ಮೇಲೆ ಕೆಂಪು, ಹೊಟ್ಟೆ ಬೆಳ್ಳಗೆ. ಗಂಡೆರಳಿಗಳು ತಮ್ಮ ತಮ್ಮ ಹಿಂಡುಗಳನ್ನು ಸಂಬಾಳಿಸುವ ಸಂಬಂಧದಿಂದ ವೊಂದರಕೂಡೊಂದು ಕಾದುತ್ತಿರುವಾಗ ಮನುಷ್ಯರಿಗೆ ಹೆದರುವದಿಲ್ಲ. ಈ ಜಾತಿಯ ಚಿಗರೆಗಳನ್ನು ನಾಲ್ಕೂ ಜಿಲ್ಲೆಗಳಲ್ಲಿ ಕಾಣ ಬಹುದು.

ಮೊಲ.— ಇವು ಧಾರವಾಡ, ವಿಜಾಪುರ ಜಿಲ್ಲೆಗಳಲ್ಲಿ ವಿಶೇಷ. ಕಾನಡಾ, ಬೆಳಗಾವೀ ಜಿಲ್ಲೆಗಳಲ್ಲಿ ಅಷ್ಟಿಲ್ಲ. ಇವು ಕಂಟಿಗಳಲ್ಲಿಯೂ ಹೊದರುಗಳಲ್ಲಿಯೂ ಮನೆ ಮಾಡಿಕೊಂಡಿರುತ್ತವೆ; ಭೂಮಿಯಲ್ಲಿ ಬೆಳೆ ಇದ್ದಾಗ ಯೆಲ್ಲ ಕಡೆಯಲ್ಲಿ ತಿರುಗಾಡುವವು.

ಜೇನು ನೊಣ.— ಕಾನಡಾ ಜಿಲ್ಲೆಯ ಜೇನು ನೊಣಗಳಲ್ಲಿ ನಾಲ್ಕು ಜಾತಿಗಳುಂಟು. ಎಲ್ಲಕ್ಕೂ ದೊಡ್ಡದು ತೊಗರೀ ಜೇನು ನೊಣ. ಇದು ಶುಮಾರು ಮುಕ್ಕಾಲು ಇಂಚು ಉದ್ದವಿರುತ್ತದೆ. ಈ ನೊಣಗಳಿಗೆ ಶಿಟ್ಟು ಬಹಳ, ತಡವದಿದ್ದರೂ ಮನುಷ್ಯರನ್ನು ಮುತ್ತಿಕೊಂಡು ಕಡಿಯುವವು. ಇವು ತಮ್ಮ ಹುಟ್ಟುಗಳನ್ನು ಅತ್ಯುನ್ನತವಾದ ವೃಕ್ಷಗಳ ಮೇಲೆ, ನೆಲದಿಂದ ಸುಮಾರು ೧೫೦ ಫೂಟು ಯೆತ್ತರವಾಗಿ ಇಡುವವು. ಒಂದು ಮರದ ಮೇಲೆ ೨೦, ೩೦ ಹುಟ್ಟುಗಳಿರುತ್ತವೆ. ಗುಡ್ಡದ ಕಣಿವೆಯ ಮೇಲೆಯೂ ಮನುಷ್ಯರ ಕೈಗೆ ಬಾರದಂಥಲ್ಲಿ ಈ ಹುಟ್ಟುಗಳನ್ನು ಕಾಣಬಹುದು. ಇವು ಒಂದೇ ಸ್ಥಳದಲ್ಲಿ ವರ್ಷ ವರ್ಷ ಹೊಸ ಹುಟ್ಟುಗಳನ್ನು ಕಟ್ಟುವವು. ಒಂದು ಹುಟ್ಟು ಒಂದುವರೆ ಫೂಟನಿಂದ ೩ ಫೂಟನ ವರೆಗೆ ಉದ್ದಾಗಿಯೂ, ೮ ಇಂಚಿನಿಂದ ೨ ಫೂಟನ ವರೆಗೆ ದಪ್ಪಾಗಿಯೂ ಇರುವದು. ಈ ನೊಣಗಳು ಹೂಗಳಿಂದ ಮಧುವನ್ನು ತಂದು ಹುಟ್ಟಿನಲ್ಲಿ ಕೂಡಿ ಹಾಕುವವು. ಕಾರವೀ ಮರದ ಹೂ ಇವುಗಳಿಗೆ ಅತಿ ಪ್ರಿಯ. ಒಂದು ಪೂರಾ ತುಂಬಿದ ಹುಟ್ಟಿನೊಳಗೆ ೮ರಿಂದ ೧೫ ಸಿಸೆಗಳ ವರೆಗೆ ಜೇನತುಪ್ಪವೂ, ಸುಮಾರು ೨ ಪೌಂಡು ಮೇಣವೂ ಇರುವದು. ವರ್ಷಧಲ್ಲಿ ಯೆರಡು ಸಾರಿ, ವಸಂತ ಋತುವಿನಲ್ಲಿ ಮಳೆಗಾಲದ ಕಡೆಯಲ್ಲಿ, ಈ ನೊಣಗಳು ಜೇನತುಪ್ಪವನ್ನು ಕೂಡ ಹಾಕುತ್ತವೆ. ಹುಟ್ಟು

ಬಿಡಿಸುವವರು ಮೇ ತಿಂಗಳಲ್ಲಿಯೂ ನವಂಬರಿನಲ್ಲಿಯೂ ಹುಟ್ಟುಗಳನ್ನು ಹುಡುಕಲಿಕ್ಕೆ ಹೊರಡುವರು. ಅವರು ಉದ್ದನ್ನ ಡವಿಗೆಗ್ಗಳ ಟೊಂಗೆಗಳನ್ನು ಪಾವಟಗೆಗಳಂತೆ ನಾಲ್ಕಾರು ಬೊಟ್ಟು ಕಾದು ಕಡಿದು, ಆ ಡವಿಗೆಯನ್ನು ಹುಟ್ಟು ಇರುವ ಮರದ ಟೊಂಗಿಗೆ ಕಟ್ಟಿ, ನಿಲ್ಲಿಸಿ, ಕಗ್ಗತ್ತಲೆಯಲ್ಲಿ ಕೈಯೊಳಗೆ ಉರಿಯುವ ಚೂಡಿಗಳನ್ನು ಹಿಡುಕೊಂಡು ಡವಿಗೆಯ ಮೇಲೆ ಯೇರಿ ಹುಟ್ಟುಗಳನ್ನು ಸಮೀಪಿಸುವರು. ಅಲ್ಲಿ ತಲಪಿದ ಬಳಿಕ ಚೂಡಿಯನ್ನು ಹುಟ್ಟಿನ ಮೇಲೆ ಹಚ್ಚಿ ನೊಣಗಳನ್ನು ಓಡಿಸುವರು. ಅವರು ಮೈ ಮೇಲೆ ಕಂಬಳಿಯ ಮುಸುಕು ಹಾಕಿ ಕೊಂಡಿದ್ದಾಗ್ಯೂ ನೊಣಗಳು ಅವರನ್ನು ಕಡಿದು ಹೈರಾಣ ಮಾಡುತ್ತವೆ. ಯಾವತ್ತು ನೊಣಗಳು ಹಾರಿ ಹೋದ ಬಳಿಕ ಆ ಮನುಷ್ಯರು ಹುಟ್ಟುಗಳನ್ನು ತಕ್ಕೊಂಡು ಬುಟ್ಟಿಯೊಳಗೆ ಹಾಕಿ ಕೆಳಗೆ ಬರುವರು.

ಎರಡನೇ ತುಡಬೀ ನೊಣವೆಂಬ ಜಾತಿಯು ಸುಮಾರು ಅರ್ಧಾ ಇಂಚು ಉದ್ದವಿರುತ್ತವೆ. ಇವು ಮರಗಳ ತೊರ್‍ರೆಗಳಲ್ಲಿಯೂ ಹಳೆ ಗೋಡೆಗಳ ಮೇಲೆಯೂ ಹುಟ್ಟು ಕಟ್ಟುವವು. ಆ ಹುಟ್ಟು ಸಣ್ಣವು; ಒಂದರಲ್ಲಿ ಯೆರಡು ಮೂರು ಸಿಸೆಗಳಿಗಿಂತ ಹೆಚ್ಚು ಜೇನತುಪ್ಪವಿರುವದಿಲ್ಲ. ಆದರೆ ಈ ತುಪ್ಪವು ತೊಗರೀ ಜೇನಿಗಿಂತ ಮೇಲಾದದ್ದು. ಈ ನೊಣಗಳು ಬಹಳ ಕಡಿಯುವದಿಲ್ಲ. ಇವುಗಳನ್ನು ಹಗಲೇ ಹೊಗೆ ಹಾಕಿ ಓಡಿಸಿ ಹುಟ್ಟು ತಕ್ಕೊಳ್ಳುವರು.

ಮೂರನೇ ಕೋಳ ಜೇನು ತುಡಬೀ ಜೇನಿಗಿಂತ ಸಣ್ಣದು. ಇದು ಮುಳ್ಳಿನ ಸಣ್ಣ ಗಿಡಗಳ ಮೇಲೆ ಹುಟ್ಟು ಕಟ್ಟುತ್ತದೆ. ಅದರ ಹುಟ್ಟು ಬಹು ಸಣ್ಣದು. ಒಂದರೊಳಗೆ ಸುಮಾರು ಅಚ್ಛೇರಿಗಿಂತ ಹೆಚ್ಚು ತುಪ್ಪ ಹೊರಡುವದು ದುರ್ಲಭ. ಆದರೆ ಅದು ಹಿಂದಿನ ಯೆರಡೂ ಜಾತಿಗಳಿಗಿಂತ ಮೇಲಾದದ್ದು. ಈ ನೊಣಗಳು ಬಹಳ ಕಡಿಯುವದಿಲ್ಲ.

ನಾಲ್ಕನೇ ನುಸರೀ ಜೇನು ಯೆಲ್ಲಕ್ಕೂ ಸಣ್ಣದು, ಇವಾದರೂ ಮರಗಳ ತೊರ್‍ರೆಗಳಲ್ಲಿಯೂ ಹಳೆ ಗೋಡೆಗಳ ಮೇಲೆಯೂ ಹುಟ್ಟು ಕಟ್ಟುವವು. ಈ ಹುಟ್ಟಿನೊಳಗಿನ ತುಪ್ಪ ಬೆಳ್ಳಗಿರುವದು, ಮೇಣ ಕಪ್ಪು. ಈ ತುಪ್ಪವು ಔಷಧ ಮುಂತಾದ ಕೆಲಸಕ್ಕೆ ಯೆಲ್ಲಕ್ಕೂ ಮೇಲಾದದ್ದು. ಈ ನೊಣಗಳು ಕಡಿಯುವದಿಲ್ಲ, ಆದರೆ ಕಿವಿ ಮೂಗಿನೊಳಗೆ ಹೋಗಿ ಉಪದ್ರವ ಮಾಡಲಿಕ್ಕೆ ಹವಣಿಸುತ್ತವೆ.

ಸರಕಾರದವರು ಜೇನತುಪ್ಪ ಜಮೆ ಮಾಡುವ ಹಕ್ಕು ಪ್ರತಿ ವರ್ಷ ಲಿಲಾವಿನಿಂದ ಮಾರುವರು. ವರ್ಷಕ್ಕೆ ಸುಮಾರು ೧೧೦೩ ಖಂಡಗ ಜೇನತುಪ್ಪ ಜಮೆಯಾಗುತ್ತದೆ. ಅದರ ಬೆಲೆ ೪೭೭೮೦ ರೂಪಾಯಿ.

ಮೊಸಳೆಗಳೂ ನೀರ ನಾಯಿಗಳೂ.—ಕಾನಡಾ ಧಾರವಾಡ ಜಿಲ್ಲೆಗಳ ಹೊಳೆಗಳ ಮಡುವುಗಳಲ್ಲಿ ಈ ಜಂತುಗಳು ಬಹಳ ಇರುತ್ತವೆ.

ಹಾವು.—ಕಾನಡಾ ಜಿಲ್ಲೆಯಲ್ಲಿ ಯೆಲ್ಲ ಕಡೆಯಲ್ಲಿ ಹಾವಿನ ಉಪದ್ರವ ಬಹಳ. ಪ್ರತಿ ವರ್ಷ ಸರಾಸರೀ ಮಾನದಿಂದ ೧೪ ದನಗಳೂ ೨೧ ಜನ ಮನುಷ್ಯರೂ ಹಾವು ಕಡಿದು ಸಾಯುವರು. ಈ ಜಿಲ್ಲೆಯ ಸರ್ಪಗಳಲ್ಲಿ ಸವಿಷ ನಿರ್ವಿಷ ಯೆಂಬೆರಡು ಭೇದ

ಗಳುಂಟು. ಸವಿಷಗಳಲ್ಲಿ ನಾಗರ ಹಾವು ಮುಖ್ಯ. ಅದರಲ್ಲಿ ಕರೆ ಜಾತಿ, ಬಿಳೆ ಜಾತಿ, ಬೇರೆ ಬೇರೆಯುಂಟು. ಈ ಹಾವು ಕಡಿದ ಬಳಿಕ ನಾಲ್ಕೈದು ತಾಸಿನೊಳಗೆ ಮನುಷ್ಯನು ಸಾಯುತ್ತಾನೆ. ಬೇರೆ ವಿಷಯುಕ್ತ ಸರ್ಪಗಳು ಚಿಣಗೀ ಹಾವು (ಫುರ್ಸಾ), ಮಂಡೋಳ (ಘೋಣಸ) ನಾನೆತ (ಮಣಿಯಾರ), ಸುಂಕಪಾಳ, ಜೋಗಿ, ಸುರ್ಗಂಡ, ಅಜಗರ, ಮುಂತಾದವುಗಳು ಪ್ರಸಿದ್ಧ ಉಂಟು.

ನಿರ್ವಿಷ ಸರ್ಪಗಳಲ್ಲಿ ಹೆಬ್ಬಾವು ಶ್ರೇಷ್ಠ. ಇವಲ್ಲದೆ ಮಣ್ಣುಮುಕ್ಕ, ಧಿವಡ, ಧಾಮಣ, ಅಧೇಲಾ, ಹಸರು ಹಾವು, ಮುಂತಾದ ಜಾತಿಗಳು ಹಲವುಂಟು.

ಮೀನುಗಳು.— ಮುಂಡಗೋಡ ಮಹಾಲು, ಸುಪೇ ತಾಲೂಕು, ಇವೆರಡು ಹೊರ್ತಾಗಿ, ಕಾನಡಾ ಜಿಲ್ಲೆಯ ಶೀ ನೀರಲ್ಲಿಯೂ ಉಪ್ಪು ನೀರಿನಲ್ಲಿಯೂ ಮೀನುಗಳು ಸಮೃದ್ಧಿಯಾಗಿ ಇರುತ್ತವೆ. ಸಿದ್ದಾಪುರದ ನೈರುತ್ಯದಲ್ಲಿ ೬ ಮೈಲಿನ ಮೇಲೆ ಇರುವ ಭಾವನಗಿರಿ ಯೆಂಬ ಸರೋವರದೊಳಗಿನ ಮೀನುಗಳು ಪವಿತ್ರವೆಂದು ಯೆಣಿಸಲ್ಪಡುತ್ತವೆ. ಅವುಗಳನ್ನು ಯಾರು ಕೊಲ್ಲುವದಿಲ್ಲ; ಕೆಲವುಗಳ ಪಕಗಳಿಗೆ ಬಂಗಾರದ ಉಂಗುರಗಳನ್ನು ಹಾಕಿಸಿದ್ದಾರೆ. ಕಾರವಾಡದಲ್ಲಿ ಕರ್ಚ ಯೆಂಬ ಜಾತಿಯನ್ನು ಕೊಲ್ಲುವದಿಲ್ಲ. ಕೆರೆಗಳಲ್ಲಿಯ ಮೀನುಗಳು ಹೊಳೆಗಳಲ್ಲಿಯವುಗಳಿಗಿಂತ ದೊಡ್ಡವಿರುತ್ತವೆ. ಫೆಬ್ರುವಾರಿಯಿಂದ ಮೇ ವರೆಗೆ ಶೀ ನೀರಿನಲ್ಲಿ ಮೀನ ಹಿಡಿಯುವ ಕೆಲಸವು ಬಹಳ ನಡಿಯುತ್ತದೆ; ಆಗಟಂಬರಿನಿಂದ ಜನವರಿಯ ವರೆಗೆ ಯೆಲ್ಲಕ್ಕೂ ಕಡಿಮೆ. ಕಾನಡಾ ಜಿಲ್ಲೆಯಲ್ಲಿ ೧೯೩ ಜಾತಿಗಳ ಮೀನುಗಳು ದೊರೆಯುತ್ತವೆ. ಅವುಗಳಲ್ಲಿ ಗೊಬ್ಬರ ಮಚ್ಛಿ ಯೆಂಬ ಮೀನು ಯಲ್ಲಕ್ಕೂ ದೊಡ್ಡದು, ೧೨ ಫೂಟು ಉದ್ದ, ನಾಲ್ಕು ಫೂಟು ಅಗಲು ಇರುತ್ತದೆ. ಸಮುದ್ರದಲ್ಲಿ ಮೀನ ಹಿಡಿಯುವ ಕೆಲಸವು ನವೆಂಬರಿನಿಂದ ಫೆಬ್ರುವಾರಿಯ ವರೆಗೆ ಬಹಳ ನಡಿಯುತ್ತದೆ; ಮಳೆಗಾಲದಲ್ಲಿ ನಡಿಯುವದಿಲ್ಲ.

# ೩ನೇ ಭಾಗ — ನಿವಾಸಿಗಳು.

ಸನ್ ೧೮೮೧ನೇ ವರ್ಷದ ಖಾನೇಸುಮಾರಿಯಂತೆ, ಮುಂಬಯಿ ಕರ್ನಾಟಕ ಭಾಗದ ನಾಲ್ಕೂ ಜಿಲ್ಲೆಗಳ ಒಟ್ಟು ಜನಸಂಖ್ಯೆ ೨೮೦೭೨೫೪, ಚಚ್ಚೌಕು ಮೈಲಿಗೆ

ಸಂಖ್ಯೆ.

೧೪೮·೮ — ಒಟ್ಟು ಜನಸಂಖ್ಯೆದಲ್ಲಿ ಗಂಡಸರು ೧೪೧೩೭೭೭ ಜನ, ಹೆಂಗಸರು ೧೩೯೩೪೭೭ ಜನ; ಅಥವಾ ನೂರರಲ್ಲಿ ಗಂಡಸರು ೫೦·೩೬, ಹೆಂಗಸರು ೪೯·೬೪ — ಒಟ್ಟು ಜನಸಂಖ್ಯೆದಲ್ಲಿ ಹಿಂದೂ ಜನರು ೨೫೨೪೯೦೦ ಅಥವಾ ನೂರರಲ್ಲಿ ೯೦·೦೨ ಜನ; ಮುಸಲ್ಮಾನರು ೨೬೦೩೩೨ ಅಥವಾ ನೂರರಲ್ಲಿ